SAPTHAGIRI(KANNADA)
ILLUSTRATED MONTHLY
Volume:01, Issue:11, Pages:56
June-2022,Price Rs.5/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಜೂನ್ 2022
ಬೆಲೆ ರೂ. 5/-



ವಜ್ರಕವಚ
(12-06-2022)

ಮುತ್ತಿನ ಕವಚ
(13-06-2022)

ಸ್ವರ್ಣ ಕವಚ
(14-06-2022)

ತಿರುಮಲೆ ಸ್ವಾಮಿಯವರ ಜ್ಯೇಷ್ಠಾಭಿಷೇಕ ಮಹೋತ್ಸವ
(12-06-2022 ರಿಂದ 14-06-2022)

**15-04-2022 ರಂದು ಒಂಟಿಮಿಟ್ಟ ಶ್ರೀಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸದ ಸಂದರ್ಭದಲ್ಲಿ ಕಲ್ಯಾಣೋತ್ಸವಕ್ಕೆ ಆಂಧ್ರಪ್ರದೇಶದ ವತಿಯಿಂದ ರೇಷ್ಮೆ ವಸ್ತ್ರಗಳನ್ನು, ಸಮರ್ಪಿಸುತ್ತಿರುವ ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಗೌ॥ ಶ್ರೀ ವೈ.ಎಸ್.ಜಗನ್‌ಮೋಹನ್‌ರೆಡ್ಡಿ ಯವರು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ. ಆಡಳಿತಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ದಂಪತಿಗಳು ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು**











# ಭಗವದ್ಗೀತೆ



ಕಥಂ ನಜ್ಞೇಯಮಸ್ಮಾಭಿಃ ಪಾಪಾದಸ್ಮಾನ್ನಿವರ್ತಿತುಮ್।
ಕುಲಕ್ಷಯಕೃತಂ ದೋಷಂ ಪ್ರಪಶ್ಯದ್ಭಿರ್ಜನಾರ್ದನ॥38॥

(ಶ್ರೀ ಮದ್ಭಗವದ್ಗೀತೆ - ಅಧ್ಯಾಯ 1, ಶ್ಲೋಕ -38)

ಆದರೆ ಓ ಜನಾರ್ದನ, ಕುಲನಾಶದ ದುರಂತವನ್ನು
ತಿಳಿದ ನಮಗೆ ಈ ಪಾಪದಿಂದ ಹಿಮ್ಮೆಟ್ಟಬೇಕೆಂದು
ತಿಳಿಯದಿರುವುದು ಹೇಗೆ?



ನೀನೇ ದೀನ ಜನ ಬಂಧು ದಯಾರಸಸಿಂಧು

ದಿವಿಜರ ಸಮುದಾಯವಿದ್ದರೇನು
ಅವನ ವ್ಯಾಳೆಗೆ ಒದಗಲಿಲ್ಲಾ
ಅವನಿ ವಲ್ಲಭ ಅವ್ಯಯನೆಂದರೆ
ಅವಸರಕ್ಕೊದಗಿ ಕಾಯ್ದೆ ಕೃಷ್ಣಾ


ಭೂತಪರಿವಾರ ವಿದ್ದರೇನು
ಆತನ ಅಭಂಗಕ್ಕೆ ಒದಗಲಿಲ್ಲ
ಪೂತಾತ್ಮ ಪುರುಷೋತ್ತಮನೆಂದರೆ
ಚಾತುರ್ಯದಿಂದ ಸಲಹಿದೆ ಕೃಷ್ಣಾ

ಚತುರಾಸ್ಯಾದಿಗಳು ಇದ್ದರೇನು
ಶ್ರುತಿಯ ಹಾನಿಗೆ ಒದಗಲಿಲ್ಲ
ಚತುರಾತ್ಮಾ ಸಿರಿಪತಿ ಉರಗಾದ್ರಿ
ಪತಿವಿಜಯವಿಠ್ಠಲನೆ ಕಾಯ್ದೆ ಕೃಷ್ಣಾ

- ಶ್ರೀ ವಿಜಯದಾಸರು

(ಹತ್ತನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಕಲಿಕ್ಷೋಭೋನ್ಮೀಲತ್ ಕ್ಷಿತಿಕಲುಷಕೂಲಂಕಷಜವೈಃ ಅನುಚ್ಛೇದೈರೇತೈರವಟತಟ ವೈಷಮ್ಯರಹಿತೈಃ।**

**ಪ್ರವಾಹೈಸ್ತೇ ಪದ್ಮಾಸಹಚರಪರಿಷ್ಕಾರಿಣಿ ಕೃಪೇ ವಿಕಲ್ಪಂತೇಽನಲ್ಪಾಃ ವೃಷಶಿಖರಿಣೋ ನಿರ್ಝರಗಣಾಃ ॥ ೯೯॥**

ಇಲ್ಲಿನವರೆಗೆ ಭಗವಂತನಲ್ಲಿರುವ ಹಲವು ಗುಣಗಳಿಗೂ ಭಗವಂತನಿಗೂ ಉಂಟಾಗುವ ಹಿರಿಮೆಯೆಲ್ಲವೂ ದಯೆಯ ಸಂಬಂಧದಿಂದಲೇ ಎಂದು ನಿರೂಪಿಸಿರುವರು. ಈ ದಶಕದ ಆರಂಭದಲ್ಲಿ "ಅಕೂಪಾರೈಃ" ಎಂಬ ಪದ್ಯದಿಂದ ಭಗವಂತನಲ್ಲಿ ಪ್ರಪತ್ತಿ ಮಾಡುವವರ ವಿಷಯದಲ್ಲಿ ದಯಾದೇವಿಯು ಪ್ರವಹಿಸುವ ರೀತಿಯನ್ನು ವರ್ಣಿಸುತ್ತಾ ದಯಾ ಪ್ರವಾಹವು ಭಗವಂತನಿಗಿಂತಲೂ ನಾಲ್ಕರಷ್ಟು ದೊಡ್ಡದೆಂದು ನಿರೂಪಿಸಿ, ಆ ಪ್ರವಾಹದಿಂದ ಅವಿದ್ಯೆ ಎಂಬ ಕರ್ಮಗಳೆಲ್ಲವೂ ನಾಶವಾಗುವುವೆಂಬುದನ್ನೂ ತಿಳಿಸಿರುತ್ತಾರೆ. ಈ ಪದ್ಯದಲ್ಲಿಯೂ ಅಂತಹ ದಯೆಯ ಹಿರಿಮೆಯನ್ನೇ ಸೊಗಸಾದ ದೃಷ್ಟಾಂತದಿಂದ ವರ್ಣಿಸುತ್ತಾರೆ.

ಈ ಪದ್ಯದಲ್ಲಿ ದಯೆಯನ್ನು ತಿರುಮಲೆಯಲ್ಲಿ ಪ್ರವಹಿಸುವ ಪ್ರವಾಹಗಳೊಡನೆ ಹೋಲಿಸಿ ವರ್ಣಿಸುತ್ತಾರೆ. ದಯೆಯೇ ಅಡಿಯಿಟ್ಟು ಬಂದಂತಿರುವ ಮಹಾಲಕ್ಷ್ಮಿಯೊಡನೆ ಯಾವಾಗಲೂ ಕೂಡಿರುವ ಶ್ರೀನಿವಾಸನ ದಯೆಯು ಅವನಿಗೆ ಒಂದು ಮುಖ್ಯವಾದ ಅಲಂಕಾರವಾಗಿರುವುದು. ಅಂತಹ ಈ ದಯೆಯು ನಾನಾಮುಖವಾಗಿ ಪ್ರವಹಿಸುತ್ತಿರುವುದು. ಆಗ ಆ ಪ್ರವಾಹದ ವೇಗದಿಂದ, ಕಲಿಕ್ಷೋಭೆಯಿಂದ ಅತ್ಯಂತ ಪಾಪಿಗಳಾಗಿರುವ ಜನಗಳ ಪಾಪಗಳ ಬುಡಸಹಿತವಾಗಿ ಕೊಚ್ಚಿಹೋಗುವುವು. ಅಂದರೆ, ಭಗವಂತನ ದಯೆಗೆ ವಿಷಯವಾದವರ ಪಾಪಗಳು ಸ್ವಲ್ಪವೂ ಉಳಿಯದಂತೆ ನಾಶವಾಗಿ ಬಿಡುವುವು. ಅಂತಹ ದಯಾಪ್ರವಾಹವುಳ್ಳ ಅವನಲ್ಲಿ ನಾವು ತಗ್ಗಿ ಶರಣಾಗತರಾಗಬೇಕು. ಅಲ್ಲದೆ, ದಯಾಪ್ರವಾಹವು ಇಂತಹ ಜಾಗದಲ್ಲಿಯೇ ಇಂತಹ ಕಾಲದಲ್ಲಿಯೇ ಪ್ರವಹಿಸುವುದೆಂಬ ನಿಯಮವಿಲ್ಲ. ವಿರಾಮವೇ ಇಲ್ಲದಂತೆ ಯಾವಾಗಲೂ ಪ್ರವಹಿಸುತ್ತಿರುವುದು. ಈ ವಿಷಯವು ಈಗಲೂ ಹಲವಾರು ಜನ ಸರ್ವಕಾಲಗಳಲ್ಲಿಯೂ ತಿರುಮಲೆಗೆ ಬರುವುದು, ತಮಗೆ ಅಭೀಷ್ಟವಾದ ಫಲಗಳನ್ನು ಪಡೆದು ಹೋಗುವುದು ಇವುಗಳನ್ನು ಪ್ರತ್ಯಕ್ಷವಾಗಿಯೇ ನೋಡುತ್ತಿರುವ ನಮಗೆ ಸ್ಪಷ್ಟವಾಗಿ ತಿಳಿದು ಬರುತ್ತದೆ. ಈ ದಯಾ ಪ್ರವಾಹವು ಹಳ್ಳ ತಿಟ್ಟುಗಳೆಂಬ ಭೇದವಿಲ್ಲದೆ ಎಲ್ಲಕಡೆಗಳಲ್ಲಿಯೂ ಒಂದೇ ವಿಧವಾದ ವೇಗದಿಂದ ಪ್ರವಹಿಸುತ್ತದೆ. ಅಂದರೆ, ಜಾತ್ಯಾದಿಗಳಿಂದ ಅತ್ಯಲ್ಪರೇ ಆಗಿರಲಿ, ಅತ್ಯುತ್ತಮರೇ ಆಗಿರಲಿ, ಎಲ್ಲರಲ್ಲಿಯೂ ಪಕ್ಷಪಾತವಿಲ್ಲದಂತೆ ವರ್ತಿಸಿ ತನ್ನ ಕಾರ್ಯವನ್ನು ಮಾಡುವುದು. ಈ ವಿಷಯವನ್ನು ಈ ದಶಕದಲ್ಲಿಯೇ ಕೆಲವು ಉದಾಹರಣೆಗಳಿಂದ ನಿರೂಪಿಸಿರುವರಲ್ಲವೆ! ಇದೇ ದಯಾಪ್ರವಾಹಕ್ಕೆ ಇರುವ ವೈಶಿಷ್ಟ್ಯ. ಹಾಗೆಯೇ ತಿರುಮಲೆಯಲ್ಲಿ ಪ್ರವಹಿಸುವ ಜಲಧಾರೆಗಳಿಗೂ ಮೇಲೆ ತಿಳಿಸಿರುವ ಗುಣಗಳಿರುವುದರಿಂದ ಅವುಗಳನ್ನು ದಯೆಗೆ ಸಮಾನವೆಂದು ಭಾವಿಸಬಹುದು. ಸಮಾನವಾದ ಪ್ರಯೋಜನವಿರುವೆಡೆಗಳಲ್ಲಿಯೇ 'ವಿಕಲ್ಪ' ವೆಂದು ಶಾಸ್ತ್ರಕಾರರು ತಿಳಿಸುವರು. ಈ ಜಲಧಾರೆಗಳೂ ಕೂಡ ತಮ್ಮ ವೇಗದಿಂದ ಭೂಮಿಯಲ್ಲಿರುವ ಸಮಸ್ತ ಕಲ್ಮಶವನ್ನೂ ಹೋಗಲಾಡಿಸವುವು. ಇವು ಕೇವಲ ಜಲ ಧಾರೆಗಳಲ್ಲದೆ ಪವಿತ್ರ ತೀರ್ಥಗಳಾಗಿರುವುದರಿಂದ ಜನರ ಪಾಪಗಳನ್ನೂ ಹೋಗಲಾಡಿಸುವುದೆಂಬುದರಲ್ಲಿ ಸಂಶಯವಿಲ್ಲ. ಇವುಗಳೂ ಕಾಲನಿಯಮವಿಲ್ಲದಂತೆ ಯಾವಾಗಲೂ ಪ್ರವಹಿಸುವುವು. ಬಹು ದೊಡ್ಡದಾಗಿರುವುದರಿಂದ ಹಳ್ಳತಿಟ್ಟುಗಳೆನ್ನದೆ ಎಲ್ಲ ಕಡೆಯಲ್ಲಿಯೂ ಪ್ರವಹಿಸುವುವು. ಹೀಗಿರುವುದರಿಂದಲೇ ಇವುಗಳನ್ನು ದಯೆಗೆ ಹೋಲಿಸಬಹುದು.

ದಯೆಯು ಉಪಮೇಯವಾಗಿರುವುದಕ್ಕೆ ಬದಲಾಗಿ ಉಪಮಾನವಾಗಿ ಕಲ್ಪಿತವಾಗಿರುವುದರಿಂದ ತಿರುಮಲೆಯಲ್ಲಿನ ಜಲಪ್ರವಾಹಗಳಿಗೆ ದಯೆಯಷ್ಟು ಪೂರ್ಣವಾದ ಗುಣಗಳು ಇಲ್ಲವೆಂಬುದೂ ದಯೆಯೇ ಅತ್ಯಂತ ಶ್ರೇಷ್ಠವಾದುದೆಂಬುದೂ ಸೂಚಿತವಾಗುತ್ತದೆ.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀಶುಭಕೃತ್ ನಾಮ ಸಂವತ್ಸರ
ಜ್ಯೇಷ್ಠ - ಆಷಾಢ ಮಾಸ ಸಂಚಿಕೆ

ಸಂಪುಟ - 01 ಜೂನ್ 2022 ಸಂಚಿಕೆ -11




## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ನಮ್ಮಾಳ್ವಾರ್ ಅಥವಾ ಶಠಾರಿ ಆಳ್ವಾರ್ | -ಡಾ॥ ಎಸ್. ನಂಜುಂಡಸ್ವಾಮಿ | 7 |
| ಹರಿಕಥಾಮೃತ ಸಾರ ಮಹಿಮೆ ಬಲು ಅಪಾರ | -ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ | 10 |
| ಮಹೈತರೇಯೋಪನಿಷತ್ (ಪುಸ್ತಕವಿಮರ್ಶೆ) | - ಕೆ.ಎಸ್. ರಾಮಮೂರ್ತಿ | 13 |
| ಧಾರ್ಮಿಕ ತಳಹದಿಯಲ್ಲಿ ಪರಿಸರ ರಕ್ಷಣೆ | -ಹನುಮಂತ ಮ. ದೇಶಕುಲಕರ್ಣಿ | 14 |
| ಸಂಗೀತ ಮತ್ತು ಆಧ್ಯಾತ್ಮ | -ಶ್ರೀಮತಿ. ಮಾಧುರಿ ದೇಶಪಾಂಡೆ | 16 |
| ವಿಶ್ವದ ವೈಕುಂಠ ಎಂಬ ನಂಬಿಕೆಗೆ ಪಾತ್ರವಾದ ಕ್ಷೇತ್ರ ಜಗನ್ನಾಥಪುರಿ | -ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 18 |
| ಶ್ರೀ ಪಾದರಾಜರ ಮಹಿಮೆಗಳು | -ಶ್ರೀಮತಿ. ಸುಮನ ಬದರಿನಾಥ್ | 20 |
| ಹೊಯ್ಸಳರ ಕಲಾ ಸಿರಿ ಹಾರನಹಳ್ಳಿ | - ಕೆಂಗೇರಿ ಚಕ್ರಪಾಣಿ | 23 |
| ಸೋರೆಕಾಯಿಯಿಂದ ಆರೋಗ್ಯ ಭಾಗ್ಯ | -ಡಿ.ಎಸ್. ಬದ್ರಿನಾಥ್ | 25 |
| ಸ್ವಾಸ್ಥ್ಯ ಜಗತ್ತಿಗೆ ಪಂಚಗವ್ಯ (ನವಮಿ ಗೋವಿಂದ) | -ಶ್ರೀಮತಿ. ಎನ್. ಪಾರ್ವತಿ | 31 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ. ಪೂರ್ಣ ಪ್ರಸಾದ್ ಸಿದ್ಧಾಂತಿ | 34 |
| ಶ್ರೀ ಪಾದರಾಜರು | - ಶ್ರೀಧರ ರಾಯಸಂ | 35 |
| 108 ವೈಷ್ಣವ ದಿವ್ಯಕ್ಷೇತ್ರಗಳು - ತಿರುಕ್ಕರಂಬನೂರ್ (ಉತ್ತಮರ್ ಕೋಯಿಲ್) | -ಶ್ರೀಮತಿ. ಸೂರ್ಯವಂಶಿ | 37 |
| ತಿ.ತಿ.ದೇ., ಪಂಚಗವ್ಯ ಉತ್ಪತ್ತಿಗಳು | - | 40 |
| ಶ್ರೀ ಪ್ರಸನ್ನವೆಂಕಟ ದಾಸಾರ್ಯ ವಿರಚಿತ "ದಯ ಮಾಡು - ದಯಮಾಡು ಶ್ರೀನಿವಾಸ" | - ಡಾ॥ ಸುಭಾಸ ಕಾಖಂಡಕಿ | 42 |
| ಸಂಸ್ಕೃತ ಕಲಿಯೋಣ | - ಮಹಾಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ | 43 |
| ತಿರುಮಲೆ ಕಾಲಾಮಾನಾಚರಣೆಗಳು | -ಶ್ರೀಮತಿ | 44 |
| ಆಳ್ವಾರುಗಳು ಕಂಡ ತಿರುವೇಂಗಡ | -ಎಂ.ಆರ್. ನರಸಿಂಹನ್ | 46 |
| ಶ್ರೀಮದ್ಭಗವದ್ಗೀತೆ | -ಶ್ರೀಮತಿ ಬಿ. ಪದ್ಮಜ | 48 |
| ಧರ್ಮ ಜಾಗೃತ ಮಾಡಿದ ವಿಜಯೇಂದ್ರ ತೀರ್ಥರು | -ಪ್ರಾಣೇಶ ಆರ್.ಎಚ್ | 50 |
| ನೀತಿ ಕಥೆ - ಪ್ರತ್ಯಕ್ಷದೈವ ಸೂರ್ಯನಾರಾಯಣ | | 51 |
| ಚಿತ್ರಕಥೆ - ನಮ್ಮಾಳ್ವಾರ್ | - ಡಿ. ಶ್ರೀನಿವಾಸದೀಕ್ಷಿತರು | 52 |
| ಕ್ವಿಜ್ | | 54 |


ಮುಖಚಿತ್ರ - ತಿರುಮಲೆ ಸ್ವಾಮಿಯವರ ಜ್ಯೇಷ್ಠಾಭಿಷೇಕ
ಹಿಂಬದಿಚಿತ್ರ - ಶ್ರೀಗೋವಿಂದರಾಜ ಸ್ವಾಮಿಯವರು, ತಿರುಪತಿ


**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ,.(ಎಫ್.ಎ.ಸಿ.)
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು, ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ. ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

**24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ**
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ವೀಕ್ಷಿಸಬಹುದು.

| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |



ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂ
ಪಾ
ದ
ಕೀ
ಯ

# ಶ್ರೀ ವೇಂಕಟೇಶ್ವರನ ಸೇವೆಯ ಹೂಗಳ ಪರಿಮಳ

ತಿರುಮಲೆಯ ಸಪ್ತಗಿರಿಗಳು ಸದಾ ನಿತ್ಯಕಲ್ಯಾಣ ಹಸಿರುತೋರಣವಾಗಿ ರಾರಾಜಿಸುತ್ತಿರುತ್ತದೆ. ಪ್ರತಿದಿನವೂ ಭಗವಂತನಿಗೆ ಬೆಳಗಿನ ಝಾವ ಪ್ರಾರಂಭವಾಗುವ ಸುಪ್ರಭಾತ ಸೇವೆಯಿಂದ ಹಿಡಿದೂ ರಾತ್ರಿ ಏಕಾಂತಸೇವೆಯವರೆಗೂ ನಿತ್ಯ,ವಾರ,ಪಕ್ಷ,ಮಾಸ, ಸಂವತ್ಸರ, ಉತ್ಸವಗಳಲ್ಲಿ ವಿವಿಧ ರೀತಿಯ ಹೂಗಳನ್ನು ವಿಧವಿಧವಾದ ಹೂಮಾಲೆಗಳನ್ನಾಗಿ ತಯಾರಿಸಿ, ಅಲಂಕರಿಸುತ್ತಾರೆ. ಆ ಹೂವುಗಳೆಲ್ಲವೂ ಅತ್ಯಂತ ಪರಿಮಳ ಭರಿತವಾಗಿದ್ದೂ ಅಲಂಕಾರಪ್ರಿಯನಾದ ಆ ದೇವದೇವನಿಗೆ ಮಹದಾನಂದವನ್ನುಂಟು ಮಾಡುತ್ತಿರುತ್ತವೆ.

ಶ್ರೀವೇಂಕಟೇಶ್ವರಸ್ವಾಮಿ ಪುಷ್ಪಾಲಂಕಾರಪ್ರಿಯ.ತಿರುಮಲೆಯ ಕ್ಷೇತ್ರ"ಪುಷ್ಪ ಮಂಟಪ" ಎನ್ನುವ ಪ್ರಸಿದ್ಧಿಗೆ ಬಂದಿರುವುದು ಅಲ್ಲಿನ "ಹೂವಿನ ಕಟ್ಟೆ"ಯ ಕಾರಣದಿಂದಲೇ ಎಂದರೆ ಅತಿಶಯೋಕ್ತಿಯಲ್ಲ.ಆ ನಿಟ್ಟಿನಲ್ಲಿ ಶ್ರೀವೇಂಕಟೇಶ್ವರಸ್ವಾಮಿಗೆ ನಿತ್ಯವೂ ನಡೆಯುವ ಹೂವಿನ ಸೇವೆಯಲ್ಲಿ "ಯಮುನೋತ್ತರೈ" ಎಂಬ ಹೆಸರಿನ ಮೂಲಕವೇ ಸಮರ್ಪಿಸುತ್ತಾರೆ.

"ಯಮುನೋತ್ತರೈ" ನೊಂದಿಗೆ ಸಂಬಂಧವಿರುವ ಹೆಸರಾಂತ ವ್ಯಕ್ತಿ ಎಂದರೆ ಅದು ಅನಂತಾಳ್ವಾರರು.

ಶ್ರೀಹರಿಯ ಪುಷ್ಪ ಸೇವೆಗೆ ತಿರುಮಲೆಯಲ್ಲಿ ಅನೇಕ ರೀತಿಯ ಪುಷ್ಪಜಾತಿಗಳಿಂದ ಕೂಡಿದ ನಂದನ ವನಗಳು, ದಿವ್ಯವನಗಳು ಅನೇಕವು ಇವೆ. ಈ ವನಗಳಲ್ಲಿ ವಿಕಸಿಸುವ ಹೂಗಳಿಂದಲೇ ಸ್ವಾಮಿಯ ಸೇವೆಗೆ ಹಾರಗಳನ್ನು ಕಟ್ಟಲಾಗುತ್ತವೆ. ತಿರುಮಲೆಯಲ್ಲಿನ ಭಗವಂತನಿಗೇ ಅಲ್ಲದೇ ಇತರ ದೇವತಾ ಮೂರ್ತಿಗಳಿಗೂ ಹೂಮಾಲೆಗಳನ್ನು ಇಲ್ಲಿ ತಯಾರಿಸಲ್ಪಡುತ್ತದೆ. ಹಾಗೆಯೇ ತಿ.ತಿ.ದೇ., ಅನುಬಂಧ ದೇವಾಲಯಗಳಲ್ಲಿನ ದೇವತಾಮೂರ್ತಿಗಳ ಸೇವೆಗಳಿಗೂ ಈ ಹೂಗಳನ್ನು ಸರಬರಾಜು ಮಾಡಲಾಗುತ್ತದೆ.

ಈ ರೀತಿ ಸೇವೆಗಾಗಿ ಅಲಂಕರಿಸಲ್ಪಟ್ಟ ಈ ಹೂಮಾಲೆಗಳ ನಿರ್ಮಾಲ್ಯವನ್ನು ತಿರುಮಲೆಯಲ್ಲಿರುವ "ಬಂಗಾರದ ಬಾವಿಗೆ" ಹಾಕುತ್ತಿದ್ದರು. ತಿರುಮಲೆಯ ಹೂಗಳು ಸ್ವಾಮಿಯ ಸೇವೆಗಾಗಿ ಮಾತ್ರವೇ ಮೀಸಲಾಗಿದೆ. ಇತರರಿಗೆ ನಿಷಿದ್ಧವಾಗಿದೆ. ಸ್ವಾಮಿಗೆ ಅಲಂಕರಿಸಲ್ಪಟ್ಟ ಹೂಗಳು ಭಕ್ತರಿಗೆ ನೀಡಲಾಗುವುದಿಲ್ಲ ಇದು ಇಲ್ಲಿನ ಸಂಪ್ರದಾಯ.

ಈ ರೀತಿ ಈ ಪುಷ್ಪ ನಿರ್ಮಾಲ್ಯವೆಲ್ಲವೂ ವೃಥಾ ಆಗಬಾರದೆಂಬ ಉದ್ದೇಶದಿಂದ ತಿ.ತಿ.ದೇ., ಒಂದು ಬೃಹತ್ ಯೋಜನೆಯನ್ನು ಹಮ್ಮಿಕೊಂಡಿದೆ. ಆ ಯೋಜನೆಯ ಅನ್ವಯ ಡ್ರೈಫ್ಲವರ್ ಟೆಕ್ನಾಲಜಿಯನ್ನು ಉಪಯೋಗಿಸಿ, ಫೋಟೋ ಫ್ರೇಮುಗಳು, ಕೀಚೈನ್‌ಗಳು, ಪೇಪರ್ ವೇಯಿಟ್ಸ್, ಡಾಲರ್‌ಗಳು, ಪೆನ್ನುಗಳು ಮತ್ತು ಪೆನ್ನು ಸ್ಟಾಂಡುಗಳನ್ನು ತಯಾರಿಸಿ ಬಿಡುಗಡೆ ಮಾಡಿದ್ದಾರೆ. ಈ ಉತ್ಪತ್ತಿಗಳೆಲ್ಲವೂ ತಿ.ತಿ.ದೇ ಪ್ರಧಾನ ಕೇಂದ್ರಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ಅವೆಲ್ಲವನ್ನೂ ಭಕ್ತರು ನೇರವಾಗಿಯೇ ಖರೀದಿಸಬಹುದಾಗಿದೆ.

ಈ ರೀತಿ ಭಗವಂತನ ಪುಷ್ಪಗಳ ನಿರ್ಮಾಲ್ಯದಿಂದ ತಯಾರುಮಾಡಿರುವ ಈ ವಸ್ತುಗಳನ್ನು ನಮ್ಮ ನಿವಾಸಗಳಲ್ಲಿ ಇರಿಸಿಕೊಂಡರೆ ಆ ಶ್ರೀನಿವಾಸನು ನಮ್ಮ ಮನೆಯಲ್ಲೇ ನೆಲೆಸಿ, ನಮ್ಮೊಂದಿಗೇ ಇರುವಂತಹಾ ಅನುಭವವಾಗುತ್ತದೆ. ಪ್ರಶಾಂತವಾದ ವಾತಾವರಣ, ಉತ್ತಮವಾದ ಮನಶ್ಯಾಂತಿಗಾಗಿ, ಮಾನಸಿಕ ಶಾರೀರಕ , ಆರೋಗ್ಯಕ್ಕೆ ಈ ಉತ್ಪತ್ತಿಗಳು ಕಾರಣವಾಗುತ್ತದೆನ್ನುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಭಕ್ತರೆಲ್ಲರೂ ಈ ಉತ್ತಮವಾದ ಅವಕಾಶವನ್ನು ಸದ್ವಿನಿಯೋಗ ಮಾಡಿಕೊಂಡು ಧನ್ಯರಾಗಬೇಕೆಂಬುದೇ ತಿ.ತಿ.ದೇ ಸಪ್ತಗಿರಿಯ ಮುಖ್ಯ ಉದ್ದೇಶವಾಗಿದೆ.

"ಓಂ ನಮೋ ವೇಂಕಟೇಶಾಯ"

# ನಮ್ಮಾಳ್ವಾರ್ ಅಥವಾ ಶಠಾರಿ ಆಳ್ವಾರ್

- ಡಾ॥ ಎಸ್. ನಂಜುಂಡಸ್ವಾಮಿ
7899011310



ದ್ರಾವಿಡದೇಶ ಅಥವಾ ತಮಿಳುನಾಡಿನ ಶ್ರೀವೈಷ್ಣವ ಪಂಥದ ಪರಮ ಭಕ್ತರಿಗೆ ಆಳ್ವಾರರೆಂದು ಹೆಸರು. ಆಳ್ವಾರ್ ಎಂದರೆ ಭಗವತ್ ಭಕ್ತಿಯಲ್ಲಿ ಆಳವಾಗಿ ಮುಳುಗಿದವರು ಎಂದು ಅರ್ಥ. ಶ್ರೀವೈಷ್ಣವ ಪರಂಪರೆಯಲ್ಲಿ ಒಟ್ಟು 12 ಜನ ಆಳ್ವಾರರು ಇದ್ದಾರೆ. ಇವರ ಕಾಲದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಪರಂಪರೆ ಹಾಗೂ ಸಂಪ್ರದಾಯದ ಪ್ರಕಾರ ಆಳ್ವಾರರುಗಳು ಮೂರು ನಾಲ್ಕು ಸಾವಿರ ವರ್ಷಗಳ ಹಿಂದಿನವರು ಎಂದು ನಂಬಿಕೆ. ಆದರೆ ಚಾರಿತ್ರಿಕ ಸಂಶೋಧನೆಯ ಪ್ರಕಾರ ಇವರು ಕ್ರಿ.ಶ.7ನೆಯ ಶತಮಾನದಿಂದ 9 ನೇ ಶತಮಾನದ ಅವಧಿಯಲ್ಲಿ ಇದ್ದರು (ಕ್ರಿ.ಶ. 600 ರಿಂದ 800) ಎಂಬುದು ವಿದ್ವಾಂಸರ ಅಭಿಪ್ರಾಯ.

## ನಾಲಾಯಿರ ದಿವ್ಯ ಪ್ರಬಂಧಗಳು

ಆಳ್ವಾರರುಗಳು ಭಗವಂತನ ಭಕ್ತಿಯಿಂದ ತಮ್ಮಲ್ಲಿ ಉಂಟಾದ ಅನುಭವವನ್ನು ಆನಂದವನ್ನು ಮಧುರವಾದ ಗೀತೆಗಳಲ್ಲಿ ಹಾಡಿದರು. ಇವುಗಳಿಗೆ ದಿವ್ಯ ಪ್ರಬಂಧವೆಂದು ಹೆಸರು. ದಿವ್ಯ ಪ್ರಬಂಧಗಳೆಲ್ಲವೂ ಸ್ಥಳೀಯ ತಮಿಳು ಭಾಷೆಯಲ್ಲಿಯೇ ರಚಿತವಾಗಿವೆ. ಇದರಿಂದ ಇವು ಬಹಳ ಸುಲಭವಾಗಿ ಜನಸಾಮಾನ್ಯರಲ್ಲಿ ಹರಡಲು ಕಾರಣವಾಯಿತು. ಒಟ್ಟು ನಾಲ್ಕು ಸಾವಿರ ದಿವ್ಯ ಪ್ರಬಂಧಗಳಿವೆ. ಇವುಗಳನ್ನು "ನಾಲಾಯಿರ ಪ್ರಬಂಧಗಳು" ಎಂದು ಹೇಳುತ್ತಾರೆ. ಒಬ್ಬೊಬ್ಬ ಆಳ್ವಾರರೂ ನಿಗದಿತ ಸಂಖ್ಯೆಯ ದಿವ್ಯ ಪ್ರಬಂಧಗಳನ್ನು ತಮ್ಮ ಇಷ್ಟ ದೈವವಾದ ವಿಷ್ಣು ಅಥವಾ ನಾರಾಯಣ ಮತ್ತು ಅವನ ಅವತಾರಗಳ ಮೇಲೆ ರಚಿಸಿದ್ದಾರೆ. ಆಳ್ವಾರರ ನಂತರ ಆಚಾರ್ಯ ಪರಂಪರೆಯಲ್ಲಿ ಬಂದ ನಾಥಮುನಿಗಳು, ಆಳ್ವಾರರ ಪ್ರಬಂಧಗಳನ್ನೆಲ್ಲಾ ಒಟ್ಟು ಗೂಡಿಸಿ, ವಿಷ್ಣು ದೇವಾಲಯಗಳಲ್ಲಿ ದೇವತಾರ್ಚನೆ ಸಮಯದಲ್ಲಿ ವೇದ ಮತ್ತು ಉಪನಿಷತ್ತುಗಳ ಜೊತೆಗೆ ಆಳ್ವಾರ್ ವಿರಚಿತ ದ್ರಾವಿಡ ಪ್ರಬಂಧಗಳನ್ನು ನಿತ್ಯವೂ ಪಠಿಸಬೇಕೆಂಬ ಕಟ್ಟಳೆಯನ್ನು ಮಾಡಿದರು. ಈ ಏರ್ಪಾಡು ಇಂದಿಗೂ ಅನೂಚಾನವಾಗಿ ನಡೆದುಕೊಂಡು ಬರುತ್ತಿದೆ. ಆಳ್ವಾರರ ದಿವ್ಯ ಪ್ರಬಂಧಗಳನ್ನು ದ್ರಾವಿಡವೇದ ಎನ್ನುತ್ತಾರೆ. ಉಭಯ ವೇದಾಂತ ಪ್ರವರ್ತನ ಸಭೆಗಳು ಇವೆ.

## ಹನ್ನೆರಡು ಜನ ಆಳ್ವಾರರುಗಳು

ಆಳ್ವಾರರುಗಳು ದಕ್ಷಿಣ ಭಾರತದಲ್ಲಿ ಅದರಲ್ಲೂ ಮುಖ್ಯವಾಗಿ ತಮಿಳುನಾಡಿನಲ್ಲಿ ಹರಿಯುವ ತಾಮ್ರಪರ್ಣಿ, ವೇಗೈ (ಕೃತಮಾಲ), ಪಾಲಾರ್ (ಪಯಸ್ವಿನಿ) ಮತ್ತು ಕಾವೇರಿ ನದಿ ತೀರದ ಪ್ರದೇಶಗಳ ಗ್ರಾಮಗಳಲ್ಲಿ ಜನಿಸಿದರು. ಇವರಲ್ಲಿ ಅಂತ್ಯಜರು, ವೆಳ್ಳಾಳರು, ಕಳ್ಳರು, ಬೇಡರು, ಬ್ರಾಹ್ಮಣರು ಹೀಗೆ ಎಲ್ಲ ಜಾತಿಯವರು, ವರ್ಗದವರು ಇದ್ದಾರೆ. ಎಲ್ಲರೂ ಪುರುಷರು, ಆದರೆ ಒಬ್ಬ ಮಹಿಳೆ (ಆಂಡಾಳ್) ಕೂಡಾ ಇದ್ದಾಳೆ. ಇವರಲ್ಲಿ ಒಬ್ಬರು ಕೇರಳ ದೇಶದ ರಾಜರಾಗಿದ್ದರು. ಇವರೆಲ್ಲರೂ ವರ್ಣಭೇದ, ಸ್ತ್ರೀಪುರುಷ ಭೇದ, ಪಂಡಿತ ಪಾಮರ ಭೇದ, ಆಳು ಅರಸ ಎಂಬ ಭೇದವನ್ನು ತೊರೆದು ಭಕ್ತಿ ಮತ್ತು ಶರಣಾಗತಿಯೇ (ಪ್ರಪತ್ತಿ) ಮುಕ್ತಿಗೆ ದಾರಿ ಎಂಬುದನ್ನು ತಮ್ಮ ಜೀವನ ಹಾಗೂ ನಡವಳಿಕೆಗಳ ಮೂಲಕ ತೋರಿಸಿ




ಕೊಟ್ಟರು.ಒಟ್ಟು ಹನ್ನೆರಡು ಜನ ಆಳ್ವಾರರುಗಳಿದ್ದಾರೆ. ಪೊಯ್‌ಗೆಯ್ ಆಳ್ವಾರ್, ಪೂತ (ಭೂತ)ತ್ತಾಳ್ವಾರ್, ಪೇಯಾಳ್ವಾರ್,ತಿರುಮಳಿಶೈ ಆಳ್ವಾರ್, ತಿರುಪ್ಪಾಣಾಳ್ವಾರ್, ತಿರುಮಂಗೈಆಳ್ವಾರ್, ಮಧುರಕವಿಆಳ್ವಾರ್, ನಮ್ಮಾಳ್ವಾರ್ ಇವರೇ ಆ ಹನ್ನೆರಡು ಜನರು.ಇವರಲ್ಲಿ ಆಂಡಾಳ್ ಅಥವಾ ಗೋದಾದೇವಿ ಮಾತ್ರ ಮಹಿಳೆ.

### ನಮ್ಮಾಳ್ವಾರ್ - ಶಠಾರಿ ಆಳ್ವಾರ್

ಆಳ್ವಾರ್ ಪರಂಪರೆಯಲ್ಲಿ ಕೊನೆಯವರಾದ ನಮ್ಮಾಳ್ವಾರ್ ಮತ್ತು ಮಧುರಕವಿಆಳ್ವಾರ್ ಅವರ ಜೀವನವು ಒಟ್ಟಿಗೇ ಬೆರೆತುಕೊಂಡಿವೆ. ಇಬ್ಬರೂ ಒಂದೇ ಕಾಲದವರು. ಬ್ರಾಹ್ಮಣರಾದ ಮಧುರ ಕವಿಗಳು ವೆಳ್ಳಾಲ ಜಾತಿಯ ನಮ್ಮಾಳ್ವಾರ್ ಅವರನ್ನೇ ತಮ್ಮ ಆಚಾರ್ಯರೆಂದು (ಗುರುಗಳು) ಅಂಗೀಕರಿಸಿದರು.

ನಮ್ಮಾಳ್ವಾರ್ ಅವರಿಗೆ ಶಠಗೋಪರ್ ಅಥವಾ ಶಠಕೋಪರ್,ಶಠಾರಿ,ಪರಾಂಕುಶ ಎಂಬ ಹೆಸರುಗಳೂ ಉಂಟು. ದ್ರಾವಿಡ ದೇಶದ ಪಾಂಡ್ಯ ರಾಜ್ಯದಲ್ಲಿ, ತಾಮ್ರಪರ್ಣಿ ನದಿ ತೀರದಲ್ಲಿ ತಿರುಕುರುಹೂರ್ (ಕುರುಗೂರು-ಕುರುಕಪುರಿ) ಎಂಬ ಊರು. ಈಗ ಆ ಊರು ಆಳ್ವಾರ್ ತಿರುನಗರಿ ಎಂದು ಪ್ರಸಿದ್ಧವಾಗಿದೆ.ಈ ಊರಿನಲ್ಲಿ ಕಾರಿಯಾರ್ ಎಂಬ ಜಮೀನುದಾರನಿದ್ದನು. ಇವರ ಪತ್ನಿಯ ಹೆಸರು ಉಡೈಯನಂಗೆಯಾರ್.ದಂಪತಿಗಳಿಬ್ಬರೂ ಮಹಾ ವಿಷ್ಣು ಭಕ್ತರು. ಇವರಿಗೆ ಬಹಳ ಕಾಲ ಮಕ್ಕಳಾಗಲಿಲ್ಲ. ದೇವರ ಕೃಪೆಯಾದರೆ ತಮಗೆ ಮಕ್ಕಳಾಗಬಹುದೆಂದು ದಂಪತಿಗಳಿಬ್ಬರೂ ಅನೇಕ ದಿವ್ಯ ದೇಶಗಳ ಯಾತ್ರೆಯನ್ನು ಕೈಗೊಂಡರು. ಹೀಗೆ ಯಾತ್ರೆ ಮಾಡುತ್ತಾ ತಿರುಕ್ಕುರುಂಗುಡಿ ಎಂಬ ಊರಿಗೆ ಬಂದರು. ಆ ಊರಿನ ದೇವರ ಹೆಸರು ನಂಬಿ. ಕಾರಿಯಾರ್ ದಂಪತಿಗಳು ನಂಬಿಯ ಸೇವೆ ಮಾಡುತ್ತಾ ಅಲ್ಲಿ ತಂಗಿದರು. ಒಂದು ದಿನ ಕನಸಿನಲ್ಲಿ ನಂಬಿದೇವನು ಕಾಣಿಸಿಕೊಂಡು ಅಶರೀರವಾಣಿಯಿಂದ ನಾನೇ ನಿಮ್ಮ ಮಗನಾಗಿ ಹುಟ್ಟುತ್ತೇನೆಂದು ಹೇಳಿದ ಹಾಗಾಯಿತು. ದಂಪತಿಗಳ ಸಂತೋಷಕ್ಕೆ ಪಾರವೇ ಇಲ್ಲ. ಅವರು ತೀರ್ಥಯಾತ್ರೆಯನ್ನು ಮುಗಿಸಿ ತಮ್ಮ ಊರಿಗೆ ಹಿಂದಿರುಗಿದರು.

ನಾರಾಯಣನ ಎರಡನೆಯ ಪ್ರಾಣವೇ ವಿಶ್ವಕ್ಸೇನ.ಅವನು ವೈಷ್ಣವ ಸೇನೆಯ ಅಧಿಪತಿ ಅಂದರೆ ವಿಷ್ಣುವಿನ ಸೇನಾಧಿಪತಿ.ಗಣಪತಿ ಮತ್ತು ಕಾರ್ತಿಕೇಯನ ಜಾಗದಲ್ಲಿ ಶ್ರೀವೈಷ್ಣವರು ವಿಶ್ವಕ್ಸೇನನನ್ನು ಪೂಜಿಸುತ್ತಾರೆ. ವಿಶ್ವಕ್ಸೇನನ ದಿವ್ಯ ಅಂಶದಿಂದ ಕಾರಿಯಾರ್ ದಂಪತಿಗಳಿಗೆ, ಕಲಿಯುಗದ ಆದಿಯಲ್ಲಿ, ವೈಯ್ಯಾಶಿ ಮಾಸದ (ವೈಶಾಖ ಮಾಸ ಅಥವಾ ವೃಷಭಮಾಸ) ಹದಿನಾರನೇ ವಿಶಾಖ ನಕ್ಷತ್ರದ ಪ್ರಭಾವದ ಅಡಿಯಲ್ಲಿ ಶಠಾರಿಯು ಹುಟ್ಟಿದನೆಂದು ದಿವ್ಯಸೂರಿ ಸ್ತೋತ್ರಂನಲ್ಲಿ ಹೇಳಿದೆ. ಇದು ಕಲಿಯುಗದ ಪ್ರಥಮ ವರ್ಷವಾದ ಕ್ರಿ.ಪೂ. 3102 ಎಂದು ಹೇಳುತ್ತಾರೆ.

ಹುಟ್ಟಿದ ಕೂಡಲೇ ಮಗವು ಅಳಲಿಲ್ಲ, ಕಣ್ಣು ಬಿಡಲಿಲ್ಲ, ತಾಯಿಯ ಹಾಲನ್ನೂ ಕುಡಿಯಲಿಲ್ಲ. ಮಲಮೂತ್ರಾದಿಗಳನ್ನೂ, ಮಾಡಲಿಲ್ಲ. ಮಗುವು ದಿನೇ ದಿನೇ ಬೆಳೆಯುತ್ತಾ ಹೋಯಿತು. ಹನ್ನೆರಡನೆಯ ದಿವಸ ತಾಯಿ ತಂದೆಯರು, ಮಗುವನ್ನು ಆ ಊರಿನ ದೇವರ ಸನ್ನಿಧಿಗೆ ಕರೆದುಕೊಂಡು ಹೋಗಿ, ಮಗುವಿಗೆ ಒಳ್ಳೆಯದಾಗಲಿ ಎಂದು ದೇವರನ್ನು ಪ್ರಾರ್ಥಿಸಿ, ಮಾರನ್ ಎಂಬ ಹೆಸರನ್ನು ಇಟ್ಟರು. ಇದು ದೇವರ ಮಗು ಎಂದು ಹೇಳಿ ಆ ದೇವಾಲಯದ ಮುಂದೆ ಇದ್ದ ಹುಣಸೆ ಮರದ ಕೊಂಬೆಗೆ ತೊಟ್ಟಿಲನ್ನು ಕಟ್ಟಿ ಅಲ್ಲಿ ಮಲಗಿಸಿ ಬಂದರು. ಮಗುವು ತೊಟ್ಟಿಲಿನಿಂದ ಇಳಿದು, ಹುಣಸೆಯ ಮರದ ಪೊಟರೆಯಲ್ಲಿ ಪದ್ಮಾಸನ ಹಾಕಿಕೊಂಡು ಧ್ಯಾನಾಸಕ್ತನಾಗಿ ಕುಳಿತುಕೊಂಡಿತು. ಎಳನೆಯ ವರ್ಷ ಭಗವಂತನ ಸೇನಾಧಿಪತಿ ವಿಶ್ವಕ್ಸೇನರು ಬಂದು ಮಗುವಿನ ತೋಳಿನ ಮೇಲೆ ಶಂಖ ಚಕ್ರಗಳ ಮುದ್ರೆಗಳನ್ನು ಒತ್ತಿದರು. ಮಗುವಿನ ಕಿವಿಯಲ್ಲಿ ದಿವ್ಯ ಮಂತ್ರವನ್ನು ಹೇಳಿದರು. ಸಮಸ್ತ ವೇದಗಳ ಸಾರವನ್ನು ದ್ರಾವಿಡ ಭಾಷೆಯಲ್ಲಿ ಉಪದೇಶ ಮಾಡಿಹೋದರು.

ಹೀಗೆ ದಿವ್ಯಜ್ಞಾನವನ್ನು ಪಡೆದ ನಮ್ಮಾಳ್ವಾರರು ಹದಿನಾರು ವರ್ಷ ತುಂಬುವವರೆಗೆ ಅದೇ ಹುಣಸೆಮರದ ಪೊಟರೆಯಲ್ಲಿಯೇ ಯೋಗನಿದ್ರೆಯಲ್ಲಿದ್ದರು. ಸಮರ್ಥ ಶಿಷ್ಯನ ಬರವಿಗಾಗಿ ಕಾಯುತ್ತಿದ್ದರು.ನಮ್ಮಾಳ್ವಾರ್ ಜನಿಸುವುದಕ್ಕೆ ಮುಂಚೆಯೇ ಕುರುಕಪುರಿಯ ಸಮೀಪದ ತಿರು

ಕ್ಕೋಳೂರ್‌ನಲ್ಲಿ ಬ್ರಾಹ್ಮಣ ವಂಶದಲ್ಲಿ ಮಧುರಕವಿಆಳ್ವಾರರು ಜನಿಸಿದರು.ಭಗವಂತನನ್ನು ಕುರಿತು ಮಧುರವಾದ ಕವಿತೆಗಳನ್ನು ರಚಿಸಿ ಹಾಡುತ್ತಿದ್ದ ಕಾರಣ ಅವರಿಗೆ ಮಧುರಕವಿ ಎಂಬ ಹೆಸರು ಬಂದಿತ್ತು. ಮಧುರಕವಿ ಆಳ್ವಾರರು ತೀರ್ಥಯಾತ್ರೆಗೆ ಉತ್ತರ ಭಾರತದ ಕಡೆಗೆ ಹೋಗಿ ಬದರಿಯಿಂದ ಅಯೋಧ್ಯೆಗೆ ಬಂದು ತಂಗಿದ್ದರು.ಅಲ್ಲಿ ಅವರಿಗೆ ದಕ್ಷಿಣ ದಿಕ್ಕಿನಲ್ಲಿ ಪ್ರಕಾಶಮಾನವಾದ ದಿವ್ಯತೇಜಸ್ಸು ಗೋಚರಿಸಿತು.ಆ ತೇಜಸ್ಸನ್ನು ಹುಡುಕಿಕೊಂಡು ಮಧುರಕವಿ ಆಳ್ವಾರರು ಹೊರಟರು. ಅದು ಸೀದಾ ಕುರುಕಪುರಿಯ ದೇವಾಲಯದ ಮುಂದಿನ ಹುಣಸೆಯ ಮರದಲ್ಲಿ ಇದ್ದ ನಮ್ಮಾಳ್ವಾರ್ ಅವರ ಬಳಿಗೆ ತಂದು ನಿಲ್ಲಿಸಿತು. ಯೋಗಮುದ್ರೆಯಲ್ಲಿ ಯೋಗಿಯನ್ನು ನೋಡಿದೊಡನೆ ಇಬ್ಬರ ತೇಜಸ್ಸುಗಳೂ ಒಂದುಗೂಡಿದವು. ಹದಿನಾರು ವರ್ಷದ ಶಿಲಾ ಪ್ರತಿಮೆಯಂತೆ ಕುಳಿತಿರುವ ಈ ಯೋಗಿಯಲ್ಲಿ ಚೈತನ್ಯ ಇರುವುದೋ ಇಲ್ಲವೋ ಎಂಬುದನ್ನು ಗುರುತಿಸಲು ಮಧುರ ಕವಿಗಳು ಒಂದು ಕಲ್ಲುಗುಂಡನ್ನು ಅವರ ಮುಂದೆ ಎತ್ತಿಹಾಕಿದರು. ಈ ಸದ್ದಿಗೆ ನಮ್ಮಾಳ್ವಾರರು ಕಣ್ಣು ಬಿಟ್ಟು ಮಧುರಕವಿ ಆಳ್ವಾರರನ್ನು ನೋಡಿದರು.ಇಬ್ಬರ ದೃಷ್ಟಿಯೂ ಒಂದಾಯಿತು ನಮ್ಮಾಳ್ವಾರ್ ಅವರನ್ನು ಪರೀಕ್ಷಿಸಲು ಮಧುರಕವಿ ಆಳ್ವಾರರು “ಪ್ರಕೃತಿಯ ಉದರದಲ್ಲಿ ಉದಯಿಸಿದ ಜೀವನು ಯಾವುದನ್ನು ತಿಂದು ಹೇಗಿರುವನು” ಎಂದು ಒಗಟಿನ ರೂಪದಲ್ಲಿ ತತ್ತ್ವವನ್ನು ಒಳಗೊಂಡ ಒಂದು ಪ್ರಶ್ನೆಯನ್ನು ಕೇಳಿದರು. ಅದಕ್ಕೆ ಉತ್ತರವಾಗಿ ನಮ್ಮಾಳ್ವಾರರು “ಅದನ್ನೇ ತಿಂದು ಅಲ್ಲಿಯೇ ಇರುವನು” ಎಂದು ಉತ್ತರಿಸಿದರು.ಇದನ್ನು ಕೇಳಿದ ಕೂಡಲೇ ಮಧುರಕವಿಆಳ್ವಾರರು ಪರಮಾನಂದಭರಿತವಾಗಿ ನಮ್ಮಾಳ್ವಾರರ ಪಾದಕ್ಕೆ ಎರಗಿ ಅವರನ್ನೇ ತಮ್ಮ ಗುರುವೆಂದು ಅಂಗೀಕರಿಸಿ ಅವರ ಸೇವೆ ಮಾಡುತ್ತಾ ಭಕ್ತಿ ಪೂರ್ವಕವಾದ ಪದ್ಯಗಳನ್ನು ರಚಿಸಿ ಹಾಡಿದರು.

ನಮ್ಮಾಳ್ವಾರರಿಗೆ ದೈವ ಸಾಕ್ಷಾತ್ಕಾರವಾಯಿತು. ತಮ್ಮ ಪರಮಾನಂದ ಅನುಭವವನ್ನು “ತಿರುವಿರುತ್ತಮ್, ತಿರುವಾಶಿರಿಯಮ್, ಪೆರಿಯ ತಿರುವಂದಾದಿ ತಿರುವಾಯ್‌ಮೋಳಿ” ಎಂಬ ನಾಲ್ಕು ಕೃತಿಗಳಲ್ಲಿ ಹಾಡಿದರು ಇಂದಿಗೂ ಶ್ರೀವೈಷ್ಣವ ದೇವಾಲಯಗಳಲ್ಲಿ ತಪ್ಪದೇ ತಿರುವಾಯ್‌ಮೋಳಿಯ ಪಠಣ ನಡೆಯುತ್ತದೆ.ನಮ್ಮಾಳ್ವಾರರ ಪ್ರಬಂಧಗಳು,ವಿಷ್ಣುವೇ ಪತಿ ಅಥವಾ ನಾಯಕ, ಭಕ್ತನೇ ಸತಿ ಅಥವಾ ನಾಯಿಕೆ ಎಂಬ ಕಲ್ಪನೆಯಿಂದ, ನಾಯಕ ನಾಯಿಕೆಯರು ಅನುಭವಿಸುವ ಶೃಂಗಾರ, ಶಾಂತ ಮಧುರರಸಭರಿತವಾದ ಭಗವತ್ ಪ್ರೇಮದಿಂದ ಕೂಡಿದ ರಚನೆಗಳಾಗಿವೆ.ತಿರುವಾಯ್‌ಮೋಳಿಯಲ್ಲಿ 1102 ತಿರುವಿರುತ್ತಮ್‌ನಲ್ಲಿ 100 ಪದ್ಯಗಳಿವೆ.

ನಮ್ಮಾಳ್ವಾರ್ ಅವರು ಮೃದುಮಧುರ ಭಾವನೆಯಿಂದ ಪ್ರೇಮ ಪೂರ್ಣವಾಗಿ ಮಾತನಾಡುತ್ತಿದ್ದರು. ಭಗವಂತನನ್ನು ಕುರಿತು ಹಾಡುತ್ತಿದ್ದರು.ಒಂದು ಸಲ ಅವರ ಮಾತನ್ನು ಕೇಳಿದರೆ ಇವರು ನಮ್ಮ ಸೋದರರೇ, ನಮ್ಮವರೇ ಎನಿಸಿಬಿಡುತ್ತಿತ್ತು, ಒಮ್ಮೆ ಭಗವಂತನೇ ಅವರ ಸ್ತುತಿಯನ್ನು ಕೇಳಿ ಅವರನ್ನು “ನಮ್ಮಾಳ್ವಾರ್”ಎಂದು ಕರೆದನಂತೆ, ಅಂದಿನಿಂದ ಅವರು ನಮ್ಮಾಳ್ವಾರ್ ಎಂಬ ಹೆಸರಿನಿಂದಲೇ ಪ್ರಸಿದ್ಧರಾದರು. ಮದಗಜಗಳಂತಿರುವ ಪರಮತಗಳ ವಿದ್ವಾಂಸರನ್ನು ಇವರು ನಿಯಂತ್ರಿಸುತ್ತಿದ್ದುದರಿಂದ ಅವರಿಗೆ “ಪರಾಂಕುಶ” ಎಂಬ ಹೆಸರೂ ಬಂದಿತು. ಇದೇ 12 ಜೂನ್ 2022 ತ್ರಯೋದಶಿ, ವಿಶಾಖ ನಕ್ಷತ್ರದ ದಿವಸ ನಮ್ಮಾಳ್ವಾರ್ ತಿರುನಕ್ಷತ್ರ ಅಥವಾ ನಮ್ಮಾಳ್ವಾರ್ ಜಯಂತಿಯನ್ನು ಆಚರಿಸಲಾಗುತ್ತದೆ.

**ನಷ್ಟಂ ಮೃತಮತಿ ಕ್ರಾಂತಂ**
**ನಾನುಶೋಚಂತಿ ಪಂಡಿತಾಃ।**
**ಪಂಡಿತಾನಾಂ ಚ ಮೂರ್ಖಾಣಾಂ**
**ವಿಶೇಷೋಽಯಂ ಯತಃ ಸ್ಮೃತಃ ॥**

**(ಪಂಚತಂತ್ರ - ಮಿತ್ರ ಭೇದ)**

**ನಷ್ಟವಾದುದಕ್ಕಾಗಿ, ಮೃತನಾದವನಿಗಾಗಿ ಮತ್ತು ಕಾಲಮಿಂಚಿ ಹೋದದಕ್ಕೆ ಬುದ್ಧಿವಂತರು ದುಃಖಿಸುವುದಿಲ್ಲ. ಬುದ್ಧಿವಂತರಿಗೂ ಮೂರ್ಖರಿಗೂ ಇರುವ ವಿಶೇಷವು ಇದೇ ಎಂದು ಹೇಳಿದೆ.**

ಧಾರಾವಾಹಿ



# ಹರಿಕಥಾಮೃತಸಾರ ಮಹಿಮೆ ಬಲು ಅಪಾರ

- ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ ಕಾಖಂಡಕಿ
8059436752

**ಹಿಂದಿನ ಸಂಚಿಕೆಯಲ್ಲಿ...**

ಹರಿಕಥಾಮೃತಸಾರದ ವಿಶೇಷತೆ ಮತ್ತು ಮೂವತ್ತೇರಡು ಸಂಧಿಗಳ ಹೆಸರು ಮತ್ತು ಶ್ರೀಹರಿಯ ಸರ್ವೋತ್ತಮತ್ವದ ವಿಷಯ ಮತ್ತು ಇಹಪರದ ಚಿಂತನೆ ತಿಳಿದುಕೊಂಡಿದ್ದೇವೆ. ಇನ್ನು ಶ್ರೇಷ್ಠ ಗ್ರಂಥ ರಚಿಸಿದ ಶ್ರೀಜಗನ್ನಾಥದಾಸರ ಬಗ್ಗೆ ತಿಳಿದು ಕೊಳ್ಳೋಣ.

ಜಿಡಾದ ರಾಯಚೂರು ಜಿಲ್ಲೆಯ ಬ್ಯಾಗವಟಿಯ ಶಾನ ಭೋಗರಾಗಿದ್ದ ನರಸಿಂಹಆಚಾರ್ಯ ಮತ್ತು ಲಕ್ಷಮ್ಮ ದಂಪತಿ ಗಳು ವಾಸವಾಗಿದ್ದರು. ಆಗಿನ ಮುಸಲ್ಮಾನರ ಆಡಳಿತ ದಲ್ಲಿ ಶಾನಭೋಗತನ ನಡೆಸುವುದು ಕಷ್ಟಕರ ಕೆಲಸವಾಗಿತ್ತು. ನೂರೆಂಟು ತಾಪತ್ರಯ ತೊಂದರೆ ಕಾಲವದು.

ಇವರ ಮೃದು ಸ್ವಭಾವದ ಮತ್ತು ಧರ್ಮಿಷ್ಠರಿದ್ದ ಕಾರಣ ಶಾನ ಭೋಗತನದಲ್ಲಿ ಜನರ ಮೋಸತನಕ್ಕೆ ಒಳಗಾದರು. ಕಂದಾಯ ಕಟ್ಟಿ ಮನೆಮಠ ಆಸ್ತಿಗಳನ್ನು ಕಳೆದುಕೊಂಡರು.

ಹೀಗಾಗಿ ನರಸಿಂಹ ಆಚಾರ್ಯರರು ಶಾನಭೋಗತನ ತ್ಯಜಿಸಿ ಅದವಾನಿಯ ಪಂಗನಾಮ ತಿಮ್ಮಣ್ಣದಾಸರ ಹತ್ತಿರ ಆಶ್ರ ಯಕ್ಕೆ ಬಂದರು. ತಿಮ್ಮಣ್ಣದಾಸರು ಅದವಾನಿಯ ನವಾಬ ಬಸಾ ಲತ್ ಜಂಗನ ಹತ್ತಿರ ಮುಖ್ಯಮಂತ್ರಿಗಳಾಗಿದ್ದರು. ಇವರು ಕರ್ತವ್ಯದಲ್ಲಿದ್ದರು ವಿಜಯದಾಸರ ಶಿಷ್ಯರಾಗಿ ವೇಣುಗೋಪಾಲ ಅಂಕಿತದಿಂದ ಪಡೆದು ಕೀರ್ತನೆಗಳನ್ನು ರಚಿಸುತ್ತಿದ್ದರು.

ತಿಮ್ಮಣ್ಣದಾಸರಲ್ಲಿ ನರಸಿಂಹಆಚಾರ್ಯರರು ಆಶ್ರಯ ಬಯಸಿ ಬಂದಿದ್ದರು. ತಿಮ್ಮಣ್ಣದಾಸರು ಇವರನ್ನು ನೋಡಿ ಎಲ್ಲ ಸಂಗತಿಗಳನ್ನು ವಿಚಾರಿಸಿ, ನರಸಿಂಹಆಚಾರ್ಯರರೇ ನಿಮಗೆ ಲೌಕಿಕ ವೃತ್ತಿ ಒಗ್ಗದು, ನೀವು ಧರ್ಮಿಷ್ಠರು, ನೀವು ಬಯಸುವು ದಾದರೇ ನಿಮಗೆ ಮಂತ್ರೋಪದೇಶದ ಮೂಲಕ ಅಂಕಿತ ನೀಡುವೆ. ನೀವು ಹರಿದಾಸರಾಗಿ ಎಂದರು ಕೂಡಲೇ ಅವರು ಸಂತೋಷದಿಂದ ಒಪ್ಪಿದರು.

**ತಿಮ್ಮಣ್ಣ ದಾಸರು:**

ನರಸಿಂಹ ಆಚಾರ್ಯರರಿಗೆ ನರಸಿಂಹವಿಠಲ್ ಎಂಬ ಅಂಕಿತ ಕೊಟ್ಟು ನರಸಿಂಹದಾಸರನ್ನಾಗಿ ಮಾಡಿದರು. ಅವರ ಉಪಜೀವನಕ್ಕೆ ಮಾನವಿಯಲ್ಲಿ ಕೆಲವು ಎಕರೆ ಭೂಮಿಯನ್ನು ಮತ್ತು ವಾಸಿಸಲು ಮನೆ ಕೊಟ್ಟು ಅಲ್ಲಿಯೇ ವಾಸಿಸಲು ಹೇಳಿ ದರು ಮುಂದೆ ಕಾಲಕ್ರಮೇಣ ಜೀವನ ಸಂತುಷ್ಟದಾಯಕ ವಾಯಿತು.

ಇವರಿಗೆ ಶ್ರೀನಿವಾಸನೆಂಬ ಪುತ್ರ ಸಂತಾನವಾಯಿತು. ಈ ಶ್ರೀನಿವಾಸನನೇ ನಂತರದಲ್ಲಿ ಜಗನ್ನಾಥದಾಸರು ಎಂದು ಪ್ರಖ್ಯಾತಿ ಹೊಂದಿದವರು.

ಜಗನ್ನಾಥದಾಸರು ದಾಸ ಚತುಷ್ಟಯರಲ್ಲಿ ಒಬ್ಬರಾಗಿ ವೇದ ಉಪನಿಷತ್ತು ಪುರಾಣಗಳ ಸಾರ ಸಂಗ್ರಹದ ಅತ್ಯಮೂಲ್ಯವಾದ ಶ್ರೇಷ್ಠ ಗ್ರಂಥವಾದ "ಹರಿಕಥಾಮೃತಸಾರ" ರಚಿಸಿದ ಮಹನೀ ಯರು.

**ಜಗನ್ನಾಥದಾಸರ ಜೀವನ ವೃತ್ತಾಂತ**

ಶಾನಭೋಗರಾಗಿದ್ದ ನರಸಿಂಹ ಆಚಾರ್ಯ ಮತ್ತು ಲಕ್ಷಮ್ಮ ಎಂಬ ದಂಪತಿಗಳಲ್ಲಿ ಶಾಲಿವಾಹನ ಶಕೆ 1649 ಕೀಲಕ ಸಂ ವತ್ಸರದ ಶ್ರಾವಣ ಶುದ್ಧ ಬಿದಿಗೆಯಂದು ಪುತ್ರ ಸಂತಾನ ಹುಟ್ಟಿತ್ತು. ತಿರುಪತಿ ಶ್ರೀನಿವಾಸನ ಸೇವಾಫಲದಿಂದ ಹುಟ್ಟಿದ್ದ ಕಾರಣ ಮಗು ವಿಗೆ ಶ್ರೀನಿವಾಸ ಎಂದು ಹೆಸರು ಇಟ್ಟರು.

**ಜಗನ್ನಾಥದಾಸರ ಜೀವನ ಚರಿತ್ರೆ ತಿಳಿಯೋಣ**

ಶ್ರೀನಿವಾಸನು ಕನ್ನಡ ಮತ್ತು ಸಂಸ್ಕೃತ ಭಾಷೆಗಳ ವಿದ್ವತ್ ವನ್ನು ಹೊಂದಿದ್ದರು. ಆಗಿನ ಕಾಲದ ಶ್ರೀರಾಘವೇಂದ್ರ ಮಠದ ಸ್ವಾಮಿಗಳಾಗಿದ್ದ ಶ್ರೀವರದೇಂದ್ರತೀರ್ಥ ಶ್ರೀಪಾದಂಗಳವರು ಶ್ರೀನಿವಾಸ ಜ್ಞಾನವನ್ನು ಕಂಡು ಮಂತ್ರಾಲಯಕ್ಕೆ ಕರೆಯಿಸಿ ಕೊಂಡು ಸಕಲ ಶಾಸ್ತ್ರಗಳನ್ನು ಅಧ್ಯಯನ ಮಾಡಿಸಿದರು. ಇದರ ಜೊತೆ ಕವಿತ್ವವು ಒಲಿಯಿತು.

**ನ ಸತ್ಯಂ ದಾನ ಮಾನೌ ವಾ ನಯಜ್ಞಾಶ್ಚಾಪ್ತದಕ್ಷಿಣಾಃ ।**
**ತಥಾಬಲಕರಾಸ್ಸೀತೇ ಯಥಾ ಸೇವಾ ಪಿತುರ್ಹಿತಾ ॥**

**(ರಾಮಾಯಣ)**

**ಸೀತೇ! ಹೆತ್ತವರಿಗೆ ಇಷ್ಟವನ್ನುಂಟು ಮಾಡಿದರೆ ಬರುವ ಬಲವು ಸತ್ಯದಿಂದ ದಾನದಿಂದ, ದಕ್ಷಿಣೆಗಳಿಂದ ಕೂಡಿದ ಯಜ್ಞಗಳಿಂದಲೂ ಬರಲಾರದು. ಹೆತ್ತವರು ಕೊರಗದಂತೆ ನೋಡಿಕೊಳ್ಳುವುದು ಮಕ್ಕಳಾದವರ ಕರ್ತವ್ಯ. ಅವರನ್ನು ಚೆನ್ನಾಗಿ ನೋಡಿಕೊಳ್ಳುವುದಕ್ಕಿಂತ ಪುಣ್ಯದ ಕಾರ್ಯ ಇನ್ನೊಂದಿಲ್ಲ.**

ಇವರ ಶಾಸ್ತ್ರ ಪಾಂಡಿತ್ಯಗಳ ಸಿದ್ಧಿ ಎಲ್ಲ ಕಡೆ ಹಬ್ಬಿ ಪ್ರಸಿದ್ಧಿ ಹೊಂದಿದರು.

ಮುಂದೆ ಚಿಕ್ಕಬಳ್ಳಾಪುರದ ವೆಂಕಟಕೃಷ್ಣಾಚಾರ್ಯರ ಪುತ್ರಿ ತಾಮರ ಸಮ್ಮಳೊಂದಿಗೆ ವಿವಾಹ ನೆರವೇರಿತು.ಮುಂದೆ ವೈಭೋಗ ಜೀವನ ಇವರದಾಯಿತು.ಇವರಲ್ಲಿ ಪಾಂಡಿತ್ಯದ ಮದ ಶ್ರೀಮಂತಿಕೆ ಭೋಗ ಎರಡು ಮನೆ ಮಾಡಿದವು.

ಆಗಿನ ಕಾಲದ ಅಪರೋಕ್ಷ ಜ್ಞಾನಿಗಳಾದ ವಿಜಯ ದಾಸರಾದಿ ಎಲ್ಲ ಹರಿದಾಸರುಗಳ ಮತ್ತು ಜ್ಞಾನಿಗಳನ್ನು ಮತ್ತು ಅವರ ಪಾಂಡಿತ್ಯವನ್ನು ಹಿಯಾಳಿಸಿ ನಿಂದಿಸಲು ಪ್ರಾರಂಭಿಸಿದರು. ಕನ್ನಡದಲ್ಲಿ ಕೀರ್ತನೆಗಳನ್ನು ಹಾಡುವ ಹರಿದಾಸರನ್ನು ಕೀಳಾಗಿ ಕಾಣುತ್ತಿದ್ದರು.

ಹೀಗೆ ಒಂದು ದಿನ ಅಪರೋಕ್ಷ ಜ್ಞಾನಿಗಳಾದ ವಿಜಯ ದಾಸರು ಮಾನವಿಗೆ ಬಂದರು.ಇವರು ನಿತ್ಯ ತಂಬೂರಿ ಮೀಟುತ್ತಾ, ದೇವರ ನಾಮಗಳನ್ನು ಹಾಡುತ್ತಾ ಊರ ಪ್ರದಕ್ಷಿಣೆ ಹಾಕಿ ಅಲ್ಲಿಯೇ ಭಿಕ್ಷೆ ಸ್ವೀಕರಿಸಿ ಮಧ್ಯಾಹ್ನಕ್ಕೆ ಪ್ರಸಾದಕ್ಕೆ ಬರಬೇಕೆಂದು ಹೇಳಿ ಬರುತ್ತಿದ್ದರು ತಾವಿದ್ದಲ್ಲಿ ಬಂದು ಅಡುಗೆ ಮಾಡಿ ದೇವರ ನೈವೇದ್ಯ ಮಾಡಿ ಭಕ್ತವೃಂದ ಮತ್ತು ಶಿಷ್ಯರ ಜೊತೆ ಪ್ರಸಾದ ಸ್ವೀಕರಿಸುತ್ತಿದ್ದರು. ಸಂಜೆ ಭಜನ ಕೀರ್ತನೆ ಹಾಡಿ ಮಂಗಳಾರತಿ ಮಾಡಿ ಅಂದಿನ ಸರ್ವಕರ್ಮ ಸಮರ್ಪಿಸುತ್ತಿದ್ದರು.

ವಿಜಯದಾಸರು ಶ್ರೀನಿವಾಸ ಆಚಾರ್ಯರನ್ನು ಮಧ್ಯಾಹ್ನದ ಪ್ರಸಾದ ಮತ್ತು ಅತಿಥ್ಯ ಸ್ವೀಕರಿಸಲು ಆಮಂತ್ರಣ ನೀಡಿದರು. ಮನಸ್ಸಿನಲ್ಲಿ ಅವರ ಕಡೆ ಅಸಡ್ಡೆ ಭಾವ ಇದ್ದಿದ್ದರೂ ಒಪ್ಪಿಗೆ ಕೊಟ್ಟರು. ಮುಂದೆ ಊಟದ ಸಮಯದಲ್ಲಿ ಶ್ರೀನಿವಾಸ ಆಚಾರ್ಯರು ಬರದದ್ದು ನೋಡಿ ಶಿಷ್ಯನನ್ನು ಕರೆತರಲು, ಕಳುಹಿಸಿದರು. ಆಗ ಆ ಶಿಷ್ಯನ ಮುಂದೆ ಪರಾನ್ನ ಬಿಟ್ಟಿರುವೆ.ವೇಳೆ ಮೀರಿ ಊಟ ಮಾಡಿದರೆ ನನಗೆ ಉದರ ಶೂಲೆ ಬರುತ್ತದೆ. ಹೀಗಾಗಿ ನಾನು ಊಟ ಮಾಡಿರುವೆ. ನಿಮ್ಮ ಗುರುಗಳಲ್ಲಿ ಹೇಳು, ಎಂದು ಹೇಳಿ ಕಳುಹಿಸಿದರು. ಶಿಷ್ಯ ಬಂದು ವಿಜಯದಾಸರ ಮುಂದೆ ಶ್ರೀನಿವಾಸ ಆಚಾರ್ಯರರು ಹೇಳಿದ ಹಾಗೇ ವಿಷಯ ಮುಟ್ಟಿಸಿದ ಇದನ್ನು ಕೇಳಿದ ವಿಜಯದಾಸರು ಹರಿಚಿತ್ತ ಎಂದು ಸುಮ್ಮನಾದರು.

ಇತ್ತಕಡೆ ಸ್ವಲ್ಪ ವೇಳೆ ಕಳೆದ ನಂತರ ಶ್ರೀನಿವಾಸ ಆಚಾರ್ಯರಿಗೆ ನಿಜವಾಗಿ ಹೊಟ್ಟೆ ಶೂಲೆ ಬಂದಿತು.ಎಲ್ಲ ಕಡೆ ತೋರಿಸಿದರು. ವೈದ್ಯರು ಕೈಬಿಟ್ಟರು. ಕಡೆಗೆ ಭಕ್ತರ ಕರುಣೆಯಾದ ಗುರು ರಾಘವೇಂದ್ರ ಸ್ವಾಮಿಗಳಲ್ಲಿ ಒಂದು ವಾರದವರೆಗೆ ಸೇವೆ ಮಾಡಿದರು.ಆಗ ರಾಯರು ಸ್ವಪ್ನದಲ್ಲಿ ದರ್ಶನ ಕೊಟ್ಟು ನೀನು ವಿದ್ಯೇದ ಮದದಿಂದ ವಿಜಯದಾಸರಾದಿಗಳನ್ನು ನಿಂದಿಸಿ ಅವರ ಆಮಂತ್ರಿಸಿದ ತೀರ್ಥಪ್ರಸಾದಕ್ಕೆ ನೀನು ಹೋಗದೆ ಉದರ ಶೂಲೆಯ ನೆಪ ಹೇಳಿ ಗುರುದ್ರೋಹ ಮಾಡಿರುವೆ ಅದರ ಫಲವಾಗಿ ಈ ಉದರ ಶೂಲೆ ಬಂದಿದೆ. ನೀನು ವಿಜಯದಾಸರಲ್ಲಿ ಕ್ಷಮಾಪಣೆ ಕೇಳು ಎಂದು ಹೇಳಿದರು. ಥಟ್ಟನೆ! ಎಚ್ಚರಗೊಂಡ ಶ್ರೀನಿವಾಸ ಆಚಾರ್ಯರು ಮಂತ್ರಾಲಯದಿಂದ ನೇರವಾಗಿ ವಿಜಯದಾಸರಲ್ಲಿ ಬಂದು ನಡೆದು ಗುರುಗಳ ಸ್ವಪ್ನಾದೇಶವನ್ನು ಹೇಳಿ ಕ್ಷಮಾಪಣೆ ಕೇಳಿದರು. ನನ್ನನ್ನು ಉದ್ಧರಿಸಿ ಎಂದು ಬೇಡಿಕೊಂಡರು.

ಆಗ ವಿಜಯದಾಸರು ನನ್ನ ಶಿಷ್ಯರಾದ ಗೋಪಾಲದಾಸರಲ್ಲಿ ಹೋಗು, ಅಲ್ಲಿಯೇ ಅವರು ನಿನ್ನ ಸ್ವರೂಪೋದ್ಧಾರ ಮಾಡುವರೆಂದು ಹೇಳಿದರು. ಮುಂದೆ ಶ್ರೀಗೋಪಾಲದಾಸರಲ್ಲಿ ಹೋದರು ಅವರು ನಿತ್ಯದಲ್ಲಿ ದೇವರ ತೀರ್ಥ ನೈವೇದ್ಯ ಕೊಡುತ್ತ ಅದರ ಜೊತೆ ಧನ್ವಂತರಿಯನ್ನು ಧ್ಯಾನಿಸಿ ಅಭಿಮಂತರಿಸಿ ಬಕ್ಕರಿಯನ್ನು ಕೊಡುತ್ತ ಬಂದರು ಕೆಲವು ದಿನಗಳಲ್ಲಿಯೇ ಉದರ ಶೂಲೆ ಕಡಿಮೆಯಾಗಿ ಉತ್ಸಾಹ ಬಂದಿತು. ಗೋಪಾಲದಾಸರು ಪ್ರತಿ ವರ್ಷ ಬ್ರಹ್ಮೋತ್ಸವಕ್ಕೆ ಅನೇಕ ಭಕ್ತ ಶಿಷ್ಯವೃಂದದ ಜೊತೆ ತಿರುಪತಿಗೆ ಹೋಗುತ್ತಿದ್ದರು. ಈ ಸಲ ಶ್ರೀನಿವಾಸ ಆಚಾರ್ಯರರು ಇವರ ಜೊತೆ ನಡೆದರು.ತಿರುಪತಿ ತಲುಪಿ ಶ್ರೀನಿವಾಸನ

ದರ್ಶನ ಪಡೆದು ಶ್ರೀನಿವಾಸ ಆಚಾರ್ಯರು ಆಯಾಸದ ಬಳಲಿಕೆಯಿಂದ ಬಿಡಾರದಲ್ಲಿ ವಿಶ್ರಾಂತಿಗೆ ತಂಗಿದರು. ಸ್ವಲ್ಪ ವೇಳೆಯಲ್ಲಿ ಇವರ ಪ್ರಾಣಪಕ್ಷಿ ಹಾರಿ ಹೋಗಿತ್ತು, ಜನರಲ್ಲಿ ಗೊತ್ತಾಗಿ ಬಿಡಾರದ ಸುತ್ತ ಜನ ಸಮೂಹ ಸೇರತೊಡಗಿತ್ತು, ಶ್ರೀನಿವಾಸಚಾರ್ಯರರ ಮರಣದ ಸುದ್ಧಿ ಎಲ್ಲ ಕಡೆ ಹಬ್ಬಿತು.ಇತ್ತಕಡೆ ಗೋಪಾಲದಾಸರು ಬ್ರಹ್ಮೋತ್ಸವದಲ್ಲಿ ಭಜನೆ ಮಾಡುತ್ತಿರುವಾಗ ಸುದ್ಧಿ ತಿಳಿಯಿತು. ಕೂಡಲೇ ಬಿಡಾರಕ್ಕೆ ಬಂದರು. ಎಲ್ಲವನ್ನು ನೋಡಿ,ಕಣ್ಮುಚ್ಚಿ ತಮ್ಮ ಗುರುಗಳಾದ ವಿಜಯದಾಸರನ್ನು ಧ್ಯಾನಿಸಲು,ಅವರಿಗೆ ಸೂಕ್ಷ್ಮ ಶರೀರದಿಂದ ಕಾಣಿಸಿ ನಿಮ್ಮ 40 ವರ್ಷ ಆಯುಷ್ಯ ದಾನ ಮಾಡಲು ಹೇಳಿ ಅದೃಶ್ಯರಾದರು.

ಗುರುಗಳ ಆಜ್ಞೆಯಂತೆ ಧನ್ವಂತರಿ ರೂಪಿ ಶ್ರೀನಿವಾಸನನ್ನು ಪ್ರಾರ್ಥಿಸಿ,ಶಾಲಿವಾಹನ ಶಕೆ 1691 ವಿರೋಧಿ ಸಂವತ್ಸರದ ಭಾದ್ರಪದ ಶುದ್ಧನವಮಿಯಂದು ತಮ್ಮ ಆಯುಷ್ಯವನ್ನು ದಾನ ಮಾಡಿದರು.

ಶ್ರೀನಿವಾಸ ಆಚಾರ್ಯರರು ನಿದ್ರೆಯಿಂದ ಎದ್ದವರಂತೆ ಎದ್ದರು. ಇದೆಲ್ಲವನ್ನು ಕಂಡ ಸುತ್ತಲಿನ ಜನ ಹರ್ಷೋದ್ಗಾರ ಮುಗಿಲು ಮುಟ್ಟಿತು.ಆಗ ಶ್ರೀನಿವಾಸ ಆಚಾರ್ಯರಿಗೆ ಎಲ್ಲ ವಿಷಯ ತಿಳಿದು ಗೋಪಾಲದಾಸರಿಗೆ ಕೈ ಮುಗಿದರು.

ಸ್ವಲ್ಪ ಸಮಯದ ನಂತರ ಮತ್ತೇ ಶ್ರೀನಿವಾಸ ಆಚಾರ್ಯರಿಗೆ ದೇಹದಲ್ಲಿ ನಿಸ್ತೇಜ ಆಯಿತು.ಇದನ್ನು ಕಂಡು ಗೋಪಾಲದಾಸರು ಶ್ರೀನಿವಾಸನ ಪ್ರಸಾದ ತರಲು ದೇವಾಲಯದ ಹತ್ತಿರ ಹೋದರು ಅಲ್ಲಿ ಬಹಳ ಗದ್ದಲ ಇದಿದ್ದರಿಂದ ಬೇಗ ಬರಲು ಆಗಲಿಲ್ಲ.

ಅಷ್ಟರಲ್ಲಿಯೇ ಶ್ರೀನಿವಾಸನು ಗೋಪಾಲದಾಸರ ರೂಪದಿಂದ ಶ್ರೀನಿವಾಸ ಆಚಾರ್ಯರ ಹತ್ತಿರ ಒಂದು ಪ್ರಸಾದವನ್ನು ಸ್ವೀಕರಿಸಲು ಕೊಟ್ಟು ಹೊರಹೋದರು.

ಕೆಲವೇ ಕ್ಷಣಗಳಲ್ಲಿ ಗೋಪಾಲದಾಸರು ಪ್ರಸಾದವನ್ನು ತಂದು ಶ್ರೀನಿವಾಸ ಆಚಾರ್ಯರಿಗೆ ಕೊಡಲು ಈಗಾಗಲೇ ನೀವು ಪ್ರಸಾದ ತಂದು ಕೊಟ್ಟರಲ್ಲ,ನಾನು! ಸ್ವೀಕರಿಸಿದೆ ಎಂದು ಹೇಳಿದರು. ಗೋಪಾಲದಾಸರು ಧ್ಯಾನದಿಂದ ಶ್ರೀನಿವಾಸನನ್ನು ಪ್ರಾರ್ಥಿಸಿದರು. ನಡೆದ ವೃತ್ತಾಂತ ತಿಳಿಯಿತು. ಶ್ರೀನಿವಾಸ ಆಚಾರ್ಯರರಿಗೆ ಭಗವಂತನೆ ಬಂದು ಪ್ರಸಾದ ಕೊಟ್ಟು ಅನುಗ್ರಹಮಾಡಿದರೆಂದು ಹೇಳಿದರು. ಶ್ರೀನಿವಾಸ ಆಚಾರ್ಯರಿಗೆ ಪರಮಾಶ್ಚರ್ಯವಾಗಿ ಆನಂದಭರಿತರಾದರು.

ಮುಂದೆ ತಿರುಪತಿಯಿಂದ ಉತ್ತನೂರಿಗೆ ಬಂದು ಹರಿದಾಸನಾಗಬೇಕೆಂಬ ಆಶಯ ವ್ಯಕ್ತಪಡಿಸಿ,ಅಕಿಂತ ನೀಡಬೇಕೆಂದು ಗೋಪಾಲದಾಸರಲ್ಲಿ ವಿನಂತಿಸಿದರು. ಆಗ ಗೋಪಾಲದಾಸರು ಶ್ರೀನಿವಾಸ ಆಚಾರ್ಯರರಿಗೆ ನೀವು ಪಂಢರಪುರಕ್ಕೆ ಹೋಗಿ ಚಂದ್ರಭಾಗ ನದಿಯಲ್ಲಿ ಸ್ನಾನಕ್ಕೆ ಮುಳಗಿದಾಗ ನಿಮ್ಮ ಬಲಭಾಗಕ್ಕೆ ನಿಮಗೆ ದೊರೆಯುವ ಅಂಕಿತದ ಶಿಲೆಯೊಂದು ಸಿಗುತ್ತದೆ. ಅದರಲ್ಲಿ ನಿಮ್ಮ ಅಂಕಿತದ ಹೆಸರು ಇರುತ್ತದೆ ಎಂದು ಕಳುಹಿಸಿದರು.

ಗೋಪಾಲದಾಸರು ಹೇಳಿದಂತೆ ಪಂಢರಪುರದ ಶ್ರೀವಿಠಲನ ದರ್ಶನ ಪಡೆದು ಚಂದ್ರಭಾಗ ನದಿಯಲ್ಲಿ ಸ್ನಾನ ಮಾಡಲು ಮುಳುಗಿದಾಗ ಬಲಕ್ಕೆ ಒಂದು ಶಿಲೆ ಸಿಕ್ಕಿತು. ಅದರಲ್ಲಿ "ಜಗನ್ನಾಥ ವಿಠಲ್" ಎಂಬ ಅಂಕಿತವಿತ್ತು. ಅಪರೋಕ್ಷ ಜ್ಞಾನವಾಯಿತು. ಶಿಲೆಯನ್ನು ತಲೆಯ ಮೇಲೆ ಇಟ್ಟುಕೊಂಡು ಎಂದು ಕಾಂಬೆನೊ ಪಾಂಡುರಂಗ ಮೂರುತಿಯ ಇಂದು ಭಾಗ ನಿವಾಸ ಸರಸ ಸಾರಥಿಯ ಎಂಬ ಜಗನ್ನಾಥವಿಠಲ್ ಅಂಕಿತದಿಂದ ಕೀರ್ತನೆಯನ್ನು ರಚಿಸಿದರು. "ಜಗನ್ನಾಥದಾಸರು" ಎಂದು ಪ್ರಖ್ಯಾತಿ ಹೊಂದಿದರು.

ನಂತರ ಇವರು ಸತ್ಯಭೋದಕರ ಆಜ್ಞೆಯಂತೆ ಸವಣೂರಿನಲ್ಲಿಯೇ ಇದ್ದು "ಹರಿಕಥಾಮೃತಸಾರ" ವೆಂಬ ದಿವ್ಯಗ್ರಂಥ ಬರೆದರು. ರಚನೆ ಮುಗಿಸಿ ಹೋರಡುವಾಗ ಸತ್ಯಭೋದರ ದಿವ್ಯ ಸ್ತೋತ್ರ ರಚಿಸಿ,ಅವರಿಂದ ಅವರ ಪಾದುಕೆ ಪಡೆದು ತಮ್ಮ ಗೋಪಾಲ ಬುಟ್ಟಿಯನ್ನು ಸಮರ್ಪಿಸಿದರು.

ಹೀಗೆ ಮುಂದೆ ಇವರ ಶಿಷ್ಯ ಸಂತತಿ ಬೆಳೆಯಿತು ಅಂಗಸೂರಿನ ಯೋಗೀಂದ್ರರಾಯರನ್ನು ಕರುಣಿಸಿ ಪ್ರಾಣೀಶದಾಸರನ್ನಾಗಿ ಮಾಡಿದರು.

ಕರ್ಜಗಿ ದಾಸಪ್ಪನಿಗೆ ಶ್ರೀದ ವಿಠಲ್ ಎಂಬ ಅಂಕಿತ ನೀಡಿದರು. ಇವರೇ ಮುಂದೆ ಹರಿಕಥಾಮೃತಸಾರಕ್ಕೆ 24 ನುಡಿಗಳ ಫಲಶೃತಿ ಬರೆದರು.

ಜಗನ್ನಾಥದಾಸರಿಂದ ಅಂಕಿತ ಪಡೆದು ಶಿಷ್ಯತ್ವ ಹೊಂದಿದವರು 21 ಕ್ಕಿಂತ ಹೆಚ್ಚು ಜನರು ಇದ್ದಾರೆ.

ಅನೇಕ ದೀರ್ಘಕೃತಿಗಳು, ಹರಿಕಥಾಮೃತಸಾರ ಸಂಗ್ರಹ ವಿರುವ "ಫಲವಿದು ಬಾಳ್ದುದಕೆ ತತ್ವಸುವ್ವಾಲಿ ಕೀರ್ತನೆಗಳನ್ನು ರಚಿಸಿದ್ದಾರೆ. ಕೊನೆಗೆ 81 ಕ್ಕಿಂತ ಹೆಚ್ಚು ಜನರು ಇದ್ದಾರೆ.

"ಫಲವಿದು ಬಾಳ್ದುದಕೆ" ತತ್ವಸುವ್ವಾಲಿ, ಕೀರ್ತನೆಗಳನ್ನು ರಚಿಸಿದ್ದಾರೆ.ಕೊನೆಗೆ 81 ವಯಸ್ಸಿನಲ್ಲಿ ಭಾದ್ರಪದ ಶುದ್ಧ ನವಮಿ ಭಾನುವಾರ ತಮ್ಮ ಕಾರ್ಯಕ್ಷೇತ್ರವಾದ ಮಾನವೀಯಲ್ಲಿ ದೇಹ ತ್ಯಾಗ ಮಾಡಿದರು. ಆದರೆ ಅವರು ರಚಿಸಿರುವ ಕೃತಿಯ ರೂಪದಲ್ಲಿ ನಮ್ಮೊಡನೆ ಶಾಶ್ವತವಾಗಿ ಇದ್ದು ಉದ್ಧರಿಸುತ್ತಿದ್ದಾರೆ.

**ಇನ್ನು ಮುಂದಿನ ಸಂಚಿಕೆಯಲ್ಲಿ**


ಹರಿಕಥಾಮೃತಸಾರದ ಮೊದಲ ಸಂಧಿಯಾದ 'ಮಂಗಳಾಚರಣ ಸಂಧಿಯ" ಬಗ್ಗೆ ತಿಳಿಯೋಣ.

**"ನಾ ಅಹಂ ಕರ್ತಾ, ಹರಿ ಕರ್ತಾ"**



(- ಮುಂದುವರೆಯುತ್ತದೆ)

# ಮಹೈತರೇಯೋಪನಿಷತ್




**ಕೃತಿ :** "ಮಹೈತರೇಯೋಪನಿಷತ್"

**ಕನ್ನಡಕ್ಕೆ ಅನುವಾದಿಸಿದ ಲೇಖಕರು:**
ಬನ್ನೂರು ರಾಮಚಂದ್ರರಾವ್

**ಪುಟಗಳು :** 92+4

**ಬೆಲೆ :** 50/- ರೂಗಳು

**ಪ್ರ.-** ಶ್ರೀ ಮಾಧವತೀರ್ಥ ಮೂಲ ಮಹಾ ಸಂಸ್ಥಾನ , ತಂಬಿಹಳ್ಳಿ

ಸಾಹಿತ್ಯ - ಸಂಸ್ಕೃತಿ - ಧರ್ಮ ಪ್ರಚಾರಕ್ಕೆ ಅರಮನೆ-ಗುರು ಮನೆಗಳು (ಮಠಗಳು) ಧಾರ್ಮಿಕ ಪೀಠಗಳು ಅನಾದಿ ಕಾಲದಿಂದಲೂ ಪ್ರೋತ್ಸಾಹ-ನೆರವು ನೀಡುತ್ತಿವೆ. ಈ ನಿಟ್ಟಿನಲ್ಲಿ ಕೋಲಾರ ಜಿಲ್ಲೆಯ ತಂಬಿ ಹಳ್ಳಿಯಲ್ಲಿರುವ ಶ್ರೀಮನ್ ಮಾಧವ - ತೀರ್ಥಮೂಲ ಮಹಾಸಂಸ್ಥಾನವು ಈ ಕೃತಿ ಯನ್ನು ಪ್ರಕಟಿಸಿದೆ. ಮಠದ ಉಭಯ ಗುರುವರ್ಯರು ಅನುಗ್ರಹ ಸಂದೇಶ ನೀಡಿ ಕೃತಿಯ ಮಹತ್ತನ್ನು ಸಾರಿದ್ದಾರೆ.

ಉಪನಿಷತ್ತುಗಳಲ್ಲಿ ವಿಶಿಷ್ಟವಾದ ಮಹೈತರೇಯ ಉಪನಿಷತ್ತಿಗೆ ಆಚಾರ್ಯಮಧ್ವರು ಭಾಷ್ಯವನ್ನು ರಚಿಸಿದ್ದು,ಇದನ್ನು ಕನ್ನಡಕ್ಕೆ ಬನ್ನೂರು ರಾಮಚಂದ್ರರಾಯರು ಅನುವಾದಿಸುವುದರ ಮೂಲಕ ಜನ ಸಾಮಾನ್ಯರಿಗೆ ಉಪನಿಷತ್ತುಗಳಲ್ಲಿರುವ ಸಾರವನ್ನು ತಲುಪಿಸುವ ಪ್ರಯತ್ನ ಮಾಡಿರುವರು.

ಮಹೈತರೇಯೋಪನಿಷತ್ತಿನಲ್ಲಿ ಮುಖ್ಯವಾಗಿ ವಿಷ್ಣುವಿನ ಸರ್ವತೋಮುಖ ಮಹಿಮೆಯನ್ನು ಪ್ರತಿಪಾದಿಸುವುದಾಗಿದ್ದು, ಮಾನವರು ಸದಾ ಸತ್ಕಾರ್ಯ ಸದ್ವಿಚಾರಗಳಲ್ಲಿ ತೊಡಗಿರಬೇಕೆಂಬ ಸಂದೇಶವನ್ನೊಳಗೊಂಡಿದೆ.

ಒಂಬತ್ತು ಅಧ್ಯಾಯಗಳಿಂದ ಕೂಡಿರುವ ಈ ಕೃತಿ ರಚನೆಗೆ ಬನ್ನೂರು ರಾಮಚಂದ್ರರಾಯರು ಹಲವು ಸಂಸ್ಕೃತ ಗ್ರಂಥಗಳನ್ನು ಅಧ್ಯಯನ ಮಾಡಿ ಹಲವು ಗುರು ಹಿರಿಯರಿಂದ ಮಾರ್ಗದರ್ಶನ ಪ್ರೇರಣೆಯನ್ನು ಪಡೆದಿದ್ದಾರೆ.

ಸಂಸ್ಕೃತ ಭಾಷೆಯಲ್ಲಿರುವ "ಮಹೈತರೇಯೋಪನಿಷತ್ತಿನ" ಅರಣ್ಯಕ, ಬ್ರಾಹ್ಮಣಗಳ ಮಂತ್ರಸಾರದ ಭಾಷ್ಯವನ್ನು ರಾಮಚಂದ್ರರಾಯರು ಸರ್ವರೂ ತಿಳಿಯುವಂತೆ ಸರಳಾನುವಾದ ಮಾಡಿದ್ದಾರೆ. ಆಧ್ಯಾತ್ಮಿಕ ವಿಷಯಗಳನ್ನು ಅನುವಾದಿಸುವುದು. ಅರ್ಥೈಸುವುದು ಸುಲಭದ ಕೆಲಸವಲ್ಲ,ಅನುವಾದದ ಮೂಲಕ ರಾಮಚಂದ್ರರಾಯರು ಆಧ್ಯಾತ್ಮ ಪಿಪಾಸುಗಳಿಗೆ ಇಂತಹ ಗ್ರಂಥಗಳು ಉಪಯುಕ್ತವೆನಿಸುವುದರಲ್ಲಿ ಸಂದೇಹವಿಲ್ಲ. ಇಂತಹ ಉತ್ತಮ ಕೃತಿಗಳು ಕನ್ನಡಕ್ಕೆ ಸಾಕಷ್ಟು ಬರಲಿ ಎಂದು ಆಶಿಸೋಣ.




ಪುಸ್ತಕ ಪರಿಚಯ: ಕೆ.ಎಸ್.ರಾಮಮೂರ್ತಿ
9449750618

# ಧಾರ್ಮಿಕ ತಳಹದಿಯಲ್ಲಿ ಪರಿಸರ ರಕ್ಷಣೆ

-ಹನುಮಂತ. ಮ. ದೇಶಕುಲಕರ್ಣಿ

9480364915

ಸನಾತನ ಪರಂಪರೆಯಲ್ಲಿ ಮರಗಿಡಗಳನ್ನೂ ದೇವರಂತೆ ಪೂಜಿಸಲಾಗುತ್ತದೆ. ವೃಕ್ಷದಲ್ಲಿ ಬ್ರಹ್ಮ ವಿಷ್ಣು, ಶಿವನನ್ನು ನೋಡುವ ಸಂಸ್ಕೃತಿ ನಮ್ಮದು. ಗಿಡಮರಗಳನ್ನು ಉಳಿಸಬೇಕು ಎಂಬುವುದು ಭಾರತೀಯ ಸಂಸ್ಕೃತಿಯಲ್ಲಿಯೇ ಹಾಸು ಹೊಕ್ಕಾಗಿದೆ.

ಹಿಂದೂ ಧರ್ಮದಲ್ಲಿ ಹುಲ್ಲು, ಗಿಡ, ಮರ, ಬಳ್ಳಿಗಳಿಗೆ ಮತ್ತು ಅವುಗಳ ಉತ್ಪನ್ನಗಳಿಗೆ ಪವಿತ್ರ ಸ್ಥಾನವಿದೆ. ವೈದಿಕ ಗ್ರಂಥಗಳಲ್ಲಿ, ಕಥೆ, ಕಾವ್ಯ ಪುರಾಣಗಳಲ್ಲಿ ಅವುಗಳಿಗೆ ವಿಶೇಷ ಮಹತ್ವ ನೀಡಲಾಗಿದೆ. ಇದು ನಮ್ಮ ಮೌಖಿಕ ಹಾಗೂ ಲಿಖಿತ ದಾಖಲೆಗಳಿಂದ ತಿಳಿದು ಬರುತ್ತಿದೆ. ಇಂತಹ ಸಸ್ಯ ಸಂಪತ್ತು ಪೂಜನೀಯ ಸ್ಥಾನಗಳಿಸಿರುವುದು ಅದರ ವ್ಯವಹಾರಿಕ ಮತ್ತು ಧಾರ್ಮಿಕ ಮಹತ್ವದಿಂದಾಗಿ.

ನವಗ್ರಹ ಮನದಲ್ಲಿ ಗ್ರಹಗಳಿಗೆ ಅನುಗುಣವಾಗಿ ಬಿಳಿ ಎಕ್ಕ, ಮುತ್ತುಗ, ಕಗ್ಗಲಿ, ಉತ್ತರಾಗಿ, ಅರಳಿ, ಅತ್ತಿ, ಬನ್ನಿ, ಗರಿಕೆ ಹಾಗೂ ದರ್ಬೆಯ ಮಹತ್ವ ತಿಳಿಸಲಾಗಿದೆ. ಪಂಚವಟಿ ವನದಲ್ಲಿ ಬಿಲ್ವ ಪತ್ರೆ, ಅಶೋಕ, ಆಲ, ನೆಲ್ಲಿ, ಅರಳಿ, ಶಿವಪಂಚಾಯತ್ ವನದಲ್ಲಿ ಬಿಲ್ವ ತುಂಬೆ, ಅರಳಿ, ತುಳಸಿ, ಕಣಗಿಲೆ, ಬಿಳಿ ಎಕ್ಕ, ಕಗ್ಗಲಿ, ಗರಿಕೆ, ಅಶೋಕ, ಶಂಖಪುಷ್ಪದ ವಿವರಗಳಿವೆ.

ದೈವಿವನದ ಚೈನ್ ಲಿಂಕ್ ಬೇಲಿ, ಚೆಕ್ ಡ್ಯಾಮ್,ಶಿವ ಪಂಚಾಯತ್ ವನ,ಶಿವನ, ನಕ್ಷತ್ರವನ, ನವಗ್ರಹವನ, ಅಶೋಕವನ, ಬೃಹತ್ ಪಂಚವಟಿವನ, ಸಪ್ತರ್ಷಿವನ, ಅಷ್ಟ ದಿಕ್ಪಾಲಕರವನ, ನಂದನವನ, ಸ್ಮೃತಿವನ.

ಸ್ಕಂದ ಪುರಾಣದಲ್ಲಿ ಅಶ್ವತ್ಥ ಮರದಲ್ಲಿ ಶ್ರೀವಿಷ್ಣು ವಾಸವಾಗಿದ್ದಾನೆ ಎಂಬ ಉಲ್ಲೇಖವಿದೆ.ಈ ವೃಕ್ಷವನ್ನು ಅಕ್ಷಯವೃಕ್ಷ ಎಂದೂ ಕೂಡ ಕರೆಯಲಾಗುತ್ತದೆ. ಈ ಮರದ ಎಲೆಗಳು ಎಂದಿಗೂ ಖಾಲಿಯಾಗುವುದಿಲ್ಲ ಎನ್ನಲಾಗುತ್ತದೆ.

ಮೂಲತೋ ಬ್ರಹ್ಮ ರೂಪಾಯ! ಮಧ್ಯತೋ ವಿಷ್ಣುರೂಪಿಣೇ! ಅಗ್ರತಃ ಶಿವರೂಪಾಯ। ವೃಕ್ಷರಾಜಾಯತೇ ನಮಃ ಎಂದು ಮರದಲ್ಲಿಯೇ ತ್ರಿಮೂರ್ತಿಗಳನ್ನು ಕಾಣುವ ಪರಿಪಾಠ ನಮ್ಮಲ್ಲಿದೆ. ವಟಸಾವಿತ್ರಿ ವ್ರತದಂದು ಹೆಂಗಳೆಯರು ಈ ಮರಕ್ಕೆ ದಾರದೆಳೆ ಸುತ್ತಿ ಪತಿ ದೀರ್ಘಾಯುವಾಗಲೆಂದು ಬೇಡಿಕೊಳ್ಳುವ ಸಂಪ್ರದಾಯವಿದೆ. ತ್ರಿಮೂರ್ತಿಗಳ ವಾಸಸ್ಥಾನವಾಗಿದೆ.

ಜ್ಯೋತಿಷ್ಯಶಾಸ್ತ್ರದಲ್ಲಿಯೂ ಕೂಡ ಅಶ್ವತ್ಥ ಮರದ ಮಹಿಮೆಯ ಕುರಿತು ಉಲ್ಲೇಖಿಸಲಾಗಿದೆ. ಶನಿಗೆ ಸಂಬಂಧಿಸಿದ ಸಮಸ್ಯೆಗಳ ನಿವಾರಣೆಗೆ ಅಶ್ವತ್ಥ ಮರ ಬೆಳೆದು ಅದಕ್ಕೆ ನೀರನ್ನು ಅರ್ಪಿಸಲು ಹೇಳಾಗುತ್ತದೆ. ಈ ಮರ ಹಗಲು ಮತ್ತು ರಾತ್ರಿ ಆಕ್ಸಿಜನ್ ನೀಡುವ ಮರವಾಗಿದೆ. ಈ ಮರದ ಬುಡಕ್ಕೆ ಎಷ್ಟು ನೀರು ಹಾಕಲಾಗುವುದೋ, ಇದು ಅಷ್ಟೇ ಆಕ್ಸಿಜನ್ ಹೊರ ಹಾಕುತ್ತದೆ. ಶಾಸ್ತ್ರಗಳಲ್ಲಿ ಈ ಮರವನ್ನು ದೈವೀಯ ವೃಕ್ಷ ಎಂದು ಕರೆಯಲಾಗಿದೆ.

ಧಾರ್ಮಿಕ ಗುಣಗಳಿಗಾಗಿ ಶ್ರೀಗಂಧದ ಮರವು ಅಮೂಲ್ಯವಾದ ಸ್ಥಾನವನ್ನು ಪಡೆದಿದೆ. ಕಣ-ಕಣಗಳುಳ್ಳ ತೊಗಟೆ ನಯವಾಗಿರುತ್ತವೆ. ಗಂಧದ ಕೊರಡನ್ನು ತೇಯ್ದು ಹಣೆ, ಕತ್ತು ಅಥವಾ ಎದೆಗೆ ಲೇಪನ ಮಾಡಿಕೊಳ್ಳುತ್ತಾರೆ. ಬನ್ನಿ ಅಥವಾ ಶಮೀಮರ ಎಂದು ಕರೆಯುತ್ತಾರೆ. ಬನ್ನಿಮರ ಇದ್ದಲ್ಲಿ ನೀರಿನ ಸೆಲೆ ಚೆನ್ನಾಗಿರುತ್ತದೆ. ಇದರ ಬೇರುಗಳು ನೆಲದ ಆಳದಲ್ಲಿ ಹುದುಗಿಕೊಂಡಿದ್ದು, ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ. ಮುನಿಗಳು ಹವನ - ಹೋಮಗಳ ಆರಂಭ ಮಾಡುವಾಗ ಶಮೀವೃಕ್ಷ ಕಾಂಡಗಳನ್ನು ಒಂದಕ್ಕೊಂದು ತಿಕ್ಕುವುದರ ಮೂಲಕ ಅಗ್ನಿ ಪ್ರಜ್ವಲಿಸುವಂತೆ ಮಾಡುತ್ತಿದ್ದರು. ಇದನ್ನು ಅರಣೀ ಮಂಥನವೆಂದು ಹೇಳಲಾಗುತ್ತದೆ. ಪೂಜೆ ಹಾಗೂ ಅರ್ಚನೆ ಮಾಡುವಾಗ ತುಳಸಿಯ ಪ್ರಯೋಗ ಸರ್ವಶ್ರೇಷ್ಠ ಎನ್ನಲಾಗುತ್ತದೆ. ಸಮುದ್ರಮಥನ ಮಾಡುವಾಗ ಬಂದಂತಹ ಅಮೃತ ಕಳಸವನ್ನು ಮಹಾವಿಷ್ಣು ಪಡೆದುಕೊಳ್ಳುತ್ತಾನೆ. ಈ ಸಂದರ್ಭದಲ್ಲಿ ಆತನ ಕಣ್ಣಿನಿಂದ ಆನಂದ ಭಾಷ್ಪ ಉಕ್ಕಿ ಬರುತ್ತದೆ. ಇದರ ಒಂದು ಹನಿ ಕಳಶದಲ್ಲಿ ಬಿದ್ದಾಗ ಅದು ತುಳಸಿಗಿಡವಾಯಿತು. ತುಳಸಿಯೆಂದರೆ ಪಾವಿತ್ರ್ಯ ಮತ್ತು ಸಾತ್ವಿಕತೆಯ ಪ್ರತೀಕ.



**ಮೂಲತೋ ಬ್ರಹ್ಮ ರೂಪಾಯ! ಮಧ್ಯತೋ ವಿಷ್ಣುರೂಪಿಣೇ!**
**ಅಗ್ರತಃ ಶಿವರೂಪಾಯ। ವೃಕ್ಷರಾಜಾಯತೇ ನಮಃ ಎಂದು**
**ಮರದಲ್ಲಿಯೇ ತ್ರಿಮೂರ್ತಿಗಳನ್ನು ಕಾಣುವ ಪರಿಪಾಠ ನಮ್ಮ**
**ಲ್ಲಿದೆ.ವಟಸಾವಿತ್ರಿ ವ್ರತದಂದು ಹೆಂಗಳೆಯರು ಈ ಮರಕ್ಕೆ ದಾರ**
**ದಳೆ ಸುತ್ತಿ ಪತಿ ದೀರ್ಘಾಯುವಾಗಲೆಂದು ಬೇಡಿಕೊಳ್ಳುವ**
**ಸಂಪ್ರದಾಯವಿದೆ. ತ್ರಿಮೂರ್ತಿಗಳ ವಾಸಸ್ಥಾನವಾಗಿದೆ.**

ನೈಸರ್ಗಿಕ ಸಂಪತ್ತಿನ ಸುಸ್ಥಿರ ಬಳಕೆ ಮತ್ತು ಸಂರಕ್ಷಣೆ ಬಗ್ಗೆ ಹಿಂದೂ ಸಂಸ್ಕೃತಿ ಹಲವು ಕಾರ್ಯ ಪದ್ಧತಿಗಳಿವೆ. ಇವುಗಳ ಬಗ್ಗೆ ಇಂದಿನ ಜನಾಂಗಕ್ಕೆ ತಿಳಿಸಬೇಕಾದ ಅವಶ್ಯಕತೆ ಇದೆ. ನಿಸರ್ಗ ಪೂಜೆ ಮಾಡುವುದರ ಜತೆಯಲ್ಲಿ ಅಭಿವೃದ್ಧಿ ಹಾಗೂ ಅರಣ್ಯ ರಕ್ಷಣೆ ಮಾಡಬೇಕು.

ವಾತಾವರಣದ ಸಮತೋಲನ ಕಾಪಾಡುವಲ್ಲಿ ಗಿಡ ಮರಗಳು ಪ್ರಮುಖ ಪಾತ್ರವಹಿಸುವುದರಿಂದ ಗಿಡ,ಮರ ರಕ್ಷಣೆಗೆ ಎಲ್ಲರೂ ಪ್ರಯತ್ನಿಸಬೇಕು. ಅಭಿವೃದ್ಧಿಯ ಹೆಸರಲ್ಲಿ ಹಾಗೂ ವೈಯಕ್ತಿಕ ಲಾಭಕ್ಕಾಗಿ ನಡೆಯುತ್ತಿರುವ ಮರಗಳ ಮಾರಣ ಹೋಮ ನಿಂತು,ಪ್ರತಿಯೊಬ್ಬರಲ್ಲೂ ಗಿಡ,ಮರ ಬೆಳೆಸುವ ಮನೋಭಾವ ಮೂಡಿದಾಗ ಮಾತ್ರ ಪರಿಸರ ಸಂರಕ್ಷಣೆಯಾಗುವ, ಜೀವ ಸಂಕುಲ ಉಳಿಯುವ, ಅಂತರ್ಜಲ ಹೆಚ್ಚಾಗುವ ಸಂಭವವಿದೆ.

ಗಿಡ - ಮರಗಳು, ಹೂ, ಕಾಯಿ, ಹಣ್ಣು, ಮರಮಟ್ಟು, ಸೌದೆ, ಎಲೆ, ಬೇರು, ತೊಗಟೆ, ಕೋಡುಗಳನ್ನು ನಮ್ಮ ಅನುಕೂಲಕ್ಕಾಗಿ ನೀಡುವುದು ಪ್ರತ್ಯಕ್ಷ ಪ್ರಮಾಣ. ಮರಗಳು ಮಣ್ಣಿನ ಸವೆತ, ಗಾಳಿಯ ಹೊಡೆತ, ವಾಯುಮಾಲಿನ್ಯಗಳನ್ನು ತಪ್ಪಿಸುವುದಲ್ಲದೆ, ಜಲ ಶೇಖರಣೆ ಮತ್ತು ಮಳೆಯ ಆಕರ್ಷಣೆಗೆ ಸಹಕಾರಿ. ಆಹಾರ ಹಾಗೂ ಔಷಧಿಗಾಗಿಯೂ ನಾವು ವೃಕ್ಷ ಸಂಕುಲವನ್ನು ಅವಲಂಭಿಸಬೇಕಾಗಿದೆ.ಪದೇ ಪದೇ ತಲೆದೋರುವ ಪರಿಸ್ಥಿತಿಗೆ ಶಾಶ್ವತ ಪರಿಹಾರವೆಂದರೆ, ಇಲ್ಲಿ ಹೆಚ್ಚು, ಹೆಚ್ಚು ಗಿಡ ಮರಗಳನ್ನು ಬೆಳೆಸಬೇಕಲ್ಲದೆ ಅವುಗಳ ಬಗ್ಗೆ ಜನ ಸಮುದಾಯದಲ್ಲಿ ಕಾಳಜಿ ಮೂಡಬೇಕು.

ವರ್ಷವಿಡೀ ಗಿಡ - ಮರಗಳನ್ನು ನೆಟ್ಟು, ಬೆಳೆಸಿ, ಅವುಗಳನ್ನು ಜೋಪಾನ ಮಾಡುವಂತಹ ಕಾರ್ಯಕ್ರಮಗಳು ನಡೆಯುತ್ತಲೇ ಇರಬೇಕು. ಅರಣ್ಯ ಇಲಾಖೆಯು ಈಗಾಗಲೇ ಹಲವಾರು ನೆಡುತೋಪುಗಳಲ್ಲಿ ವಿವಿಧ ಜಾತಿಯ ಲಕ್ಷಾಂತರ ಸಸಿಗಳನ್ನು ಬೆಳೆಸಲಾಗುತ್ತಿದೆ. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಉಚಿತವಾಗಿ ವಿತರಿಸಲಾಗುತ್ತಿದೆ.

ವೃಕ್ಷ ರಕ್ಷಣೆಯಿಂದ ಅರಣ್ಯ ರಕ್ಷಣೆಯಾಗುತ್ತದೆ. ಪರಿಸರ ತಾಜಾ ಹವಾದಿಂದ ಕೂಡಿರುತ್ತದೆ. ಬರಗಾಲ ಬರುವುದಿಲ್ಲ. ಅತಿವೃಷ್ಟಿ-ಅನಾವೃಷ್ಟಿಯ ಕೇಡುಗಾಲ ಇರುವುದಿಲ್ಲ. ಪ್ರಾಣಿ-ಪಕ್ಷಿಗಳು ಸಂತಸದಿಂದ ಇರುತ್ತವೆ. ಕಾಡು ಪ್ರಾಣಿಗಳು ನಾಡಿಗೆ ನುಗ್ಗುವುದಿಲ್ಲ. ರೈತರ ಬೆಳೆ ಹಾಳು ಮಾಡುವುದಿಲ್ಲ. ವನದೇವತೆಯ ಆಶ್ರಯದಲ್ಲಿ ನಾಗದೇವತೆಯ ಕಣ್ಗಾವಲಿನಲ್ಲಿ ನಾಗಬನಗಳು, ದೈವಬನಗಳು ರಕ್ಷಣೆಯಲ್ಲಿರುತ್ತಿದ್ದವು. ಅರಣ್ಯ ರಕ್ಷಿಸುವತ್ತ ಸಂಕಲ್ಪ ತೊಡೋಣ. ನಮ್ಮ ಪೂರ್ವಜರು ವೃಕ್ಷ ರಕ್ಷಣೆಗೆ ಧಾರ್ಮಿಕ ತಳಹದಿ ಹಾಕಿರುವುದು ಸ್ತುತ್ಯಾರ್ಹ, ವಂದನೀಯ.

ಉತ್ತಮಂ ಸ್ವಾರ್ಜಿತಂ ಭುಕ್ತಂ ಮಧ್ಯಮಂ ಪಿತುರಾರ್ಜಿತಂ।
ಕನಿಷ್ಟಂಭಾತೃಮಿತ್ತಂಚಸ್ತ್ರೀವಿತ್ತಮಧಮಾಧಮಂ॥

(ಮಹಾಭಾರತ)

**ತಾನೇ ಸಂಪಾದಿಸಿ ಸುಖಿಸುವುದು ಉತ್ತಮ. ತಂದೆಯ ಸಂಪಾದನೆ ಮಧ್ಯಮ, ಸೋದರನ ಹಣ ಕನಿಷ್ಠ ಆದರೆ ಹೆಂಗಸಿಗೆ ಸೇರಿದ ಹಣದಿಂದ ಸುಖಿಸುವುದು ಅಧಮಾಧಮ.**



# ಸಂಗೀತ ಮತ್ತು ಆಧ್ಯಾತ್ಮ

-ಶ್ರೀಮತಿ. ಮಾಧುರಿ ದೇಶಪಾಂಡೆ
94810 70245

ಸಂಗೀತ ಎಂದರೆ ಮನಕ್ಕೆ ಒಂದು ರೀತಿಯ ಪುಳಕ. ಸಂಗೀತ ಮನುಷ್ಯನ ಧ್ವನಿಯಲ್ಲಿ ಮಾತ್ರ ಇಲ್ಲ,ನೀರಿನ ಹನಿಯಲ್ಲಿ, ಬೀಸುವ ಗಾಳಿಯಲ್ಲಿ ಒಣಗಿದ ಎಲೆಗಳ ಸದ್ದಿನಲ್ಲಿ ಭಗವಂತನ ಸೃಷ್ಟಿಯು ಸಂಗೀತದಿಂದ ಆವರಿಸಿದ ಸಂಗೀತವು ರಾಗ, ತಾಳ,ಲಯ ಬದ್ಧವಾಗಿ ಹಾಡುವ ಕಲೆಯಾಗಿದೆ. ಈ ರೀತಿಯ ರಾಗ,ತಾಳ,ಲಯಬದ್ಧವಾಗಿ ಹಾಡಲು ಗೀತೆಯೊಂದು ಬೇಕೇಬೇಕು. ಅಂತಹ ಗೀತೆ ಭಗವಂತನದ್ದಾಗಿದ್ದರೆ ಅವನಿಗೆ ನಮ್ಮ ಕೃತಜ್ಞತೆಯನ್ನು ಸಲ್ಲಿಸಿದ ಹಾಗೆ ಬಾಯಿಯಿಂದ ಹೊರಡುವ ಮಾತುಗಳು ಎಲ್ಲವೂ ಕಾವ್ಯ ಆಗುವುದಿಲ್ಲ ಹಾಗೆಯೇ ಹಾಡಿದ್ದೆಲ್ಲವೂ ಹಾಡಾಗುವುದಿಲ್ಲ.ಸಂಗೀತವು ನಮ್ಮ ಜೀವನದಲ್ಲಿ ಬಹು ಮುಖ್ಯವಾಗಿದೆ. ಮನಸ್ಸಿನ ಭಾವನೆಗಳನ್ನು ನಿಯಂತ್ರಿಸುವ ಸಾಧನವಾಗಿದೆ.ಎಷ್ಟೇ ಉದ್ವೇಗಗೊಂಡಿದ್ದರೂ ಕೂಡ ಯಾವುದೇ ಒಂದು ವಾದ್ಯದ ಅಥವಾ ಹಾಡಿನ ಸ್ವರಗಳು ಕಿವಿಗೆ ಬಿದ್ದಾಗ ಮನಸ್ಸು ಶಾಂತವಾಗುತ್ತದೆ. ನಾವು ಹಿಂದೂಗಳು ನಾದಬ್ರಹ್ಮ ಎಂದು ಕರೆಯುತ್ತೇವೆ. ಸಂಗೀತದಲ್ಲೂ ಆಧ್ಯಾತ್ಮದ ಆರಂಭ ಆಗುವುದೇ ಭಕ್ತಿಯಿಂದ.

ಮಗು ಅಳುವಾಗಲೇ ರಾಗವಾಗಿ ಅಳುತ್ತದೆ. ಆಗಲೇ ಅದಕ್ಕೆ ಸಂಗೀತದ ಒಲವು ಹುಟ್ಟುತ್ತದೆ.ಮಕ್ಕಳನ್ನು ಬೆಳೆಸುವಾಗ ಜೋಗುಳ ಹಾಡಿಯೇ ಮಲಗಿಸುವುದು ಪ್ರಾಚೀನ ಕಾಲದಿಂದಲೂ ಬಂದ ಅಭ್ಯಾಸ ಇಂದಿಗೂ ನೋಡುತ್ತೇವೆ. ಹಿಂದೂಗಳಲ್ಲಿ ದೇವಾನು ದೇವತೆಗಳು ಕೂಡ ಸಂಗೀತ ನೃತ್ಯದ ಬಗೆಗೆ ಒಲವನ್ನು ಹೊಂದಿದ್ದರು. ಇಂದ್ರನ ಸಭೆಯಲ್ಲಿ ಗಾಯನ ನರ್ತನಗಳು ಸದಾ ನಡೆಯುತ್ತಿತ್ತು, ಈ ಗಾಯನ ನರ್ತನ ಕಲೆಯಲ್ಲಿ ನೈಪುಣ್ಯ ಹೊಂದಿದ್ದ ಒಂದು ಸಮುದಾಯವೇ ಗಂಧರ್ವರು. ಇಷ್ಟಲ್ಲದೇ ಹಿಂದೂ ದೇವತೆಗಳ ಕೈಯಲ್ಲಿ ಒಂದಲ್ಲ ಒಂದು ವಾದ್ಯವು ಶೋಭಿಸುತ್ತದೆ. ಮಹಾ ವಿಷ್ಣುವಿನ ಕೈಯಲ್ಲಿ ಓಂಕಾರ ಹೊಮ್ಮಿಸುವ ಶಂಖವಿರುತ್ತದೆ. ಶಂಖದ ನಾದದಿಂದ ನಕಾರಾತ್ಮಕ ಶಕ್ತಿಗಳು ಓಡುತ್ತವೆ ಎಂಬ ನಂಬಿಕೆ ಇಂದಿಗೂ ಇದೆ. ವಿಜ್ಞಾನಿಗಳೂ ಒಪ್ಪುತ್ತಾರೆ, ಸರಸ್ವತಿಯ ಕೈಯಲ್ಲಿ ವೀಣೆ,ಶಿವನ ಕೈಯಲ್ಲಿ ಡಮರು, ರುದ್ರ ವೀಣೆಯನ್ನು,ಶ್ರೀಕೃಷ್ಣನ ಕೈಯಲ್ಲಿ ಕೊಳಲು,ಬ್ರಹ್ಮನು ಮೃದಂಗವನ್ನು ನುಡಿಸುತ್ತಾನೆಂಬ ನಂಬಿಕೆ. ನಾರದ ಮಹರ್ಷಿಗಳ ತಾಳ ತಂಬೂರಿಯನ್ನು ಸಾಮಾನ್ಯವಾಗಿ ನೋಡಿಯೇ ಇರುತ್ತೇವೆ. ದೇವಸ್ಥಾನವಿರಲಿ, ಮನೆಯೇ ಇರಲಿ ದೇವರ ಪೂಜೆಗೆ ಗಂಟೆಯನ್ನು ಬಾರಿಸುವುದರ ನಂತರವೇ ಆರಂಭಿಸಲಾಗುತ್ತದೆ.

ಸಂಗೀತದಿಂದ ಮನಸ್ಸು ಪ್ರಫುಲ್ಲಿತವಾಗುತ್ತದೆ. ಮನದಲ್ಲಿರುವ ದುಗುಡ ಅಶಾಂತಿಗಳು ದೂರವಾಗುತ್ತವೆ. ಇಂದಿನ ಕಾಲದಲ್ಲೂ ಕೂಡ ಮನಕ್ಕೆ ಆನಂದವೇ ಆಗಿರಲಿ ದುಃಖವೇ ಅಗಿರಲಿ ಸಂಗೀತವನ್ನು ಸವಿಯುತ್ತಾರೆ. ಕೇಳುವುದು ಮತ್ತು ಹಾಡುವುದು ಎರಡೂ ಅಭ್ಯಾಸಗಳು ಭಾರತೀಯರಲ್ಲಿದೆ. ಆದ್ದರಿಂದಲೇ ಸಂಗೀತಕ್ಕೆ ಮನುಷ್ಯರು ದೇವತೆಗಳು ಅಷ್ಟು ಮಹತ್ವವನ್ನು ನೀಡುತ್ತಾರೆ. ಇನ್ನು ಭಕ್ತಿ ಭಾವವೂ ಸಂಗೀತ ಸೇವೆಯ ಮೂಲಕ ನಡೆಯುವಾಗ ಮೈಮರೆಯುವಷ್ಟು ತನ್ಮಯತೆ ಭಗವಂತ ಪ್ರಾರ್ಥನೆಯಲ್ಲಿ ಇರುತ್ತದೆ. ಭಕ್ತಿಯ 9 ವಿಧಗಳಲ್ಲಿ



ಕೀರ್ತನವೂ ಕೂಡ ಒಂದು. ಸರಸ್ವತಿಯನ್ನು ಸಂಗೀತ ಮತ್ತು ವಿದ್ಯೆಯ ಅಧಿದೇವತೆ ಎಂದು ಪೂಜಿಸಲಾಗುತ್ತದೆ. ದಾಸರು ನಲಿದಾಡೆ ನಾಲಿಗೆ ಮೇಲೆ ಎಂದು ಹಾಡುತ್ತಾರೆ.ದಾಸ ಸಾಹಿತ್ಯದಲ್ಲಿ ಕೀರ್ತನೆಗಳನ್ನು ಪದಗಳನ್ನು ರಾಗ, ತಾಳ, ಲಯಬದ್ಧವಾಗಿಯೇ ಬರೆಯಲು ಆರಂಭಿಸಿದವರು ಪುರಂದರದಾಸರು. ಅಂದಿನ ಜನ ಮಾನಸದಲ್ಲಿ ತಮ್ಮ ಹಾಡುಗಳ ಮೂಲಕ ಭಕ್ತಿ ಲೋಕ ನೀತಿ. ಆಧ್ಯಾತ್ಮಿಕ ಚಿಂತನೆ ಭಗವಂತನ ಮಹಿಮೆ ಇವುಗಳೆಲ್ಲದರ ತಿಳುವಳಿಕೆಯನ್ನು ಪಾಮರರಿಗೆ ಮಾಡಿಸಿದವರು. ಪುರಂದರದಾಸರು ಹೇಗೆ ದಾಸ ಶ್ರೇಷ್ಠರೋ ಹಾಗೆಯೇ ಅವರನ್ನು ಸಂಗೀತ ಪಿತಾಮಹ ಎಂದು ಕರೆಯಲಾಗುತ್ತದೆ. ಅವರು ರಚಿಸಿದ ಎಲ್ಲ ಪದ ಕೀರ್ತನೆ ಸುಳಾದಿಗಳಿಗೆ ತಾಳ, ರಾಗ ಸಂಯೋಜಿಸಿ ತಮ್ಮ ಶಿಷ್ಯ ವೃಂದಕ್ಕೆ ಕಲಿಸಿದ್ದರು.ಇಂದೂ ಕೂಡ ಅವರ ಕೀರ್ತನೆಯನ್ನು ಯಾವ ತಾಳ ಯಾವ ರಾಗದಲ್ಲಿ ಹಾಡಬೇಕೆಂದು ನಮೂದಿಸಲಾಗಿರುತ್ತದೆ.







ಭಾರತೀಯ ತತ್ವಜ್ಞಾನದ ಪ್ರಕಾರ ಸಂಗೀತವು ಬಹು ಮುಖ್ಯ ಅಂಶವೇ. ಸಂಗೀತ ಸೇವೆಯ ಮೂಲಕ ಭಗವಂತನ ಬಳಿಯಲ್ಲಿ ಹೆಚ್ಚಿನ ಸಮಯ ವಾಸ ಮಾಡಬಹುದೆಂಬುದು ಭಾರತೀಯ ತತ್ವಜ್ಞಾನಿಗಳ ಅನಿಸಿಕೆ ಏಕೆಂದರೆ ಜ್ಞಾನವು ಎಷ್ಟೇ ಇದ್ದರೂ ಮನಸ್ಸಿನಲ್ಲಿ ಭಗವಂತನ ಬಗೆಗಿನ ಭಕ್ತಿ ಪರವಶತೆಯನ್ನು ಗಾಯನವು ಸೂಕ್ತವಾಗಿ ಹೊರಹೊಮ್ಮಿಸುತ್ತದೆ. ಒಬ್ಬ ಪಂಡಿತನು ಒಬ್ಬ ತತ್ವಜ್ಞಾನಿಯು ಗಂಟೆಗಟ್ಟಲೇ ವಾದ ವಿವಾದ ಪರಮಾತ್ಮನ ಗುಣ ವಿಶೇಷತೆಗಳ ಬಗೆಗೆ ಚರ್ಚಿಸಬಹುದು ಚಿಂತನ ಮಂಥನವನ್ನು ಮಾಡಬಹುದು. ಆದರೆ ಒಂದು ಭಕ್ತಿಮಯವಾದ ಭಗವಂತನ ಗುಣಗಳನ್ನು ಸ್ಮರಿಸುವ ಹಾಡು ಮನಸ್ಸು ಆತ್ಮ ಎರಡನ್ನೂ ಆನಂದಗೊಳಿಸುತ್ತದೆ. ಆದ್ದರಿಂದಲೇ ಪೂಜೆಯನ್ನು ಮಾಡುವಾಗ ದೇವರನಾಮ, ಶ್ಲೋಕಗಳನ್ನು ಹೇಳುತ್ತಾ ಅವನ ಹಿರಿಮೆಯನ್ನು ಕೊಂಡಾಡುವಾಗ ಭಕ್ತಿಭಾವ ಇಮ್ಮಡಿಸುತ್ತದೆ.

ಸಂಗೀತವು ಸಾಮಾನ್ಯ ಜನರನ್ನು ಭಗವಂತನ ಸಮೀಪಕ್ಕೆ ಭಗವಂತನ ಮಹಿಮೆಯನ್ನು ಹಾಡಿ ಹೊಗಳಿ ಸ್ಮರಿಸಲು ಅವಕಾಶ ಮಾಡಿ ಜನರನ್ನು ಭಕ್ತಿ ಮಾರ್ಗಕ್ಕೆ ಸೆಳೆದೊಯ್ಯುತ್ತದೆ. ಇಷ್ಟೇ ಏಕೆ ವೇದಗಳು, ಶ್ಲೋಕಗಳು ಕೂಡ ಲಯಬದ್ಧವಾಗಿಯೇ ಹೇಳಲಾಗುವುದು. ಸಾಮವೇದವು ರಾಗ,ತಾಳ, ಲಯಬದ್ಧವಾಗಿದೆ. ಹಿಂದೂಗಳ ಮೂಲ ನಾಲ್ಕು ವೇದಗಳು ಅವುಗಳಲ್ಲಿ ಸಾಮವೇದವೂ ಒಂದು ಎನ್ನುವ ವಿಷಯದ ಮೇಲೆ ಆಧ್ಯಾತ್ಮಿಕತೆ ಮತ್ತು ತತ್ವಜ್ಞಾನದಲ್ಲಿ ಸಂಗೀತದ ಸ್ಥಾನವೆಂದು ನಾವು ತಿಳಿಯಬಹುದು.

ತತ್ವಜ್ಞಾನಿಯಿರಲಿ ಪಂಡಿತರೇ ಇರಲಿ ಭಕ್ತಿಯ ವಿಚಾರ ಬಂದಾಗ ಭಾವ ಪರವಶರಾಗಿ ಪ್ರಾರ್ಥನೆ ಮಾಡುವಾಗ ಸಂಗೀತ ಇದ್ದೇ ಇರುತ್ತದೆ. ಭಾರತೀಯರಲ್ಲಿ ವಿಶೇಷವಾಗಿ ಹಿಂದೂಗಳಲ್ಲಿ ಸಂಗೀತ ಮತ್ತು ಆಧ್ಯಾತ್ಮ ಜೊತೆ ಜೊತೆಗೆ ನಡೆದಂತೆ ಒಂದೇ ನಾಣ್ಯದ ಎರಡು ಮುಖಗಳಂತೆ ಒಂದಕ್ಕೊಂದು ಪೂರಕವಾಗಿದೆ.

# ವಿಶ್ವದ ವೈಕುಂಠ ಎಂಬ ನಂಬಿಕೆಗೆ ಪಾತ್ರವಾದ ಕ್ಷೇತ್ರ ಜಗನ್ನಾಥಪುರಿ

- ಡಾ|| ಗುರುರಾಜಪೋಶೆಟ್ಟಿಹಳ್ಳಿ
97393 69621



ವಿಶ್ವದ ವೈಕುಂಠ ಎಂಬ ನಂಬಿಕೆಗೆ ಪಾತ್ರವಾದ ಕ್ಷೇತ್ರ ಜಗನ್ನಾಥ ಪುರಿ ಒರಿಸ್ಸಾ(ಈಗಿನ ಒಡಿಶಾ)ಕಲೆ, ಸಾಹಿತ್ಯ, ಸಂಸ್ಕೃತಿಗಳ ಸಮೃದ್ಧ ರಾಜ್ಯ, ಬಂಗಾಳ ಕೊಲ್ಲಿಯ ಸಮುದ್ರ ತೀರದಲ್ಲಿರುವ ಈ ರಾಜ್ಯ ಕ್ರಿ.ಪೂ. 5 ಮತ್ತು 4 ನೇ ಶತಾಬ್ಧಿಯಲ್ಲಿ ದೇಶ ವಿದೇಶಗಳ ಸರಕು ಸಾಗಾಟದ ಬಂದರು ಪ್ರದೇಶವಾಗಿತ್ತು.

ಮೌರ್ಯಅರಸ ಅಶೋಕ ಒಡಿಶಾದಲ್ಲಿ ಇತಿಹಾಸದ ಮಹಾಕ್ರೂರ ಯುದ್ಧವನ್ನು ಕಾಣಿಸಿದ್ದ. ಈ ಯುದ್ಧದ ಸಾವು ನೋವಿನಿಂದ ನೊಂದು ಮುಂದಿನ ದಿನ ಗಳಲ್ಲಿ ಅಶೋಕ ಬೌದ್ಧ ಧರ್ಮ ಸ್ವೀಕರಿಸಿ ಪ್ರಚಾರ ಕಾರ್ಯದಲ್ಲಿ ನಿರತನಾದುದು ಇತಿಹಾಸದ ದೊಡ್ಡ ಬೆಳವಣಿಗೆ.

ಒಡಿಶಾದ ಸಮುದ್ರ ತೀರದಲ್ಲಿ ಪುರಿಜಗನ್ನಾಥ ಪವಿತ್ರ ಧಾಮ್ ಕ್ಷೇತ್ರವನ್ನು ಪುರಾಣಗಳಲ್ಲಿ ಭೂವೈಕುಂಠ ಎಂದು ಕರೆಯಲಾಗಿದೆ. ಇದು ಶ್ರೀಕೃಷ್ಣನಿಗೆ ಸಮರ್ಪಿತ ಕ್ಷೇತ್ರವೂ ಹೌದು. ಇದನ್ನು ನೀಲಾಂಚಲಧಾಮ್ ಎಂದು ಹೇಳುತ್ತಾರೆ. ಭಗವಾನ್, ಜಗನ್ನಾಥ, ಸಹೋದರ ಬಲಭದ್ರ (ಬಲರಾಮ) ಮತ್ತು ತಂಗಿ ದೇವಿ ಸುಭದ್ರಾ ಇವರ ಮೂರ್ತಿಗಳನ್ನು ಇಲ್ಲಿನ ದೇವಸ್ಥಾನದಲ್ಲಿದೆ. ಈ ಮುಂದಿನ ಸಾವಿರ ವರ್ಷಗಳಷ್ಟು ಹಳೆಯದೂ ಹೌದು. ಆಷಾಢ ಮಾಸದ ಶುಕ್ಲಪಕ್ಷದ ದ್ವಿತೀಯದಂದು ವಿಶ್ವ ಖ್ಯಾತಿಯ ಜಗನ್ನಾಥ ಪುರಿ ರಥಯಾತ್ರೆ ಜರುಗುತ್ತದೆ.

ಪುರಿ ಕ್ಷೇತ್ರದಲ್ಲಿ ಭಗವಾನ್ ವಿಷ್ಣು ಪುರುಷೋತ್ತಮ ನೀಲ ಮಾಧವ ರೂಪದಲ್ಲಿ ಅವತರಿಸುವ ನಂಬಿಕೆ ಭಕ್ತರದ್ದು. ತೀರ್ಥ ಸ್ಥಳ ಜಗನ್ನಾಥ ಪುರಿ ಒಂದೊಮ್ಮೆ ಕಳಿಂಗದ ರಾಜಧಾನಿಯೂ ಆಗಿತ್ತು. ಧರ್ಮ ಗ್ರಂಥಗಳಲ್ಲಿ ಇದನ್ನು ಶಂಖ ಕ್ಷೇತ್ರ, ಶ್ರೀಕ್ಷೇತ್ರ ಪುರುಷೋತ್ತಮ ಕ್ಷೇತ್ರ. ಇತ್ಯಾದಿಯಾಗಿಯೂ ಕರೆಯಲಾಗಿದೆ. ಭಾರತದ ಚಾರ್‌ಧಾಮ್‌ಗಳಲ್ಲಿ ಜಗನ್ನಾಥಪುರಿ ಕೂಡಾ ಒಂದೆನಿಸಿದೆ. ಈ ಕ್ಷೇತ್ರ ಕಲಿಯುಗದ ಧಾಮ್ ಆಗಿರುವುದು ಎನ್ನುತ್ತಾರೆ.

ಶಂಕರಾಚಾರ್ಯರು ದೇಶದಲ್ಲಿ ಸ್ಥಾಪಿಸಿದ ನಾಲ್ಕು ಮಠಗಳಲ್ಲಿ ಒಂದು ಮಠ ಪುರಿಯಲ್ಲೂ ಇದ್ದು ಅದನ್ನು 'ಗೋವರ್ಧನ ಪೀಠ' ಹೆಸರಿನಲ್ಲಿ ಕರೆಯಲಾಗಿದೆ. ಸಿಖ್ಖರ ಪ್ರಥಮ ಗುರು ನಾನಕ್ ದೇವ ಅವರೂ ಇಲ್ಲಿಗೆ ಬಂದಿದ್ದು ಈ ಪವಿತ್ರ ಸ್ಥಳ 'ನಾನಕ್ ಮಠ್' ಜಗನ್ನಾಥ್ ಮಂದಿರದ ಎದುರುಗಿದೆ. ಚೈತನ್ಯ ಮಹಾಪ್ರಭು ಇಲ್ಲಿ ದೀರ್ಘಕಾಲ ವಾಸವಿದ್ದು ಭಕ್ತಸಾಧನೆಗೈದರು.



ಕಳಿಂಗ ರಾಜಾ ಚೋಡಗಂಗ್ ಕಾಲದಲ್ಲಿ ನಿರ್ಮಿಸಲಾದ 65 ಮೀಟರ್ ಎತ್ತರದ ಶ್ರೀಜಗನ್ನಾಥ ಮಂದಿರ ಇಲ್ಲಿನ ಪ್ರಮುಖ ಮತ್ತು ಸರ್ವಾಧಿಕ ವಿಶಾಲ ಮಂದಿರ ಆಗಿದೆ. ಇಲ್ಲಿ ಭಗವಾನ್ ಜಗನ್ನಾಥ, ಸುಭದ್ರಾ ಮತ್ತು ಬಲರಾಮರ ಮರದಿಂದ ನಿರ್ಮಿಸಲಾದ ದಿವ್ಯಮೂರ್ತಿಗಳಿವೆ. ಪ್ರತೀದಿನ ಪೂಜೆ-ಆರತಿಯ ಸಮಯದಲ್ಲಿ ಭಕ್ತಿಪೂರ್ಣ ಸಂಗೀತ ಕಾರ್ಯಕ್ರಮಗಳು ಜರುಗುವುದು.



**ಪುರಿ ಜಗನ್ನಾಥ ರಥಯಾತ್ರೆಯು ಆರಂಭ**

ಒಂಭತ್ತು ದಿನಗಳ ಕಾಲ ಈ ರಥಯಾತ್ರೆಯ ಸಂಭ್ರಮ ಇರುತ್ತದೆ. ಭಗವಾನ್ ಜಗನ್ನಾಥ್ ಅಣ್ಣ ಬಲಭದ್ರ (ಬಲರಾಮ) ಮತ್ತು ತಂಗಿ ಸುಭದ್ರೆಯರ ಪ್ರತಿಮೆಗಳನ್ನು ರಥದಲ್ಲಿರಿಸಿ ರಥಯಾತ್ರೆಯು ಆರಂಭವಾಗುತ್ತದೆ. ಮೂವರು ದೇವರುಗಳ ಮೂರ್ತಿಗಳನ್ನು ಶೃಂಗರಿಸಿದ ರಥದಲ್ಲಿರಿಸಿ ಎರಡು ಕಿ.ಮೀಟರ್ ದೂರದ 'ಗುಂಡಿ ಚಾ ' ಮಂದಿರಕ್ಕೆ ತೆರಳಿ ಅಲ್ಲಿ ಒಂಭತ್ತು ದಿನಗಳ ಕಾಲ ಈ ಮೂರ್ತಿಗಳನ್ನು ಇರಿಸಲಾಗುತ್ತದೆ. ನಂತರ ಅಲ್ಲಿಂದ ಮತ್ತೆ ವಾಪಸ್ಸು ರಥಗಳು ಬರುತ್ತವೆ.

ವಿಶೇಷ ಅಂದರೆ ಭಗವಾನ್ ಜಗನ್ನಾಥರ ರಥಯಾತ್ರೆಯ ರಥಗಳಲ್ಲಿ ಮರಕ್ಕೆ ಮಾತ್ರ ಆದ್ಯತೆ. ಯಾವುದೇ ಮೊಳೆಗಳನ್ನು ಬಡಿಯುವುದಿಲ್ಲ. ಲೋಹಗಳ ಬಳಕೆಯೂ ಇಲ್ಲ. ಈ ಮೂರು ರಥಗಳನ್ನು ಅಕ್ಷಯ ತೃತೀಯದಿಂದ ನಿರ್ಮಿಸಲು ಆರಂಭವಾಗುತ್ತದೆ. ವಸಂತ ಪಂಚಮಿಯಿಂದ ಮರಗಳ ಆಯ್ಕೆ ಶುರುವಾಗುತ್ತದೆ.

ಹಳೆಯ ರಥಗಳ ಮರದ ತುಂಡುಗಳನ್ನು ಭಕ್ತರು ಖರೀದಿಸುತ್ತಾರೆ ಹಾಗೂ ತಮ್ಮ ಮನೆಯ ಕಿಟಕಿ-ಬಾಗಿಲುಗಳಿಗೆ ಬಳಸಿಕೊಳ್ಳುತ್ತಾರೆ. ಹನ್ನೆರಡು, ಹದಿನಾಲ್ಕು ವರ್ಷಗಳಿಗೊಮ್ಮೆ ದೇವರ ಮರದ ಮೂರ್ತಿಗಳನ್ನು ಬದಲಿಸಲಾಗುತ್ತದೆ.

ಮೂರ್ತಿಗಳ ನಿರ್ಮಾಣಕ್ಕೆ ಮರಗಳ ಆಯ್ಕೆಯಲ್ಲಿ ಕೆಲವು ವಿಧಿ-ನಿಯಮಗಳು ಇರುತ್ತವೆ. (ಎಲ್ಲಾ ಮರ ಗಳನ್ನು ಬಳಸಲಾಗುವುದಿಲ್ಲ) ಆ ಮರದ ಸಮೀಪ ಕೆರೆ ಇರಬೇಕು, ಸ್ಮಶಾನ ಇರಬೇಕು, ಬುಡದಲ್ಲಿ ಹುತ್ತ ಇರಬೇಕು. ಸುತ್ತ ಮೂರು ಬೆಟ್ಟಗಳು ಸುತ್ತುವ ಲಿದಿರಬೇಕು... ಇತ್ಯಾದಿ ಇತ್ಯಾದಿ

**ಭೋಜನ ತಯಾರಿ ಕೊಠಡಿ**

ಜಗನ್ನಾಥ ಪುರಿ ಮಂದಿರದ ಅಡುಗೆ ಕೋಣೆಗೆ ವಿಶೇಷ ಗೌರವದ ಸ್ಥಾನವಿದೆ. ಇಲ್ಲಿ 'ಮಹಾಪ್ರಸಾದ' ತಯಾರಿಸಲು ವಿಶೇಷ ಕೊಠಡಿಗಳಿವೆ. ಬೇಳೆ, ಅಕ್ಕಿ, ಮೊಸರು, ಪಾಯಸ, ಇವೆಲ್ಲ ಮಹಾಪ್ರಸಾದ ರೂಪದಲ್ಲಿ ಪ್ರಸಿದ್ಧಿ ಪಡೆದಿದ್ದು, ಒಂದು ಪಾಲು ದೇವರಿಗೆ, ಉಳಿದುದು ಭಕ್ತರಿಗೆ ಕಡಿಮೆ ಬೆಲೆಗೆ ಹಂಚಲಾಗುತ್ತದೆ. ಪ್ರತೀದಿನ 72 ಕ್ವಿಂಟಾಲ್ ಅಕ್ಕಿ ಬೇಯಿಸಲಾಗು ತ್ತದೆ. ಇಲ್ಲಿ ನಾಲ್ಕು ನೂರು (400) ಅಡುಗೆ ಕೋಣೆಗಳಿವೆ.

ರಥಯಾತ್ರೆಯ ಸಂದರ್ಭದಲ್ಲಿ ಪ್ರತೀದಿನ ಒಂದು ಲಕ್ಷ 14 ಸಾವಿರದಷ್ಟು ಭಕ್ತ ಜನ ಈ ಅಡುಗೆ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸುತ್ತಾರೆ. ಮಂದಿರದ ಅಂಗಣದಲ್ಲಿ ವಿಮಲಾದೇವಿ ಶಕಿಪೀಠ ವಿದೆ. ವಿಷ್ಣುವಿಗೆ ಇರಿಸಿದ ನೈವೇದ್ಯವನ್ನು ವಿಮಾಲಾ ದೇವಿ ಮೊದಲಿಗೆ ಸ್ವೀಕರಿಸುತ್ತಾಳೆ.

**ಓದುವುದನ್ನು ಬರೆಯುವುದನ್ನು**
**ಕಲಿಯುವುದು ವಿದ್ಯಾಭ್ಯಾಸವಲ್ಲ,**
**ವಿನಯವನ್ನು , ವಿವೇಕವನ್ನು**
**ಕಲಿಸುವುದೇ ವಿದ್ಯಾಭ್ಯಾಸ.**

**– ಮಹಾಭಾರತ**

ದ್ವೈತ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯರಾದ ಶ್ರೀಮಧ್ವಾಚಾರ್ಯರ ನಾಲ್ಕು ಜನ ನೇರ ಪ್ರಮುಖ ಶಿಷ್ಯರೆಂದರೆ ಶ್ರೀಪದ್ಮನಾಭ ತೀರ್ಥರು, ಶ್ರೀ ನರಹರಿತೀರ್ಥರು, ಶ್ರೀಮಾಧವ ತೀರ್ಥರು ಮತು ಶ್ರೀಅಕ್ಷೋಭ್ಯ ತೀರ್ಥರು.ಪದ್ಮನಾಭತೀರ್ಥರೇ ಪ್ರಪ್ರಥಮ ಶಿಷ್ಯರು. ಶ್ರೀಮಧ್ವಾಚಾರ್ಯರು ಬದರಿಕಾಶ್ರಮಕ್ಕೆ ತೆರಳುವ ಮುನ್ನ ಪದ್ಮನಾಭ ತೀರ್ಥರಿಗೆ ಸಂಸ್ಥಾನಾಧಿಪತ್ಯವನ್ನು ಒಪ್ಪಿಸಿದರು. ಪದ್ಮನಾಭತೀರ್ಥರು ಸುಮಾರು ವರ್ಷಗಳ ಕಾಲ ಸಂಸ್ಥಾನವನ್ನಾಳಿ ನಂತರ ನರಹರಿತೀರ್ಥರಿಗೆ ವಹಿಸಿ ಹಂಪೆಯ ಬಳಿ ಇರುವ ಆನೆಗೊಂದಿಯಲ್ಲಿ ಬೃಂದಾವನಸ್ಥರಾದರು. ಅದಲ್ಲದೆ ಪ್ರತ್ಯೇಕವಾಗಿ ತಮ್ಮದೇ ಆದ ಒಂದು ಪರಂಪರೆಯನ್ನು ಪ್ರಾರಂಭಿಸಿ, ಒಂದು ಮತವನ್ನು ಸ್ಥಾಪಿಸಿದರು. ಅದೇ ಇಂದಿನ ಮುಳಬಾಗಿಲು ಮತ, ಶ್ರೀಪಾದರಾಜಮತ ಎಂದು ಪ್ರಸಿದ್ಧವಾಗಿದೆ.

ಶ್ರೀಪದ್ಮನಾಭತೀರ್ಥ ಮತದ ಯತಿ ಪರಂಪರಾ ಮಾಲಿಕೆಯಲ್ಲಿ ಶ್ರೀಪಾದರಾಯರು ಅತ್ಯುಜ್ವಲವಾಗಿ ಪ್ರಕಾಶಿಸುವ ರತ್ನದಂತಿದ್ದಾರೆ. ಇವರ ಜೀವನ ಚರಿತೆ ಹರಿಕೃಪೆಯನ್ನು ಸಾರಿತೋರುವ ಪವಿತ್ರ ರಮ್ಯ ಕಥಾನಕ. ಸುಮಾರು ಕ್ರಿ.ಶ. 1404ರಲ್ಲಿ ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಅಬ್ಬೂರು ಗ್ರಾಮದ ಬಡಕುಟುಂಬದಲ್ಲಿ ಶ್ರೀಪಾದರಾಯರ ಜನನವಾಯಿತು. ಬಾಲ್ಯದ ಹೆಸರು ಲಕ್ಷ್ಮೀನಾರಾಯಣ. ಚಿಕ್ಕವನಾಗಿದ್ದಾಗಲೇ ಪದ್ಮನಾಭತೀರ್ಥ ಪರಂಪರೆಯ ಸ್ವರ್ಣವರ್ಣ ತೀರ್ಥರ ಕೃಪೆಗೆ ಪಾತ್ರರಾಗಿ ಅವರ ಬಳಿಯೇ ಬೆಳೆದು.ಸಚ್ಛಾಸ್ತ್ರ ವಿದ್ಯಾವ್ಯಾಸಂಗ ಮಾಡಿ, ಸನ್ಯಾಸ ಸ್ವೀಕರಿಸಿ ಲಕ್ಷ್ಮೀನಾರಾಯಣ ಯೋಗಿಗಳೆನಿಸಿದರು. ಇವರಿಗೆ ಶ್ರೀಪಾದರಾಯರೆಂಬ ಅಭಿಧಾನ ಲಭಿಸಿದುದು.ಉತ್ತರಾಧಿಮತದ ರಘುನಾಥತೀರ್ಥರಿಂದ. ಬಹುಕಾಲ ಸ್ವರ್ಣವರ್ಣ ತೀರ್ಥರ ಸ್ಥಳವಾದ ಶ್ರೀರಂಗದಲ್ಲಿ ನೆಲಸಿದರು. ನಂತರ ದೇಶಾದ್ಯಂತ ಸಂಚರಿಸಿ, ವಾದಿನಿಗ್ರಹ, ದ್ವೈತ ವೇದಾಂತ ಪ್ರಸಾರ ಧರ್ಮಜಾಗೃತಿ ಮಾಡುತ್ತಾ, ಅನೇಕ ಗ್ರಂಥ ರಚನೆ ಮಾಡಿದರು. ವಾಗ್ವಜ್ರ ಇವರ ಮೇರುಕೃತಿ, ಕಡೆಗೆ ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ಬಂದು ನೆಲಸಿದರು.

ಮುಳಬಾಗಿಲಿನಲ್ಲಿ ಅಕ್ಷೋಭ್ಯ ತೀರ್ಥರು ಅಂಗಾರದಲ್ಲಿ ಬರೆದ ಯೋಗಾನರಸಿಂಹ ದೇವರು ಮತ್ತು ನರಸಿಂಹ ತೀರ್ಥಗಳಿವೆ. ಚಂದ್ರಗಿರಿಯ ಅರಸು ಸಾಳುವ ನರಸಿಂಹನಿಗೆ ರಾಜ ಗುರುಗಳಾದರು. 92 ವರ್ಷಗಳ ಕಾಲದ ಸಾರ್ಥಕ ಬಾಳನ್ನು ಬಾಳಿದ ಶ್ರೀಪಾದರಾಯರು ತಮ್ಮ ಧೀರ್ಘ ಜೀವನದದಲ್ಲಿ ಅನೇಕಾನೇಕ ಮಹಿಮಾತಿಶಯಗಳನ್ನು ತೋರಿ, ಜನರಿಗೆ ದಾರಿದೀವಿಗೆಯಾಗಿ, ಮಾರ್ಗದರ್ಶಕರಾಗಿ ಬೆಳಗಿ,ಭಕ್ತಿ ಯೋಗಿಗಳಾಗಿ. ಕ್ರಿ.ಶ. 1502 ರಲ್ಲಿ ಮುಳಬಾಗಿಲಿನಲ್ಲಿರುವ ಪ್ರಶಾಂತವಾದ ನರಸಿಂಹ ವನದಲ್ಲಿ ವೃಂದಾವನಸ್ಥರಾದರು.

ಶ್ರೀಪಾದರಾಯರು ತಮ್ಮ ಸುಧೀರ್ಘ ಸನ್ಯಾಸ ಜೀವನದಲ್ಲಿ ಸಂಸ್ಥಾನಾಧಿಪತ್ಯವನ್ನು ವಿಜೃಂಭಣೆಯಿಂದಲೂ, ವಿಚಕ್ಷಣತೆಯಿಂದಲೂ ಆಳಿದುದಲ್ಲದೆ, ಅನೇಕಾನೇಕ ಮಹಿಮೆಗಳನ್ನು ತೋರಿದ್ದಾರೆ. ಇವರ ಮಹಿಮಾತಿಶಯಗಳನ್ನು ಇವರ ವಿದ್ಯಾಶಿಷ್ಯರಾದ ವ್ಯಾಸರಾಯರೂ,ವಾದಿರಾಜರು, ಪುರಂದರದಾಸರು, ವಿಜಯದಾಸರೇ ಮೊದಲಾದ ಹರಿದಾಸವರೇಣ್ಯರೂ ಮುಕ್ತಕಂತದಿಂದ ಕೊಂಡಾಡಿದ್ದಾರೆ. ಜ್ಯೇಷ್ಠ ಶುದ್ಧ ಚತುರ್ದಶಿ ಶ್ರೀಪಾದರಾಯರ ಆರಾಧನೆಯ ಪವಿತ್ರ ಸಮಯ.ಈ ಶುಭ ಸಂದರ್ಭದಲ್ಲಿ ಶ್ರೀಪಾದರಾಯರು ತೋರಿದ ಮಹಿಮೆಗಳ ಬಗ್ಗೆ ಅರಿಯುತ್ತಾ ಅವರ ಅಡಿದಾವರೆಗಳಲ್ಲಿ ನಮಿಸೋಣ.

ಒಮ್ಮೆ ಮುಳಬಾಗಿಲಿನ ಶ್ರೀಪಾದರಾಯರ ಶಿಷ್ಯರು ಗುರುಗಳ ಕಾಶೀ ತೀರ್ಥ ಯಾತ್ರಾ ಮತ್ತು ದಿಗ್ವಿಜಯಗಳ ವರ್ಣನಾವೈಭವದಿಂದ ಮಂತ್ರ ಮುಗ್ಧರಾಗಿ,ತಮಗೂ ಗಂಗಾ ಸ್ನಾನ ಮಾಡಿ ಪುನೀತರಾಗಬೇಕೆಂಬ ಮಹದಾಸೆಯಿದೆಯೆಂದೂ, ಅದನ್ನು ಗುರುಗಳು ನೆರವೇರಿಸಿ ಕೊಡಬೇಕೆಂದು ಪ್ರಾರ್ಥಿಸಿದರು. ದಯಾಳುಗಳಾದ ಸ್ವಾಮಿಗಳು ಒಳ್ಳೆಯದು ನಿಮಗಂತೂ ಕಾಶೀಯಾತ್ರೆ ಮಾಡಲು ಶಕ್ತಿ ಸಾಲದು, ಭಕ್ತಾನುಕಂಪಿಯಾದ ಭಾಗೀರಥಿಯೇ ನಿಮ್ಮ ಬಳಿ ಬರಬೇಕೆನ್ನುವಿರಲ್ಲವೆ. ಆಗಲಿ ದೇವಿಯು ಕೃಪೆ ಮಾಡುವಳು ನಾಳೆ ಪ್ರಾತಃಕಾಲ ನರಸಿಂಹ ತೀರ್ಥಕ್ಕೆ ಎಲ್ಲರು ಗಂಗಾಪೂಜೆಗೆ

# ಶ್ರೀ ಪಾದರಾಜರ ಮಹಿಮೆಗಳು

-ಶ್ರೀಮತಿ. ಸುಮನ ಬದರಿನಾಥ್



ಬನ್ನಿರಿ. ನಿಮ್ಮ ಇಷ್ಟಾರ್ಥವು ಸಿದ್ಧಿಸುವುದು ಎಂದಾಜ್ಞೆ ಮಾಡಿದರು. ಆ ಬಡ ಜನರ ಆನಂದಕ್ಕೆ ಪಾರವಿಲ್ಲದಂತಾಯಿತು. ಆಗಲೇ ನರಸಿಂಹ ತೀರ್ಥದ ಬಳಿ ಜನ ದೇವಿಗೆ ಮಡಿಲು ತುಂಬುವ ಸಾಮಾನುಗಳೊಡನೆ, ಪೂಜಾ ಸಾಮಾಗ್ರಿಗಳೊಡನೆ ಸೇರಲಾರಂಭಿಸಿದರು. ಸ್ವಾಮಿಗಳು ರಾತ್ರಿಯೆಲ್ಲಾ ವಿಶೇಷ ಪೂಜಾದಿಗಳನ್ನು ನಡೆಸಿ ಜಾಹ್ನವಿಯನ್ನು ಪ್ರಾರ್ಥಿಸಿದರು. ರಾತ್ರಿ ಕಳೆದು ಬೆಳಗಾಯಿತು. ಸ್ವಾಮಿಗಳು ಪ್ರಾತಃ ಸ್ನಾನಾಹ್ನೀಕಗಳನ್ನು ಮುಗಿಸಿ ನೃಸಿಂಹತೀರ್ಥಕ್ಕೆ ಬಿಜಯ ಮಾಡಿ ಬಂದವರು ನೃಸಿಂಹ ತೀರ್ಥದ ಈಶಾನ್ಯ ಭಾಗದಲ್ಲಿ ಕುಳಿತು ಗಂಗೆಯನ್ನು ಸ್ತೋತ್ರ ಮಾಡಲಾರಂಭಿಸಿದರು. ಇದ್ದಕ್ಕಿದ್ದಂತೆ ಸರ್ವರೂ ಕಾಣುವಂತೆ ಈಶಾನ್ಯಮಾಲೆಯಿಂದ ಶ್ವೇತವರ್ಣ ವಿಶಿಷ್ಠವಾದ ಸ್ವಚ್ಛೋದಕವು ಬುಳಬುಳನೆ ಧಾರೆಧಾರೆಯಾಗಿ ಹರಿದು ಬರಲಾರಂಭಿಸಿತು. ಸರೋವರವು ತುಂಬಿ ತುಳುಕಿತು. ಶ್ರೀಪಾದರಾಯರು ಕೂತ ಬಳಿಯಿಂದ ಪದಚಲನೆ ಮಾಡದೆ ಗಂಗೆಯನ್ನು ಸ್ತೋತ್ರ ಮಾಡುತ್ತಿದ್ದರು. ಕೂತ ಹಾಗೆ ಅವರಿಗೆ ಗಂಗಾ ಸ್ನಾನವಾಯಿತು. ದೇವಿಗೆ ಅರ್ಘ್ಯವಿತ್ತು ವಾಯನಗಳನ್ನರ್ಪಿಸಿದರು. ಈ ಮಹಿಮೆಯನ್ನು ನೋಡಿ ಜನರು ಜಯಘೋಷ ಮಾಡಿದರು. ಸ್ವಾಮಿಗಳ ಆಜ್ಞೆಯನ್ನು ಪಡೆದು ಎಲ್ಲರೂ ಗಂಗಾ ಸ್ನಾನ ಮಾಡಿ, ಗಂಗಾ ಪೂಜೆ ಮಾಡಿ ಕೃತಾರ್ಥರಾದರು. ಇಂದಿಗೂ ಭಾವುಕರು ನೃಸಿಂಹ ತೀರ್ಥದ ಈಶಾನ್ಯ ಭಾಗದಲ್ಲಿ ಸ್ನಾನಮಾಡಿ ಗಂಗಸ್ನಾನ ಮಾಡಿದೆವೆಂದು ತೃಪ್ತಿ ಪಡುತ್ತಾನೆ.

ಶ್ರೀಪಾದರಾಯರ ಮಠದಲ್ಲಿ ಬಹು ಸುಂದರವಾದ ರಂಗವಿಠಲನ ಮೂರ್ತಿ ಪಟ್ಟದ ದೇವರುಗಳಲ್ಲಿ ಒಂದಾಗಿದೆ. ಅದು ಶ್ರೀಪಾದರಾಯರಿಗೆ ದೊರೆತ ಕಥೆ ಸ್ವಾರಸ್ಯಕರವೂ, ಶ್ರೀಪಾದರಾಯರ ಮಹಿಮಾ ಪ್ರದರ್ಶಕವೂ ಆಗಿದೆ. ಒಮ್ಮೆ ಬ್ರಹ್ಮಣ್ಯತೀರ್ಥರು, ಶ್ರೀಪಾದರಾಯರು, ವ್ಯಾಸರಾಯರು, ಪಂಢರಾಪುರದ ಯಾತ್ರೆಗೆ ಬಂದರು. ಆ ಕಾಲದಲ್ಲಿ ಭಗವಂತನು ಶ್ರೀಪಾದರಾಯರಿಗೆ ಸ್ವಪ್ನದಲ್ಲಿ ಸೂಚನೆ ಮಾಡಲು, ಅದರಂತೆ ಭೀಮರಥೀ ತೀರದಲ್ಲಿ ಭೂಖನನ ಮಾಡಿಸಲು ಸ್ವರ್ಣ ಪೀಟಿಕೆಯೊಂದು ದೊರೆಯಿತು. ಶ್ರೀಪಾದರಾಯರು ಅನಾಯಾಸವಾಗಿ ಪೀಟಿಕೆಯನ್ನು ತೆಗೆಯಲು ಅದರಲ್ಲಿ ಎರಡು ಸಂಪುಟಗಳಿದ್ದವು. ಒಂದರಲ್ಲಿ ದೊರೆತ ಪ್ರತಿಮೆ ಸರ್ವಾಂಗ ಸುಂದರವಾದ ನಿಂತ ನಿಲುವಿನ ಶ್ರೀಹರಿಯ ವಿಗ್ರಹವಾಗಿತ್ತು. ಅದಕ್ಕೆ ಶ್ರೀಪಾದರಾಯರು ರಂಗವಿಠಲನೆಂಬ ಅಭಿಧಾನವನ್ನಿತ್ತು. ತಮ್ಮ ನಿತ್ಯ ಪೂಜೆಗೆ ಉಪಾಸ್ಯ ಮೂರ್ತಿಯಾಗಿ ಇಟ್ಟುಕೊಂಡರು. ಈ ರಂಗವಿಠಲನನ್ನು ಪೂರ್ವದಲ್ಲಿ ಜಾಂಬವತಿ ದೇವಿಯು ಪೂಜಿಸುತ್ತಿದ್ದಳಂತೆ. ಜಾಂಬವತಿಯಿಂದ ಅರ್ಜುನನಿಗೂ, ಅನಂತರ ಅವನ ವಂಶಸ್ಥರಿಗೂ ದೊರೆತು ಪಾಂಡವರ ಕಡೆಯ ವಂಶಸ್ಥನಾದ ಕ್ಷೇಮಕಾಂತ ಎಂಬ ಅರಸನಿಂದ ಭೂ ಸ್ಥಾಪಿತವಾಯಿತಂತೆ ಅಂದಿನಿಂದ ಶ್ರೀಪಾದರಾಯರು, ಮೊದಲು ಗೋಪಿನಾಥ ಎಂಬ ಅಂಕಿತದಲ್ಲಿ ದೇವರ ನಾಮಗಳನ್ನು ರಚಿಸುತ್ತಿದ್ದವರು. ರಂಗವಿಠಲ ಎಂಬ ಅಂಕಿತದಲ್ಲಿ ಕೃತಿಗಳನ್ನು ರಚಿಸಲಾರಂಭಿಸಿದರು. ಇಂದಿಗೂ ಈ ರಂಗವಿಠಲ ಶ್ರೀಪಾದರಾಯರ ಸಂಸ್ಥಾನದಲ್ಲಿ ಅರ್ಚಾಮೂರ್ತಿಯಾಗಿ ಪೂಜೆಗೊಳ್ಳುತ್ತಿದೆ.



ಶ್ರೀಪಾದರಾಯರು ಧ್ರುವಾಂಶರೆಂದು ಹರಿದಾಸ ಪರಂಪರೆಯಲ್ಲಿ ಪ್ರಸಿದ್ಧರಾಗಿದ್ದಾರೆ. ಕೃಪೆಯಿಂದ ಅವರಿಗೆ ರಾಜವೈಭವಯೋಗವಿತ್ತು. ವಿಜಯ ನಗರದ ಅರಸನಾಗಿದ್ದ ಸಾಳುವ ನರಸಿಂಹನಿಗೆ ಪ್ರಾಪ್ತವಾಗಿದ್ದ ಬ್ರಹ್ಮಹತ್ಯಾ ದೋಷವನ್ನು ಶ್ರೀಪಾದರಾಯರು ತಮ್ಮ ತಪಃ ಶಕ್ತಿಯಿಂದ ಪರಿಹರಿಸಿದರು. ರಾಜನು ಅವರನ್ನು ತನ್ನ ರಾಜಗುರುಗಳಾಗಿ ಸ್ವೀಕರಿಸಿ ಅವರನ್ನು ತನ್ನ ಸಿಂಹಾಸನದ ಮೇಲೆ ಕೂಡಿಸಿ ರತ್ನಾಭಿಷೇಕ ಮಾಡಿದನು. ಸಿಂಹಾಸನಾರೋಹಣ ಮಾಡಿದಾಗ ಶ್ರೀಪಾದರಾಯರು ಮುತ್ತಿನ ಕವಚ ತೊಟ್ಟಿದ್ದರೆಂತಲೂ ತಲೆಯ ಮೇಲೆ ರತ್ನದ ಕಿರೀಟವನ್ನು ಧರಿಸಿದ್ದರೆಂತಲೂ, ರತ್ನ ಖಚಿತ ಕರ್ಣ ಕುಂಡಲ, ಕಸ್ತೂರಿ ತಿಲಕ, ಶ್ರೀಗಂಧ ಲೇಪನಗಳಿಂದ ಶೋಭಿಸುತ್ತಿದ್ದರೆಂತಲೂ, ಶ್ರೀಪಾದರಾಯರ ಮಹಿಮೆಯನ್ನು ಅವರ ವಿದ್ಯಾಶಿಷ್ಯರಾದ ವ್ಯಾಸರಾಯರು ವರ್ಣಿಸಿರುತ್ತಾರೆ.

ಒಮ್ಮೆ ವ್ಯಾಸರಾಯರು ಬಾಲಕರಾಗಿದ್ದಾಗ ಪುರುಷೋತ್ತಮ ತೀರ್ಥರ ಗುಹೆಯಲ್ಲಿ ಕೃಷ್ಣನ ಧ್ಯಾನದಲ್ಲಿ ತನ್ಮಯರಾಗಿ ಕುಳಿತಿರಲು ಆಗ ಅಲ್ಲಿಗೆ ಬಂದ ಅಜಗರ ಸರ್ಪವೊಂದು ವ್ಯಾಸರಾಯರನ್ನು ಮೆಲ್ಲಗೆ ನುಂಗಲಾರಂಭಿಸಿತು. ಬಹುದೂರದಲ್ಲಿ ಧ್ಯಾನಾಸಕ್ತರಾಗಿದ್ದ ಶ್ರೀಪಾದರಾಯರು ತಮ್ಮ ಜ್ಞಾನ ದೃಷ್ಟಿಯಿಂದ ಅದನ್ನು ತಿಳಿದು ಅಲ್ಲಿಗೆ ಧಾವಿಸಿ ಬಂದರು. ಸರ್ಪವನ್ನು ಕಂಡು ಅದರೊಡನೆ ಸರ್ಪ ಭಾಷೆಯಲ್ಲಿ ಸಂಭಾಷಿಸಿ ವ್ಯಾಸರಾಯರನ್ನು ಬಿಡುವಂತೆ ಅಪ್ಪಣೆ ಮಾಡಿದರು. ಅವರ ಆಜ್ಞೆಯನ್ನು ಶಿರಸಾವಹಿಸಿ ಸರ್ಪವು ವ್ಯಾಸರಾಯರನ್ನು ಬಿಟ್ಟು ಹೊರಟು ಹೋಯಿತು. ಹೀಗೆ ನಾಗಪಾಶದಿಂದ ವ್ಯಾಸರಾಯರನ್ನು ಬಿಡಿಸಿ ಅಪಮೃತ್ಯುವಿನಿಂದ ಕಾಪಾಡಿದರು. ಅಂತಹ ಮಹಿಮೆ ಶ್ರೀಪಾದರಾಯರದು.

ಭಕ್ತರ ಇಷ್ಟಾರ್ಥಗಳನ್ನೆಲ್ಲ ನೆರವೇರಿಸುತ್ತ ಕಾಮಧೇನು, ಕಲ್ಪವೃಕ್ಷದಂತೆ ಕಂಗೊಳಿಸುತ್ತಿದ್ದ ಮಹಾಮಹಿಮರಾದ ಶ್ರೀಪಾದರಾಯರನ್ನು ಒಮ್ಮೆ ಒಬ್ಬ ಕುಹಕಿಯು ಮನಬಂದಂತೆ ದೂಷಿಸಿದನಂತೆ. ಎಲ್ಲರೂ ನೋಡುತ್ತಿದ್ದಂತೆಯೇ ತಕ್ಷಣವೇ ಅವನ ಶರೀರ ಬಿಟ್ಟು ಹೋಗಲು ಪ್ರಾರಂಭಿಸಲು, ಅವನು ಮೊರೆಯಿಡಲು ದಯಾಳುವಾದ ಶ್ರೀಪಾದರಾಯರು ಅವನನ್ನು ರಕ್ಷಿಸಿದರಂತೆ. ತಮ್ಮನ್ನು ದೂಷಿಸಿದವನನ್ನೂ ಕ್ಷಮಿಸಿ ರಕ್ಷಿಸಿದ ದಯಾಪೂರ್ಣ ಮಹಿಮಾನ್ವಿತ ವ್ಯಕ್ತಿತ್ವ ಶ್ರೀಪಾದರಾಯರದು.



ಶ್ರೀಪಾದರಾಯರು ತೋರಿದ ಮತ್ತೊಂದು ಮಹಿಮೆ ಇಂತಿದೆ. ಬ್ರಹ್ಮಹತ್ಯಾ ದೋಷದಿಂದ ಪೀಡಿತನಾಗಿದ್ದ ವಿಪ್ರನೋರ್ವನು ಶರಣಗತನಾಗಿ ತನ್ನ ದೋಷವನ್ನು ಹೋಗಲಾಡಿಸಬೇಕೆಂದು ಬಹು ವಿಧವಾಗಿ ಬೇಡಿಕೊಂಡನು. ಕರುಣಾಶಾಲಿಗಳಾದ ಶ್ರೀಪಾದರಾಯರು ಮಂತ್ರ ಪೂರಿತವಾದ ಶಂಬೋದಕವನ್ನು ಪ್ರೋಕ್ಷಣೆಮಾಡಿ ಅವನ ಪಾಪವನ್ನು ಹೋಗಲಾಡಿಸಿ ಅವನನ್ನು ಪರಿಶುದ್ಧನನ್ನಾಗಿ ಮಾಡಿದರು. ಅದನ್ನು ಕಂಡ ಕೆಲವು ಕುಹಕಿಗಳು ಶಂಬೋದಕ ಪ್ರೋಕ್ಷಣೆಯಿಂದ ಬ್ರಹ್ಮಹತ್ಯೆಯಂತಹ ಮಹಾಪಾತಕ ಪರಿಹಾರವಾಗುವುದುಂಟೆ ಎಂದು ಗುರುಗಳನ್ನು ಅಪಹಾಸ್ಯ ಮಾಡಿದರು. ಅದನ್ನು ತಿಳಿದ ಶ್ರೀಪಾದರಾಯರು ಆ ಕುಹಕಿಗಳನ್ನು ಬರಮಾಡಿಕೊಂಡು ಅವರೆದುರು ಬಿಳಿಯ ಬಟ್ಟೆಯೊಂದನ್ನು ಗೇರಣ್ಣೆಯಲ್ಲಿ ಅದ್ದಿ ಅದರ ಕಪ್ಪನ್ನು ಹೋಗಲಾಡಿಸುವಂತೆ ಅವರಿಗೆ ಸವಾಲು ಹಾಕಿದರು. ಎಷ್ಟು ಪ್ರಯತ್ನಿಸಿದರೂ ಆ ಕುಹಕಿಗಳಿಗೆ ಬಟ್ಟೆಯನ್ನು ಬೆಳ್ಳಗೆ ಮಾಡಲು ಸಾಧ್ಯವಾಗಲೇ ಇಲ್ಲ. ಆಗ ಶ್ರೀಪಾದರಾಯರು ತಮ್ಮ ಶಂಬೋದಕವನ್ನು ಮಂತ್ರ ಪರಸ್ಸರವಾಗಿ ಆ ಬಟ್ಟೆಯ ಮೇಲೆ ಪೋಕ್ಷಿಸಿದರು. ಕೂಡಲೇ ಅದು ಮೊದಲಿನಂತೆಯೇ ಶುಭ್ರವಾಯಿತು. ಕುಹಕಿಗಳು ಕಂಗೆಟ್ಟು ತಮ್ಮ ಅಪಚಾರವನ್ನು ಕ್ಷಮಿಸಬೇಕೆಂದು ಪರಿಪರಿಯಾಗಿ ಬೇಡುತ್ತಾ ಗುರುಗಳಿಗೆ ಶರಣಾಗತರಾದರು. ಕರುಣಾಳುಗಳಾದ ಗುರುಗಳು ಅವರನ್ನು ಕ್ಷಮಿಸಿದರು. ಶ್ರೀಪಾದರಾಯರ ಮಂತ್ರಪೂರಿತ ಶಂಬೋದಕ ಪ್ರೋಕ್ಷಣೆಯ ಮಹಿಮೆಯಿಂದ ಕಪ್ಪು ಬಟ್ಟೆಯೂ ಬೆಳ್ಳಗಾಯಿತು.

ಶ್ರೀಪಾದರಾಯರು ಒಂದು ದಿನ ತಮ್ಮ ಶಿಷ್ಯರಿಗೆ ಪಾಠ ಹೇಳುತ್ತಾ ಕುಳಿತಿರುವಾಗ ಮೇಲಿನಿಂದ ಪುಷ್ಪಗಳುದುರಿದವು. ಶ್ರೀಪಾದರಾಯರು ಕತ್ತೆತ್ತಿ ನೋಡಿದಾಗ ಅವರು ತಮಗೆ ಶ್ರೀಪಾದರಾಯರೆಂದು ಅಭಿಧಾನವಿತ್ತ ಶ್ರೀರಘುನಾಥ ತೀರ್ಥರು ವೈಕುಂಠಕ್ಕೆ ಯಾತ್ರೆಯನ್ನು ಬೆಳಸಿದ್ದನ್ನು ಕಂಡರು. ತಮಗೆ ಆ ಸುಕೃತ ಎಂದು ಲಭಿಸುವುದೆಂದು ಗುರುಗಳತ್ತ ಹಂಬಲದ ದೃಷ್ಟಿ ಬೀರಲು ಶ್ರೀರಘುನಾಥ ತೀರ್ಥರು ಅಲ್ಲಿಂದಲೇ ಸಂಜ್ಞೆ ಮಾಡಿ ತಿಳಿಸಿದರು. ಇದ್ದಕ್ಕಿದಂತೆ ಪಾಠವನ್ನು ನಿಲ್ಲಿಸಿ ಗಗನದತ್ತಲೇ ದಿಟ್ಟಿಸುತ್ತಿದ್ದ ಗುರುಗಳನ್ನು ಕಂಡು ಆಶ್ಚರ್ಯಚಕಿತರಾದ ಶಿಷ್ಯರು ಏನು ವೃತ್ತಾಂತವೆಂದು ಕೇಳಲು ಶ್ರೀಪಾದರಾಯರು ಎಲ್ಲ ವಿಷಯವನ್ನು ಅವರಿಗೆ ವಿವರಿಸಿದರು. ಶ್ರೀರಘುನಾಥತೀರ್ಥರು ಪರಂಧಾಮಕ್ಕೆ ತೆರಳಿದ ದಿನ ಮಾರ್ಗಶಿರ ಬಹುಳ ಪಾಡ್ಯಮಿಯಾದರೆ ಅಲ್ಲಿಂದ ಎರಡು ವರ್ಷ ಆರು ತಿಂಗಳ ಬಳಿಕ ಶ್ರೀಪಾದರಾಯರು ಜ್ಯೇಷ್ಠ ಶುದ್ಧ ಚತುರ್ದಶಿಯಂದು ಶ್ರೀಹರಿಯ ಪಾದಾರವಿಂದವನ್ನು ಸೇರಿದರು. ಹೀಗೆ ವೈಕುಂಠಕ್ಕೆ ತೆರಳುತ್ತಿದ್ದ ಗುರುಗಳನ್ನು ಕಂಡು ಅವರೊಡನೆ ಮೌನವಾಗಿಯೇ ಸಂಭಾಷಿಸಿದುದು. ಶ್ರೀಪಾದರಾಯರ ಮಹಿಮಾದ್ಯೋತಕವಲ್ಲವೆ!

ಶ್ರೀಪಾದರಾಯರು ಎಲ್ಲಿದ್ದರೂ ಅರವತ್ತು ನಾಲ್ಕು ಬಗೆಯ ಪದಾರ್ಥಗಳನ್ನು ಮಾಡಿಸಿ ದೇವರಿಗೆ ನೈವೇದ್ಯಮಾಡಿ ಭಿಕ್ಷಾಸ್ವೀಕಾರ ಮಾಡುತ್ತಿದ್ದರೂ ಪರೀಕ್ಷಾರ್ಥವಾಗಿ ಒಮ್ಮೆ ಒಬ್ಬ ರಾಜನು ಶ್ರೀಪಾದರಾಯರನ್ನು ಒಂದು ಅರಣ್ಯದಲ್ಲಿರುವಂತೆ ಮಾಡಿ ಏನು ಸಾಮಾಗ್ರಿ ಸಿಗದಂತೆ ಮಾಡಿದನು. ಮಧ್ಯಾಹ್ನ ಕಾಲಕ್ಕೆ ಸರಿಯಾಗಿ ಭಗವತ್ಪ್ರೇರಣೆಯಿಂದ ಯಾರೋ ಅರವತ್ತು ನಾಲ್ಕು ಬಗೆಯ ಪದಾರ್ಥ ಸಿದ್ಧಪಡಿಸಲು ಬೇಕಾದ ಸಾಮಾಗ್ರಿಗಳನ್ನೆಲ್ಲ ತಂದು ಕೊಟ್ಟರು. ಕಾಲಾತೀತವಾಗದಂತೆ ಶ್ರೀಪಾದರಾಯರ ಪೂಜೆ ಭಿಕ್ಷೆಗಳು ಎಂದಿನಂತೆ ಕ್ರಮವಾಗಿ ನಡೆದವು. ರಾಜನು ಈ ಸಂಗತಿಯನ್ನು ತಿಳಿದು ತೀವ್ರವಾಗಿ ಪಶ್ಚಾತ್ತಾಪಟ್ಟು ಶರಣಗತನಾದನು ಶ್ರೀಪಾದರಾಯರಲ್ಲಿ ಭಗವಂತನ ಕೃಪೆ ಇಷ್ಟು ಮಹಿಮಾಸ್ಪದವಾದುದು.

ಧ್ರುವಾಂಶರಾದ ಶ್ರೀಪಾದರಾಯರು ತಾವು ಆ ಜನ್ಮದಲ್ಲಿ ಮಾಡಿದ ತಪಸ್ಸಿನ ಫಲವಾಗಿ ದೈವಕೃಪೆಯಿಂದ ಸುಖ ಪ್ರಾರಬ್ಧ ವರ್ಗಕ್ಕೆ ಸೇರಿದವರಾಗಿದ್ದರೂ ಅವರು ಎಲ್ಲಿಯೇ ಇರಲಿ ಪ್ರತಿನಿತ್ಯವೂ ಅಭ್ಯಂಗನ ಸ್ನಾನವನ್ನು ಮಾಡಿಕೊಂಡು ಅರವತ್ತು ನಾಲ್ಕು ಬಗೆಯ ಶಾಖಾಹಾರಗಳನ್ನು ಭಕ್ಷ ಭೋಜ್ಯಾದಿಗಳನ್ನು ಮಾಡಿ ಶ್ರೀಹರಿಗೆ ಸಮರ್ಪಿಸಿ ತಾವೂ ಅದನ್ನು ಭಿಕ್ಷಾ ಸ್ವೀಕಾರ ಮಾಡುತ್ತಿದ್ದರು. ಇದನ್ನು ಕಂಡ ಕೆಲವು ಕುಹಕಿಗಳು ಸನ್ಯಾಸಿಗೇಕೆ ಇಂತಹ ರಾಜಭೋಗವೆಂದು ಅಪಹಾಸ್ಯ ಮಾಡಿ ನಕ್ಕರು. ಆಗ ಶ್ರೀಪಾದರಾಯರು ಊಟ ಮಾಡುವುದೆಲ್ಲಾ ಶ್ರೀ ಹರಿಯ ನೈವೇದ್ಯವೆಂದು ತೋರಿಸಲು,ತಾವು ತಿಂದ ಆಹಾರವನ್ನೆಲ್ಲ ಆ ಕುಹಕಿಗಳ ಎದುರಿಗೆ ತೆಗೆದಿಡಲು ಅವು ಅವರಿಂದ ಭೋಜ್ಯವಾಗದೆ ಹಸಿ ಹಸಿಯಾಗಿಯೇ ಇದ್ದಿತಂತೆ ಇದನ್ನು ಕಂಡು ತಲೆ ತಗ್ಗಿಸಿದರು. ಅಂತಹ ಮಹಿಮಾನ್ವಿತಯತಿಗಳು ಶ್ರೀಪಾದರಾಯರು.

ಹರಿಭಕ್ತಾಗ್ರಣ್ಯರಾದ ಶ್ರೀಪಾದರಾಯರು ತೋರಿದ ಮಹಿಮೆಗಳು ಅಸಂಖ್ಯೆ. ಇವು ಅವುಗಳಲ್ಲಿ ಕೆಲವು ಮಾತ್ರ. ಅವರು ಶರಣಜನ ಸುರಧೇನು ಭಕ್ತಮಂದಾರ ಗುರಕುಲ ತಿಲಕ ಎಂದೆಲ್ಲಾ ಕೊಂಡಾಡಲ್ಪಟ್ಟಿದ್ದಾರೆ.

ಶ್ರೀಪಾದರಾಯರ ಪರಮಪ್ರಿಯ ಶಿಷ್ಯರೂ, ವಿದ್ಯಾಶಿಷ್ಯರೂ ಆದ ಶ್ರೀ ವ್ಯಾಸರಾಯರು ಅವರನ್ನು ಇಂತು ಪಾಡಿ ಪೊಗಳಿರುತ್ತಾರೆ.

ಮಹಿಮೆ ಸಾಲದೆ ಇಷ್ಟೇ
ಮಹಿಮೆ ಸಾಲದೆ
ಅಹಿಶಯನನ ಒಲಮೆಯಿಂದ
ಮಹಿಯೊಳೆಮ್ಮ ಶ್ರೀಪಾದರಾಯರ

ಕರ್ನಾಟಕದ ವೈಷ್ಣವ ದೇವಾಲಯಗಳು

19

# ಹೊಯ್ಸಳರ ಕಲಾ ಸಿರಿ ಹಾರನಹಳ್ಳಿ ಶ್ರೀ ಲಕ್ಷ್ಮೀನರಸಿಂಹ ದೇವಾಲಯ

- ಕೆಂಗೇರಿ ಚಕ್ರಪಾಣಿ
94483 86886

ಹೊಯ್ಸಳರ ನೆಲೆವೀಡಾದ ಹಾಸನ ಜಿಲ್ಲೆಯಲ್ಲಿ ಅವರು ನಿರ್ಮಿಸಿರುವ ಅನೇಕ ದೇವಾಲಯಗಳಿವೆ. ಬೇಲೂರು ಮತ್ತು ಹಳೇಬೀಡಿನ ದೇವಾಲಯಗಳಲ್ಲದೆ ಜಿಲ್ಲಾದ್ಯಂತ ಪ್ರತಿ ತಾಲ್ಲೂಕಿನಲ್ಲಿಯೂ ಅಧಿಕ ಸಂಖ್ಯೆಯಲ್ಲಿ ಹೊಯ್ಸಳ ದೇವಾಲಯಗಳು ಕಾಣಸಿಗುತ್ತದೆ.

ಹಾಸನ ಜಿಲ್ಲೆ ಅರಸೀಕೆರೆ ತಾ ಹಾರನಹಳ್ಳಿಯಲ್ಲಿ ಹೊಯ್ಸಳ ಸುಂದರ ಕಲಾಕೃತಿಗಳಾದ ಲಕ್ಷ್ಮೀನರಸಿಂಹ ಹಾಗೂ ಸದಾಶಿವ ದೇವಾಲಯಗಳು ಬಹಳ ಆಕರ್ಷಕವಾಗಿವೆ.

ಹಾರನಹಳ್ಳಿಯು ತಾಲ್ಲೂಕು ಕೇಂದ್ರವಾದ ಅರಸೀಕೆರೆಗೆ ಸುಮಾರು 6 ಕಿ.ಮೀ. ದೂರದಲ್ಲಿರುವ ಒಂದು ಗ್ರಾಮ. ಹಾರನಹಳ್ಳಿಯು ಪ್ರಾಚೀನ ನಾಮ ಹಾರುವನಹಳ್ಳಿ. ಈ ಗ್ರಾಮವನ್ನು ಹೊಯ್ಸಳ ದೊರೆ ಎರಡನೆಯ ನರಸಿಂಹನ ಮಗ ಸೋಮದೇವ ಹಾಗೂ ಪುತ್ರಿ ಸೋಮದೇವಿಯರು ಸ್ಥಾಪಿಸಿ ಸೋಮನಾಥಪುರ ಎಂದು ನಾಮಕರಣ ಮಾಡಿದ್ದರು ಹಾಗೂ ಇವರ ಕಾಲದಲ್ಲಿ ನಿಜೇಶ್ವರಭಟ್ಟ, ಸುಂಕಣ್ಣ ಮತ್ತು ಗೋಪಣ್ಣ ಕ್ರಿ.ಶ. 1234 ರಲ್ಲಿ ತಮ್ಮ ತಂದೆ ಸಿಂದಗಿಯ ಸ್ವಾಮಿಯ ಹೆಸರಿನಲ್ಲಿ ಹಾರನಹಳ್ಳಿಯಲ್ಲಿ ಶ್ರೀಲಕ್ಷ್ಮೀನರಸಿಂಹ ದೇವಾಲಯವನ್ನು ನಿರ್ಮಿಸಿರುವರು.

ಉಭಯ ವೇದಾಂತ ಪಂಡಿತ, ಶತಾವಧಾನಿ ಎರಡನೆಯ ನರಸಿಂಹನ ಸಂಧಿವಿಗ್ರಹಿ ವಿಶ್ವನಾಥದೇವನು ವೈಜನಾಥ ಭಟ್ಟರಿಂದ ಜಮೀನು ಖರೀದಿಸಿ ದೇವರ ಅಮೃತಪಡಿಗೆ ದತ್ತಿ ಬಿಟ್ಟಿರುವ ಉಲ್ಲೇಖ ಇಲ್ಲಿ ದೊರತಿರುವ ಹೊಯ್ಸಳರ ಶಾಸನದಿಂದ ತಿಳಿದು ಬರುತ್ತದೆ. ಪ್ರಸ್ತುತ ಮೇಲೆ ಉಲ್ಲೇಖಿಸಿರುವ ವಿಶ್ವನಾಥ ದೇವನು ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು, ಕೆಂಬಾಳಿನಲ್ಲಿಯೂ ಸಹಾ ಶ್ರೀಲಕ್ಷ್ಮೀನರಸಿಂಹ ದೇವಾಲಯವನ್ನು ನಿರ್ಮಿಸಿರುವನು. ವಿಶ್ವನಾಥ ದೇವನ ವಂಶದವರೇ ಆದ ಹಿರಿಯ ಮಾಣಿಕ್ಯ ಭಂಡಾರದ ಅಧ್ಯಕ್ಷರಾದ ಏಚಣ್ಣ, ರಾಯಣ್ಣರುಗಳು ಹಾರನಹಳ್ಳಿಯ ಲಕ್ಷ್ಮೀನರಸಿಂಹ ದೇವರಿಗೆ ಕೆಂಬಾಳಿನ ಸಿದ್ಧಾಯದ 12 ಗದ್ಯಾಣವನ್ನು ನರಸಿಂಹ ದೇವರ ಶ್ರೀ ಕಾರ್ಯಕ್ಕೆ ದತ್ತಿ ಬಿಟ್ಟಿರುವುದು. ಇವರೀರ್ವರು ಕೆಂಬಾಳಿನ ನರಸಿಂಹ ದೇವಾಲಯಕ್ಕೂ ಸಹಾ ದಾನವನ್ನು ನೀಡಿರುವುದು ಕೆಂಬಾಳಿನಲ್ಲಿ ದೊರತಿರುವ ಶಾಸನದಿಂದ ತಿಳಿದು ಬರುತ್ತದೆ. ಹೀಗಾಗಿ ವಿಶ್ವನಾಥದೇವ, ರಾಯಣ್ಣ, ಏಚಣ್ಣರುಗಳು ಶ್ರೀಲಕ್ಷ್ಮೀನರಸಿಂಹ ಸ್ವಾಮಿಯಲ್ಲಿ ವಿಶೇಷ ಭಕ್ತಿಯನ್ನು ಹೊಂದಿದ್ದರೆಂದು ಹೇಳಬಹುದು.

ಹಾರನಹಳ್ಳಿಯಲ್ಲಿ ಎಲ್ಲಾ ಪ್ರಾಚೀನ ಅಗ್ರಹಾರಗಳಲ್ಲಿರುವಂತೆ ಊರ ಮಧ್ಯೆ ವಿಷ್ಣು ದೇವಾಲಯ ಹಾಗೂ ಊರಿನ ಈಶಾನ್ಯ ದಿಕ್ಕಿನಲ್ಲಿ, ಪೂರ್ವಾಭಿಮುಖವಾಗಿ ಶಿವಾಲಯವಿದೆ.



ಹಾರನಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯವು ತ್ರಿಕೂಟಾಚಲವಾಗಿದ್ದು, ಪ್ರಧಾನ ಗರ್ಭಗುಡಿಗೆ ಮಾತ್ರ ಅಂದವಾದ ಶಿಖರವಿದೆ. ದೇವಾಲಯವನ್ನು ಪ್ರವೇಶಿಸಿಲು ಮೆಟ್ಟಿಲುಗಳಿವೆ ಹಾಗೂ ಮೆಟ್ಟಿಲುಗಳ ಇಕ್ಕೆಲಗಳಲ್ಲಿ ಸಣ್ಣ ಗೋಪುರಗಳನ್ನು ಹೊಂದಿರುವ ಪುಟ್ಟ ಗುಡಿಗಳಿವೆ. ಇವುಗಳ ವಿನ್ಯಾಸವು ಬೇಲೂರು ಹಳೇಬೀಡಿನ ಗುಡಿಗಳನ್ನು ಹೋಲುತ್ತವೆ. ದೇವಾಲಯವು ನಕ್ಷತ್ರಾಕಾರದ ತಳಹದಿಯ ಮೇಲೆ ನಿಂತಿದೆ. ದೇವಾಲಯದ ಹೊರಗಿನ ಸೌಂದರ್ಯವನ್ನು ವೀಕ್ಷಿಸಲು ಜಗತಿಯಿದ್ದು, ಮೇಲೆ ಪ್ರದಕ್ಷಿಣಾಪಥವಿದೆ. ದೇವಾಲಯದ ಜಗತಿಯ ಮೇಲಿನ ಗೋಡೆಯ ಕೆಳಗಿನ ಭಾಗದಲ್ಲಿ ಎಲ್ಲ ಹೊಯ್ಸಳರ ದೇವಾಲಯಗಳಿರುವಂತೆ ಸೂಕ್ಷ್ಮ ಕೆತ್ತನೆಗಳಿಂದ ಕೂಡಿರುವ ಆರು ಶಿಲಾ ಪಟ್ಟಿಗೆಗಳಿವೆ. ಎಲ್ಲಕ್ಕಿಂತ ಕೆಳಗಿನ ಸಾಲಿನಲ್ಲಿ ಆನೆಗಳಿವೆ. ಅವು ಸೋಮನಾಥಪುರದ ಕೇಶದ ದೇವಾಲಯದ ಅಧಿಷ್ಠಾನ ಪಟ್ಟಿಯಲ್ಲಿರುವ ಗಜಗಳ ಸಾಲಿನಂತಿದ್ದು ಬಹಳ ಸೊಗಸಾಗಿವೆ. ನಂತರ ಮೇಲಿನ ಪಟ್ಟಿಗೆಯಲ್ಲಿ ಕುದುರೆ ಹಾಗೂ ಒಂಟೆಗಳ ಸಾಲುಗಳಿವೆ.





ದೇವಾಲಯದ ಭಿತ್ತಿಯನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಮೇಲಿನ ಭಾಗದಲ್ಲಿ ಸಣ್ಣ ಶಿಖರಗಳಿದ್ದರೆ, ಕೆಳಗಿನ ಹಂತದಲ್ಲಿ ದೇವಾನುದೇವತೆಗಳ ಸಾಲೇ ಇವೆ. ಇವುಗಳು ಬಹಳ ಸೊಗಸಾಗಿದ್ದು ನೋಡುಗರನ್ನು ಆಕರ್ಷಿಸುತ್ತವೆ. ಅವುಗಳಲ್ಲಿ ಭೂವರಾಹ, ಲಕ್ಷ್ಮೀನರಸಿಂಹ, ಮಹಾವಿಷ್ಣುವಿನ ಚತುರ್ವಂಶಶಿ ಮೂರ್ತಿಗಳು, ಗೋವರ್ಧನ ಗಿರಿಧಾರಿ ಕೃಷ್ಣ, ವೇಣುಗೋಪಾಲ ಮುಂತಾದ ಮೂರ್ತಿಗಳು ಬಹಳ ಸುಂದರವಾಗಿವೆ.

ಶ್ರೀಲಕ್ಷ್ಮೀನರಸಿಂಹ ದೇವಾಲಯವು ತ್ರಿಕೂಟಾಚಲವಾಗಿದ್ದು ಪ್ರಧಾನ ಗರ್ಭಗುಡಿಯಲ್ಲಿ ಕೇಶವ ಉತ್ತರ ಗರ್ಭಗುಡಿಯಲ್ಲಿ ಲಕ್ಷ್ಮೀನರಸಿಂಹ ಹಾಗೂ ದಕ್ಷಿಣ ಗುಡಿಯಲ್ಲಿ ವೇಣುಗೋಪಾಲನ ಅಂದವಾದ ಮೂರ್ತಿಗಳಿವೆ. ನವರಂಗದ ಮಧ್ಯಭಾಗದಲ್ಲಿ ತಿರುಗಣೆಯಿಂದ ಮಾಡಿದ ನಾಲ್ಕು ಕಂಭಗಳಿರುವುದು. ಇಲ್ಲಿ ಹತ್ತು ಭುವನೇಶ್ವರಿಗಳಿದ್ದು (ವಿತಾನ), ಮಧ್ಯದ ಭುವನೇಶ್ವರಿಯಲ್ಲಿ ಕೇಶವನ ಶಿಲ್ಪವಿದೆ ಹಾಗೂ ಪೂರ್ವದ ಭುವನೇಶ್ವರಿಯಲ್ಲಿ ಕಾಳಿಂಗಮರ್ಧನ ಕೃಷ್ಣನ ಆಕರ್ಷಕ ಮೂರ್ತಿಯಿದೆ. ಇವು ಅತೀ ಸೂಕ್ಷ್ಮ ಕೆತ್ತನೆಯಿಂದ ಕೂಡಿದ್ದು ಮನಸೂರೆಗೊಳ್ಳುತ್ತದೆ. ಹಾರನಹಳ್ಳಿಯ ಕೇಶವ ದೇವಾಲಯದ ನಿರ್ಮಾತೃ ಮಲಿತಮನಾಗಿರುವನು ಹೊಯ್ಸಳರ ಕಾಲದಲ್ಲಿ ದೊರೆತಿರುವ ಶಿಲ್ಪಿಗಳಲ್ಲಿ ಹೆಚ್ಚು ದೇವಾಲಯಗಳನ್ನು ನಿರ್ಮಿಸಿರುವ ಈತ ಒಬ್ಬ ಮಹಾಶಿಲ್ಪಿ ಜಾವಗಲ್ಲಿನ ಲಕ್ಷ್ಮೀನರಸಿಂಹ ದೇವಾಲಯ ನುಗ್ಗೆಹಳ್ಳಿಯ ಲಕ್ಷ್ಮೀ ನರಸಿಂಹ ದೇವಾಲಯ ವಿಶ್ವಪ್ರಸಿದ್ದ ಸೋಮನಾಥಪುರದ ಕೇಶವ ದೇವಾಲಯ ಹಾಗೂ ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕು ಗೋವಿಂದನಹಳ್ಳಿಯ ಪಂಚಲಿಂಗೇಶ್ವರ ದೇವಾಲಯ ಮುಂತಾದ ದೇವಾ ಲಯಗಳು ಇವನು ನಿರ್ಮಿಸಿರುವ ಇತರ ದೇವಾಲಯಗಳು.

ಹಾರನಹಳ್ಳಿಯ ಗ್ರಾಮದ ಈಶಾನ್ಯ ದಿಕ್ಕಿನಲ್ಲಿರುವ ಸೋಮೇಶ್ವರ ದೇವಾಲಯವು ಇದೇ ಕಾಲಘಟ್ಟಕ್ಕೆ ಸೇರಿದ್ದು ನೋಡಲು ಆಕರ್ಷಕವಾಗಿದೆ. ಈ ದೇವಾಲಯದ ಹೊರ ಭಿತ್ತಿಯಲ್ಲಿ ಪರಶಿವನ ಲೀಲಾ ಮೂರ್ತಿಗಳನ್ನು ಅಳವಳಪಡಿಸಿರುವರು. ಈ ದೇವಾಲಯದಲ್ಲಿ 12 ಭುವನೇಶ್ವರಿಗಳಿದ್ದು, ಅವುಗಳಲ್ಲಿ ಅಷ್ಟ ದಿಕ್ಪಾಲಕರನ್ನು ಹೊಂದಿರುವ ನಡುವಿನ ಭುವನೇಶ್ವರಿಯು ಬಹಳ ಚೆನ್ನಾಗಿ ಮೂಡಿ ಬಂದಿದೆ.

**ಹೀಗೆ ಬನ್ನಿ:**

ಹಾಸನ ಜಿಲ್ಲೆ, ಅರಸಿಕೆರೆ ತಾಲ್ಲೂಕು ಹಾರನಹಳ್ಳಿಗೆ ಬರಲು, ಬೆಂಗಳೂರು - ಹೊನ್ನಾವರ ರಸ್ತೆಯಲ್ಲಿರುವ ಅರಸೀಕೆರೆಗೆ ಬರಬೇಕು. ಅರಸೀಕೆರೆಯ ಊರಿಗೆ ಮೊದಲು ಸಿಗುವ ಹಾರನಹಳ್ಳಿಯ ತಿರುವಿನಲ್ಲಿ ಎಡಕ್ಕೆ ತಿರುಗಿ ಸುಮಾರು 5 ಕಿ.ಮೀ. ಸಾಗಿ ಹಾರನಹಳ್ಳಿಯನ್ನು ಸೇರಬಹುದು. ಹಾರನಹಳ್ಳಿಯ ದೇವಾಲಯಗಳನ್ನು ವೀಕ್ಷಿಸಿ ಮುಂದೆ ಪಯಣಿಸಿ ಜಾವಗಲ್ಲು ಹಾಗೂ ಬೆಳವಾಡಿಯ ಸುಂದರ ಹೊಯ್ಸಳ ದೇವಾಲಯಗಳನ್ನೂ ದರ್ಶಿಸಬಹುದು ಅಥವಾ ಹಾಸನದ ಕಡೆ ಪಯಣಿಸಿದರೆ ದುದ್ದದ ಸಮೀಪವಿರುವ ಕೋರಮಂಗಲದ ಬೂಚೇಶ್ವರ ಹಾಗೂ ಮುದುಗೆರೆಯ ಯೋಗಾನರಸಿಂಹನ ದೇವಾಲಯಗಳನ್ನು ವೀಕ್ಷಿಸಬಹುದು.



# ಸೋರೆಕಾಯಿಯಿಂದ ಆರೋಗ್ಯ ಭಾಗ್ಯ

ತೆಲುಗು ಮೂಲ : ಡಾ॥ ಸಿ. ಮಧುಸೂದನಶರ್ಮ

ಅನುವಾದ : ಡಿ.ಎಸ್. ಬದ್ರಿನಾಥ್

ನಮ್ಮಗಳ ಆರೋಗ್ಯ ಸಂರಕ್ಷಣೆಗಾಗಿ ವಿಸ್ತಾರವಾದ ಈ ವಿಶ್ವದಲ್ಲಿ ಮಹೋಪಕಾರವನ್ನು ಮಾಡುವ ಅಸಂಖ್ಯಾತ ಅಪಾರ ಗುಣಗಳನ್ನು ಹೊಂದಿರುವ ಗಿಡ ಮೂಲಿಕೆಗಳನ್ನು ಪ್ರಕೃತಿ ಕೊಟ್ಟಿದೆ.ಅದರಲ್ಲಿ ಹಲವನ್ನು ಆಹಾರವಾಗಿಯೇ ಮತ್ತೆ ಕೆಲವನ್ನು ಔಷಧಿಯಾಗಿಯೂ ಮತ್ತೆ ಹಲವನ್ನು ಆಹಾರ ಮತ್ತು ಔಷಧಿಗಳಾಗಿಯೂ  ಪ್ರಾಧಾನ್ಯತೆಯನ್ನು ಹೊಂದಿವೆ.

"ಪಂಚ ಭೂತತ್ಮಾಕೇ ದೇಹೇ ಆಹಾರಃ ಪಾಂಚಭೌತಿಕಃ
ವಿಪತ್ಯ ಪಂಚದಾ ಸಮ್ಯಕ್ ಸ್ಥಾನುಗುಣಾನ್ ಅಭಿವರ್ಧಯೇತ್"

ಎನ್ನುತ್ತದೆ. ನಮ್ಮ ವೇದವಾಙ್ಮಯ. ಶರೀರವು ಪಂಚ ಭೂತಾತ್ಮಕಂ, ಆಹಾರ ಪಂಚಭೂತಾತ್ಮಕಂ. ಆಹಾರ ರೂಪ ದಲ್ಲಿ ನಮ್ಮ ದೇಹದಲ್ಲಿ ಪ್ರವೇಶಿಸುವ ಪಂಚಭೂತಾಂಶಗಳು ಜೀರ್ಣವಾಗಿ ವಿವಿಧ ಮಾರ್ಪಾಟುಗಳನ್ನು ಹೊಂದಿ ಧಾತು ಸೇರಿ, ಮಿಳೀನವಾಗಿ ಶರೀರ ಪೋಷಣೆಗೆ, ರಕ್ಷಣೆಗೆ, ಶರೀರಕ್ಕೆ ಶಕ್ತಿಯನ್ನು ಪ್ರಸಾದಿಸಲು ಮತ್ತು ಔಷಧಿಯಾಗಿಯೂ ಸಹಾ ಉಪಯೋಗವಾಗುತ್ತವೆ.

ಕೇವಲ ಆಹರವಾಗೊಂದೇ ಅಲ್ಲದೇ, ಔಷಧಿ ಪ್ರಾಧಾ ನ್ಯತೆಗೂ ಸೈ ಪದಾರ್ಥಗಳಲ್ಲಿ ಸರಳವಾಗಿ ದೊರೆಯುವ ಸೋರೆ ಕಾಯಿಯು ಒಂದು. ಸದಾಕಾಲ ಈ ತರಕಾರಿಯು ಲಭಿಸುವು ದಲ್ಲದೇ  ಎಲ್ಲಾ ವರ್ಗದ ಪ್ರಜೆಗಳಿಗೂ ದೊರಕಬಲ್ಲದಾಗಿದೆ.

ಸೋರೆಕಾಯಿಯಲ್ಲಿ ಹಲವು ಹಚ್ಚ ಹಸಿರಾಗಿಯೂ ಹಲವು ತಿಳಿ ಹಸಿ ಮತ್ತೆ ಹಲವು ತಳ ಹಳದಿ ಬಣ್ಣಗಳಲ್ಲಿ ಇರು ತ್ತವೆ.ಅಲ್ಲದೇ ಉದ್ದವಾಗಿ ಇರುವುವು.ಗುಂಡಾಗಿರುವುವು ಎಂಬ ಎರಡು ಬಗೆಗಳಲ್ಲಿ  ನಮಗೆ ಲಭಿಸುತ್ತದೆ.

ಆಂಗ್ಲದಲ್ಲಿ 'ಬಿಟಲ್‌ಗಾರ್ಡ್' ಎಂದೂ, ಹಿಂದಿಯಲ್ಲಿ 'ಲೋಕಿ' ಎಂದು ಕರೆಯಲ್ಪಡುವ ಇದರ ಶಾಸ್ತ್ರೀಯನಾಮ ಧೇಯ 'ಲಾಜಿನೇರಿಯಾ ಸಾಸಿರೆ ಇವು ಕುಕರ್‌ಬಿಟೀಸಿ ಎಂಬ ವೃಕ್ಷ ಕುಟುಂಬಕ್ಕೆ ಸೇರಿದ ತರಕಾರಿ.

ಸೋರೆಕಾಯಿಯ ತವ್ವೆ,ಸಾಂಬಾರು,ಚಟ್ನಿ,ಪಲ್ಯ, ಹವ್ವ ಗಳ ತಯಾರಿಕೆಯಲ್ಲಿ ವಿನಿಯೋಗಿಸುವುದು ನಮ್ಮೆಲ್ಲರ ಪರಿ ಪಾಠ ಎಳೆ ಸೋರೆಕಾಯಿಯನ್ನು ಬಳಸುವುದರಿಂದ ಉತ್ತಮ ವಾದ ಪ್ರಯೋಜನವು ಕೈಗೂಡುತ್ತದೆ.

ಈ ಸೋರೆಕಾಯಿ ತಂಪನ್ನುಂಟು ಮಾಡುವ ಆಹಾರ ಪದಾರ್ಥ.ಇದನ್ನು ಸೇವಿಸುವುದರಿಂದ ಹಲವರಲ್ಲಿ ಕಫವು ವೃದ್ಧಿಸುವ ಅವಕಾಶವುಂಟು.ಅಂತಹ ಪರಿಸ್ಥಿತಿಯಲ್ಲಿ 200 ಮಿ.ಲೀ. ಕುದಿಯುವ ನೀರಿನಲ್ಲಿ ಅರ್ಧ ಟೀಸ್ಪೂನ್ ಜೀರಿಗೆ ಪುಡಿ ಹಾಕಿ,ಇಳಿಸಿ ಉಗುರು ಬೆಚ್ಚಗಿರುವಾಗಲೇ ಶೋಧಿಸಿ,ಹಾಗೆ ಇಲ್ಲವೇ ಸ್ವಲ್ಪ ಕಲ್ಲು ಸಕ್ಕರೆ ಕಲಿಸಿ ಸೇವಿಸುವುದು ಒಳ್ಳೆಯದು.

ಸೋರೆಕಾಯಿಯನ್ನು ವಿವಿಧ ವ್ಯಾಧಿಗಳಿಗೆ ಔಷಧಿಯಾಗಿ ಹೇಗೆ ಸದ್ವಿನಿಯೋಗಪಡಿಸಿಕೊಳ್ಳಬಹುದೆಂದು ತಿಳಿಯೋಣ.





### ಮೂತ್ರ ವಿಸರ್ಜನೆಯ ತೊಂದರೆಗಳಿಗೆ

ದಿನವೂ ಒಂದು ಬಾರಿ 200 ಮಿ.ಲೀ. ನೀರಿನಲ್ಲಿ ಸಿಪ್ಪೆ ತೆಗೆದು ಹಾಕಿದ ಸೋರೆಕಾಯಿಯ ಪೇಸ್ಟ್ 10 ಗ್ರಾಂ, ಅರ್ಧ ಟೀ ಸ್ಪೂನ್ ಜೀರಿಗೆ, ಅರ್ಧ ಟೀ ಸ್ಪೂನ್ ಹವೀಜ, ಅರ್ಧ ಟೀ ಸ್ಪೂನ್,ತಾಳೆ ಕಲ್ಲುಸಕ್ಕರೆ ಕಲಿಸಿ,100ಮಿ.ಲೀ ನೀರು ಉಳಿಯುವಂತೆ ಮರಳಿಸಿ, ಇಳಿಸಿ,ಬಿಸಿಯಾರಿದ ನಂತರ ಶೋಧಿಸಿ ಸೇವಿಸುತ್ತಿದ್ದರೆ ಮೂತ್ರವಿಸರ್ಜನೆಯ ಉರಿ, ಮೂತ್ರ ನಿಯಂತ್ರಣ ಇಲ್ಲದೇ ಹೋಗುವುದು, ಮೂತ್ರದಲ್ಲಿ ರಕ್ತ ಬರುವುದು, ಮೂತ್ರ ಸರಾಗವಾಗಿ ಬಾರದಿರುವುದು ಇಂತಹ ಸಮಸ್ಯೆಗಳೊಂದಿಗೆ ಹೊಟ್ಟೆಯ ಉರಿ ಸಹಾ ಶಮನಗೊಳ್ಳುತ್ತದೆ. ಮಧುಮೇಹ ರೋಗಿಗಳು ಕಲ್ಲುಸಕ್ಕರೆ ಹೊರತಾದ ಔಷಧಿಯನ್ನು ತಯಾರಿಸಿಕೊಂಡು ಬಳಸಬಹುದು.

### ಅಧಿಕ ತೂಕಕ್ಕೆ

ಮುಂಜಾನೆ ಖಾಲಿ ಹೊಟ್ಟೆಯಲ್ಲಿ 100 ಮಿ.ಲೀ. ಸೋರೆಕಾಯಿ ರಸದಲ್ಲಿ 25 ಮಿ.ಲೀ. ನೀರು, ಒಂದು ಗ್ರಾಂ ದಾಲ್ಚಿನ್ನಿ ಚಕ್ಕೆ ಕಟ್ಟಿದ ತುಂಡುಗಳು, ಒಂದು ಗ್ರಾಂ ಅರಿಶಿನ, 3-4 ಚಿಟಿಕೆ ಉಪ್ಪು, 3-4 ಚಿಟಿಕೆ ಮೆಣಸುಕಾಳಿನ ಪುಡಿ ಮಾಡಿ,ಸ್ವಲ್ಪ ಹೊತ್ತು ಮರಳಿಸಿ, ಕೆಳಗಿಳಿಸಿ ಶೋಧಿಸಿ ಕುಡಿಯಬೇಕು. ಹೀಗೆ ಬಳಸುವುದರಿಂದ ಹಸಿವು ನಿಯಂತ್ರಣಗೊಂಡು ದೇಹ ತೂಕ ಇಳಿಯುವುದಲ್ಲದೇ ಶರೀರಕ್ಕೆ ಹಾನಿಯನ್ನುಂಟು ಮಾಡುವ ಕೆಟ್ಟ ಕೊಲೆಸ್ಟ್ರಾಲ್ ಕಡಿಮೆಯಾಗಿ ಒಳ್ಳೆಯ ಕೊಬ್ಬಿನಾಂಶ ಬೆಳೆಯುತ್ತದೆ. ಹೃದ್ರೋಗಕ್ಕೆ ಒಳ್ಳೆಯದು.ರಕ್ತನಾಳದಲ್ಲಿನ ಪ್ರತಿರೋಧಕಗಳು ಬೆಳೆಯದಂತೆ ಕಾಪಾಡುತ್ತದೆ.

### ನೆರೆಗೊದಲಿಗೆ

ವಾರಕ್ಕೆ 2 ಅಥವಾ 3 ಬಾರಿ ತಕ್ಕಷ್ಟು ಸೋರೆಕಾಯಿ ಪೇಸ್ಟನ್ನು ನೆಲ್ಲಿಕಾಯಿ ಹೋಳುಗಳನ್ನು ನೆನೆಸಿಟ್ಟ ನೀರಿಗೆ ತಕ್ಕಷ್ಟು ಕಲಿಸಿ ಕೂದಲಿನ ಬುಡಕ್ಕೆ ಹಚ್ಚುತ್ತಾ 10 ನಿಮಿಷ ಮರ್ದನ ಮಾಡಿ ಒಂದು ತಾಸಿನ ನಂತರ ತಲೆಸ್ನಾನ ಮಾಡಿದರೆ ಬಾಲ್ಯದಲ್ಲಿ ಕೂದಲು ನೆರೆಯುವುದನ್ನು ತಡೆಯಬಹುದು.

### ಕಾಲೆರಾ ಸೋಂಕುಗಳಿಂದುಂಟಾಗುವ ಬಲಹೀನತೆ ನಿರ್ಜಲೀಕರಣಕ್ಕೆ

ಸೋರೆಕಾಯಿ ರಸ ಎಳನೀರು, ಸಮಾನವಾಗಿ ಕಲಿಸಿಟ್ಟುಕೊಂಡು ವೈದ್ಯರ ಸಲಹೆ ಮೇರೆಗೆ ನಿರ್ದಿಷ್ಟ ಔಷಧಿಗಳೊಂದಿಗೆ 10 ನಿಮಿಷಕ್ಕೊಂದು ಬಾರಿ ಈ ದ್ರವವು 30-60 ಮಿ.ಲೀ.ವರೆಗೆ ಹೇಳಿದಂತೆ ಬಳಸಿದಲ್ಲಿ ಶೀಘ್ರವಾಗಿ ಆಯಾ ಸಮಸ್ಯೆಗಳಿಂದ ಹೊರಬರಬಹುದು.

### ಅತಿ ಉಷ್ಣ ತಗ್ಗಲು

ದಿನವೂ ಒಂದು ಬಾರಿ 250 ಮಿ.ಲೀ. ನೀರಿನಲ್ಲಿ ಸೋರೆಕಾಯಿ ಸಿಪ್ಪೆಯನ್ನು ತುಂಡುಗಳಾಗಿ ಕತ್ತರಿಸಿ 100 ಗ್ರಾಂ ತೆಗೆದುಕೊಂಡು ಅದಕ್ಕೆ ಹೆಸರು ಬೇಳೆ, 10 ಗ್ರಾಂ ಕಲಿಸಿ ಅರ್ಧಗಂಟೆ ನೆನೆಸಿ, 100 ಮಿ.ಲೀ. ನೀರು ಮಿಗಿಲುವಂತೆ ಕುದಿಸಿ, ಕೆಳಗಿಳಿಸಿ, ಬಿಸಿಯಾರಿದ ಶೋಧಿಸಿ ಸೇವಿಸುತ್ತಿದ್ದರೆ ಅತಿಯಾದ ಉಷ್ಣ ತಗ್ಗುತ್ತದೆ.ದಾಹ,ಮೈಯುರಿ,ಕಣ್ಣುರಿ,ಜ್ವರ,ಬಂದಂತಿರುವುದು. ಅಂತಹ ದೋಷಗಳು ನಿವಾರಣೆಗೊಳ್ಳುತ್ತವೆ.ಹೊಟ್ಟೆ ಕರುಳಿನಲ್ಲಿ ಉಂಟಾದ ವೃಣಗಳು ತಗ್ಗಲು ಸಹಾ ಈ ಆಹಾರ ಔಷಧ ಉಪಯೋಗವಾಗುತ್ತದೆ.

### ನಿದ್ರ ಹೀನತೆ

200 ಮಿ.ಲೀ ಸೋರೆಕಾಯಿ ರಸ, 50 ಮಿ.ಲಿ. ಎಳ್ಳೆಣ್ಣೆ ಕಲಿಸಿ, ರಸವೆಲ್ಲಾ ಉಡುಗಿ ಬರಿ ಎಣ್ಣೆ ಮಿಗುಲುವಂತೆ ಕುದಿಸಿ, ಇಳಿಸಿ, ಶೋಧಿಸಿ, ಬಿಸಿಯಾರಿದ ನಂತರ ಕೇಶತೈಲವಾಗಿ ಬಳಸುತ್ತಿದ್ದರೆ ಒಳ್ಳೆಯ ನಿದ್ರೆ ಬರುತ್ತದೆ. ತಲೆಯ ಚರ್ಮಕಾದಂತಿರುವುದು. ಕಣ್ಣುರಿ ಸಹಾ ಕಡಿಮೆಯಾಗುತ್ತದೆ. ಕೈ ಕಾಲುಗಳಿಗೆ ಲೇಪನ ಮಾಡುತ್ತಿದ್ದರೆ ಕೈಕಾಲಿನ ಸೀಳುವಿಕೆ ಸಹಾ ತಗ್ಗುತ್ತದೆ.

### ಚರ್ಮ ಉರಿಯುತ್ತಿದ್ದರೆ

ದಿನವೂ ಒಂದು ಬಾರಿ ಸೋರೆಕಾಯಿ ರಸವನ್ನು ಲೇಪನವನ್ನು ಮಾಡುತ್ತಿದ್ದರೆ ಅಂಗೈ ಅಂಗಾಲು ಉರಿ, ದೇಹವೆಲ್ಲ ಉರಿ, ಶರೀರದ ನವೆ ತಗ್ಗಿ ಹೋಗುತ್ತದೆ.



# ನಮಾಮಿ ಗೋವಿಂದ

**ಪಂಚಗವ್ಯ:** ಹಸುವಿನಿಂದ ಪ್ರಸಾದಿಸಲ್ಪಡುವ ಪಂಚಗವ್ಯಗಳು ತಿ.ತಿ.ದೇ., ಅವರ ನೇತೃತ್ವದಲ್ಲಿ ಆಯುರ್ವೇದಿಕ್ ಉತ್ಪಾದನೆಗಳಾಗಿ ಸಿದ್ಧಗೊಂಡಿವೆ. ಹಾಗಾಗಿ ಒಂದೊಂದು ಆಕೃತಿಯಲ್ಲಿ ಉತ್ಪಾದನೆಯೂ ಒಂದೊಂದು ಅದೆಷ್ಟೋ ಜಾಗೃತವಾಗಿ ತಯಾರಿಸಲ್ಪಟ್ಟಿದೆ.

**ಅಗರಬತ್ತಿಗಳು:** ತಿರುಮಲೆ ಸ್ವಾಮಿಯವರು ಮತ್ತು ತಿರುಮಲೆ ತಿರುಪತಿ ದೇವಸ್ಥಾನ, ತಿರುಪತಿ ಅನುಬಂಧ ದೇವಾಲಯದಲ್ಲಿ ದೇವತಾಮೂರ್ತಿಗಳಿಗೆ ಅಲಂಕರಿಸಲ್ಪಟ್ಟ ಪುಷ್ಪಾ ನಿರ್ಮಾಲ್ಯಗಳಿಂದ ಕಾಲಕಾಲಕ್ಕೆ ಪರಿಮಳ ಯುಕ್ತವಾದ ಅಗರಬತ್ತಿಗಳು ತಯಾರಿಸಲ್ಪಟ್ಟಿದೆ.

**ಪುಷ್ಪಪ್ರಸಾದ:** ತಿರುಪತಿ ಸ್ವಾಮಿಯವರು ಹಾಗೂ ತಿರುಮಲೆ ತಿರುಪತಿ ದೇವಸ್ಥಾನ, ತಿರುಪತಿ ಅನುಬಂಧ ದೇವಾಲಯದಲ್ಲಿ ದೇವತಾ ಮೂರ್ತಿಗಳಿಗೆ ಅಲಂಕರಿಸಲ್ಪಟ್ಟ ಪುಷ್ಪ ನಿರ್ಮಾಲ್ಯಗಳಿಂದ ಫೋಟೋ ಫ್ರೇಮ್‌ಗಳು, ಕೀಚೈನ್‌ಗಳು ಪೇಪರ್ ವೈಟ್ಸ್, ಡಾಲರ್ಸ್, ಪೆನ್ನುಗಳು ಮತ್ತು ಪೆನ್‌ಸ್ಟ್ಯಾಂಡ್‌ಗಳು ಮುಂತಾದ ಉತ್ಪಾದನೆಗಳನ್ನು ಡ್ರೈಫ್ಲವರ್ ಟೆಕ್ನಾಲಜಿಯಿಂದ ತಯಾರಿಸಲ್ಪಟ್ಟಿವೆ.







Designed by SVBC,TTD

# ತಿರುಮಲ ತಿರುಪತಿ ದೇವಸ್ಥಾನಗಳು

## ಪಂಚಗವ್ಯ ಉತ್ಪಾದನೆಗಳು

**ಉರ್ವಿನಾಸಲ್ ಡ್ರಾಪ್ಸ್**
ನೆಗಡಿ, ತಲೆನೋವುಗಳನ್ನು ನಿವಾರಿಸುತ್ತದೆ. (ಕಣ್ಣು,ಮೂಗು, ಕಿವಿ)

**ಭೂಮಿಹರ್ಬಲ್ ಫ್ಲೋರ್ ಕ್ಲೀನರ್**
ನೆಲದ ಮೇಲಿನ ಬ್ಯಾಕ್ಟೀರಿಯಾಗಳನ್ನು ನಾಶಪಡಿಸುತ್ತದೆ.

**ನಂದಿನಿ ಗೋ - ಅರ್ಕ್**
ಸತತವಾಗಿ ಕ್ರಮದಿಂದ ಬಳಸಿದಲ್ಲಿ ದೀರ್ಘಾಯುಷ್ಯ ಜೀವನಕಾಲದ ಪ್ರಮಾಣ ವೃದ್ಧಿಸುತ್ತದೆ.

**ಕ್ಷಮಾ ಕೌ - ಡಂಗ್ ಕೇಕ್ಸ್**
ಯಜ್ಞ,ಯೋಗಾದಿಗಳಿಗೆ ಉತ್ತಮವಾದ ವಾತಾವರಣವನ್ನು ಕಲ್ಪಿಸಿ ಕೊಡುತ್ತದೆ.

**ಭುವತಿ ಡಂಗ್ ಲಾಗ್ಸ್ (ಕೇಕ್ಸ್)**
ಹೋಮ - ಹವನಾದಿಗಳಿಗೆ ಶ್ರೇಷ್ಠವಾದ ಪರಿಸರವನ್ನು ಕಲ್ಪಿಸಿ ಕೊಡುತ್ತದೆ.

**ಅವನಿಧೂಪ ಚೂರ್ಣ**
ಸುವಾಸನೆಯನ್ನು ಪಸರಿಸುತ್ತದೆ.

**ಧರಣಿ ಊದುಬತ್ತಿ**
ಆಹ್ಲಾದಕರ ವಾತಾವರಣವನ್ನು ನಿರ್ಮಿಸುತ್ತದೆ.

**ಧಾತ್ರಿ ಸಾಂಬ್ರಾಣಿ ಕಪ್ಸ್**
ಉತ್ತಮ ಆರೋಗ್ಯವನ್ನು ಮೈಗೂಡಿಸುತ್ತದೆ.

**ವೈಷ್ಣವಿ ಧೂಪ್ ಸ್ಟಿಕ್ಸ್**
ವಾತಾವರಣವನ್ನು ಶುಭ್ರವನ್ನಾಗಿ ಮಾಡುತ್ತದೆ.

**ವಾರಾಹಿ ಧೂಪ್ ಕೋನ್ಸ್**
ಸುತ್ತಮುತ್ತಲಿನ ಪರಿಸರವನ್ನು ಪವಿತ್ರಗೊಳಿಸುತ್ತದೆ.

**ಪೃಥ್ವಿ ವಿಭೂತಿ**
ಈಶ್ವರಾನುಗ್ರಹ ಪ್ರಾಪ್ತಿಯನ್ನು ಕಲ್ಪಿಸುತ್ತದೆ.

**ಧನ್ವಿಕ ಹರ್ಬಲ್ ಟೂತ್‌ಪೌಡರ್**
ಹಲ್ಲು ಮತ್ತು ವಸಡುಗಳನ್ನು ರಕ್ಷಿಸುತ್ತದೆ.

**ಹಿರಣ್ಮಯಿ ಹರ್ಬಲ್ ಫೇಸ್ ಪ್ಯಾಕ್**
ಕಾಂತಿ ಮತ್ತು ಮುಖದ ವರ್ಣವನ್ನು ವೃದ್ಧಿಸುತ್ತದೆ.

**ಮಹಿ ಹರ್ಬಲ್ ಸೋಪ್**
ಚರ್ಮವನ್ನು ಸಂರಕ್ಷಿಸುತ್ತದೆ.

**ಕಶ್ಯಪಿ ಹರ್ಬಲ್ ಶಾಂಪೂ**
ಕೇಶರಾಶಿಯನ್ನು ಸಂರಕ್ಷಿಸುತ್ತದೆ.






## ಒಣಗಿದ ಹೂವುಗಳಿಂದ ತಯಾರಿಸಲಾದ ಉತ್ಪನ್ನಗಳು

### ಫೋಟೋ ಫ್ರೇಮ್‌ಗಳು ಮತ್ತು ಕೀಚೈನ್‌ಗಳು (ಡ್ರೈಫ್ಲವರ್, ಟೆಕ್ನಾಲಜಿ)




### ಅಗರ ಬತ್ತಿಗಳು (ಒಣಗಿದ ಹೂಗಳ ಉತ್ಪನ್ನಗಳು)





# ಗೋಮಾತೆ

ಸಕಲದೇವತಾ ಸ್ವರೂಪವಾದ ಗೋಮಾತೆಯಲ್ಲಿ ಜಗನ್ಮಾತೆಯಾದ ಶ್ರೀ ಮಹಾಲಕ್ಷ್ಮಿ ನೆಲೆಸಿರುತ್ತಾಳೆಂದು ಹಿರಿಯರು ಹೇಳುತ್ತಾರೆ. ಗೋಮಾತೆಯು ಮಾನವೀಯತೆಯಿಂದ ಎಷ್ಟೋ ಬಗೆಯ ಸೇವೆಯನ್ನು ಸಲ್ಲಿಸುತ್ತಿದೆ. ಮುಖ್ಯವಾಗಿ ಗೋ ಸಂಬಂಧಿತ ಪಂಚಗವ್ಯಗಳಾದ ಹಾಲು, ಮೊಸರು, ತುಪ್ಪ, ಆಹಾರದ್ರವ್ಯಗಳಾಗಿ, ಗೋಮೂತ್ರ, ಗೋಮಯ ಔಷಧಗಳು ನಮಗೆ ಉಪಯೋಗಗೊಳ್ಳುತ್ತಿವೆ. ಶ್ರೀ ಮಹಾವಿಷ್ಣು ಭೂಲೋಕಕ್ಕೆ ನೀಡಿದ ಅದ್ಭುತ ವರವೇ ಗೋಮಾತೆ, ಅದಕ್ಕಾಗಿ ಸಪ್ತಗಿರಿಗಳ ಸಾರ್ವಭೌಮನಾದ ಗೋವಿಂದನ ಸಂಸ್ಥೆಯಾದ ತಿ.ತಿ.ದೇ., ಪಂಚಗವ್ಯ ಉತ್ಪತ್ತಿಗಳನ್ನು "ನಮಾಮಿಗೋವಿಂದ" ಎಂಬ ಹೆಸರಿನಿಂದ ಭಕ್ತರಿಗೆ ನೀಡುತ್ತಿದೆ.

ಮಾತಾ ರುದ್ರಾಣಾಂ, ದುಹಿತಾ ವಸೂನಾಂ, ಸ್ವಸಾऽದಿತ್ಯಾನಾ ಮಮೃತಸ್ಯ ನಾಭಿಃ।
ಪ್ರ ನು ವೋಚಮ್ ಚಿಕಿತುಷೇ ಜನಾಯ ಮಾ ಗಾ ಮನಾಗಾ ಮದಿತಂ ವಧಿಷ್ಟ॥

(ಋಗ್ವೇದ)

ಗೋವು ರುದ್ರರಿಗೆ ತಾಯಿ, ವಸುಗಳಿಗೆ ಮಗಳು, ಆದಿತ್ಯರಿಗೆ ಸೋದರಿ, ಸರ್ವ ಮಾನವರಿಗೆ ಅಮೃತದಂತಹ ಹಾಲನ್ನು ನೀಡಿ ಪೋಷಿಸುತ್ತಿರುವ ತಾಯಿ, ಅಂತಹ ಗೋವನ್ನು ನಮ್ಮ ಭಾರತೀಯ ಸಂಸ್ಕೃತಿ, ಸಂಪ್ರದಾಯಗಳಲ್ಲಿ ತಾಯಿಯೆಂದೂ, ಸರ್ವದೇವತಾ ಸ್ವರೂಪಿಣಿಯೆಂದು ಆರಾಧಿಸುತ್ತಿದ್ದೇವೆ.

**ಕಸ್ಟಮರ್ ಕೇರ್ : 1800 425 4141**
ಈ- ಮೇಯಿಲ್:-helpdesk.ttd@tirumala.org





# ಸ್ವಾಸ್ಥ್ಯ ಜಗತ್ತಿಗೆ ಪಂಚಗವ್ಯ!



**ಇಂಗ್ಲಿಷ್ ಮೂಲ: ಎ. ರಂಗರಾಜನ್**

**ಕನ್ನಡಾನುವಾದ : ಶ್ರೀಮತಿ. ಎನ್. ಪಾರ್ವತಿ**

ಆಧುನಿಕ ಕಾಲದ ಸಮಸ್ಯೆಗಳಿಗೆ ಪಂಚಗವ್ಯವು ಅನಾದಿ ಕಾಲದ ಹಾಗೂ ಸಮಗ್ರ ಪರಿಹಾರವಾಗಿದೆ. ಗೋ ಪೂಜೆಯು ಹಿಂದೂ ಧರ್ಮದ ಅವಿಭಾಜ್ಯ ಅಂಗ ಮಾತ್ರ ವಲ್ಲ,ಗೋವಿನಿಂದ ಪಡೆಯುವ ಪ್ರತಿಯೊಂದು ವಸ್ತುವೂ ಮಾನವನ ಜೀವನಕ್ಕೆ ಉಪಕಾರಿಯಾಗಿದೆ. ಮಗವಿನ ವಿಕಾಸ ಮತ್ತು ಬೆಳವಣಿಗೆಯನ್ನು ತಾಯಿಯು ಪೋಷಿಸು ವಂತೆ ಹಸುವೂ ಮಾನವನನ್ನು ಪೋಷಿಸುವುದರಿಂದ ಅದನ್ನು "ಗೋಮತಾ" ಎಂದು ಕರೆಯುತ್ತೇವೆ.



ಪಂಚಗವ್ಯವು ಗೋವಿನಿಂದ ಪಡೆಯುವ ಐದು ಸಾಮಾಗ್ರಿ ಗಳಾದ ಸಗಣಿ,ಗೋಮೂತ್ರ,ಹಾಲು,ಮೊಸರು ಹಾಗೂ ತುಪ್ಪಗಳನ್ನು ಉತ್ಪನ್ನಗಳು ಎಂದರ್ಥ, ಪ್ರಾಚೀನ ಭಾರತೀಯ ವೈದ್ಯಪದ್ಧತಿಯಾದ ಆಯುರ್ವೇದದಲ್ಲಿ ಸಾಕಷ್ಟು ಕಾಯಿಲೆಗಳಿಗೆ ಪಂಚಗವ್ಯವು ದಿವ್ಯ ಔಷಧಿಯೆಂದು ಉಲ್ಲೇಖಿಸಿರುವುದಲ್ಲದೇ, ಹಲವಾರು ರೋಗಗಳಿಗೆ ನಿರೋಧಕ ಶಕ್ತಿ ನೀಡುವುದೆಂದು ಶಿಫಾರಸ್ಸು ಮಾಡಲಾಗಿದೆ.

### ತಿ.ತಿ.ದೇ., ಯಲ್ಲಿನ ಗೋವಿನ ಆಧಾರಿತ ಕಾರ್ಯಕ್ರಮಗಳು

ಇತ್ತೀಚಿನ ದಿನಗಳಲ್ಲಿ ಲೋಕಾರ್ಪಣೆ ಮಾಡಿದ ತಿರುಮಲೆ ತಿರುಪತಿ ದೇವಸ್ಥಾನರವರು ಕೆಲವು ಅತ್ಯುತ್ತಮ ಗೋ ಆಧಾರಿತ ಉತ್ಪನ್ನಗಳನ್ನು ಸಾರ್ವಜನಿಕರಿಗೆ ಲಭ್ಯಗೊಳಿಸುತ್ತಿದೆ. ಗೋ ಆಧಾ ರಿತ ವ್ಯವಸಾಯ, ಗುಡಿಕೋ ಗೋಮಾತಾ, ಗೋವಿಂದುನಿಕಿ, ಗೋ ಆಧಾರಿತ ನೈವೇದ್ಯಂ,ಎಲ್ಲಾ ದೇವಾಲಯಗಳಲ್ಲಿ ಗೋಪೂಜಾ, ನವ ನೀತ ಸೇವೆ ಹಾಗೂ ಅಲಿಪಿರಿಯಲ್ಲಿ ಗೋಮಂದಿರದ ನಿರ್ಮಾಣ ದಂತಹ ಕಾರ್ಯಕ್ರಮಗಳು ಗೋ ಆಧಾರಿತ ಸೇವೆಗೆ ಅಗಾಧವಾದ ಪುಷ್ಠಿ ನೀಡಿದೆ. ಪಂಚಗವ್ಯ ಉತ್ಪನ್ನಗಳನ್ನು ಪ್ರಾರಂಭಿಸಿರುವುದು, ಗೋಸಂರಕ್ಷಣ ಶಾಲೆಯಿಂದ ಪಡೆದ ಹಸುವಿನ ಸಗಣಿ, ಗೋಮೂತ್ರ, ಮತ್ತು ಹಾಲನ್ನು ಸೂಕ್ತವಾಗಿ ಬಳಸುವ ತರ್ಕ ಬದ್ಧನಡೆಯಾಗಿದೆ.




ಪಂಚಗವ್ಯದಿಂದ ವಿವಿಧ ಸಂಕೀರ್ಣ ಔಷಧಿಗಳನ್ನು ತಯಾರಿಸಬಹುದಾದರೂ, ತಿ.ತಿ.ದೇ.,ಯವರು ತಮ್ಮ ಹಸುವಿನ ಕೊಟ್ಟಿಗೆಯಲ್ಲಿನ ಪದಾರ್ಥಗಳನ್ನು ಬಳಸಿ ಸರಳ ಹಾಗೂ ಪರಿಣಾಮಕಾರಿ ಉತ್ಪನ್ನಗಳನ್ನು ತಯಾರಿಸುತ್ತಿದ್ದಾರೆ. ಕೋವಿಡ್-19 ರ ಸಾಂಕ್ರಾಮಿಕದ ನಂತರ ಸಗಣಿ ಹಾಗೂ ಗೋಮೂತ್ರದಿಂದ ತಯಾರಿಸಿರುವ ಸಾವಯವ ಹಾಗೂ ರಾಸಾಯನಿಕ ರಹಿತ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಉಂಟಾಗಿದೆ.

ಅಲಿಪಿರಿಯ ಹತ್ತಿರ DPW ಸ್ಟೋರ್ ಕಾಂಪ್ಲೆಕ್ಸ್‌ನಲ್ಲಿ ಬೃಹತ್ತಾದ ಉತ್ಪಾದನಾ ಘಟಕವನ್ನು ಪ್ರಾರಂಭಿಸಿದ್ದು, ಇಲ್ಲಿ ತಿ.ತಿ.ದೇ.,ಯು ಗಿಡಮೂಲಿಕೆಗಳಿಂದ ತಯಾರಿಸಿದ ಸೋಪ್, ಹಲ್ಲಿನ ಪುಡಿ, ಕೈತೊಳೆಯುವ ದ್ರಾವಣ, ನೇಸಲ್ ಡ್ರಾಪ್ಸ್, ಅಗರಬತ್ತಿ,ಗೋಅರ್ಕ (ಸಂಸ್ಕರಿಸಿದ ಗೋಮೂತ್ರ), ಫೇಸ್ ಪ್ಯಾಕ್, ಧೂಪಕೋನ್, ಧೂಪ್ ಕಪ್‌ಗಳು, ವಿಭೂತಿ ಹಾಗೂ ಹೋಮ ಮಾಡಲು ಸಗಣಿ ತಟ್ಟುಗಳನ್ನು ಉತ್ಪಾದಿಸುತ್ತಿದ್ದರು. ಸೊಳ್ಳೆ ಕಾಯಿಲ್‌ಗಳು ಹಾಗೂ ಇತರೆ ಉತ್ಪನ್ನಗಳ ದಕ್ಷತೆಗಳನ್ನು ಪರೀಕ್ಷಿಸುತ್ತಿದ್ದು, ಶೀಘ್ರದಲ್ಲಿ ಅವುಗಳನ್ನು ಮಾರಾಟಕ್ಕೆ ಬಿಡುಗಡೆ ಮಾಡಲಾಗಿದೆ.

ಪ್ರತಿಯೊಂದು ಉತ್ಪನ್ನವು ಹಸುವಿನ ಸಗಣಿ, ಗೋಮೂತ್ರ ಅಥವಾ ತುಪ್ಪವನ್ನು ಹೊಂದಿರುತ್ತದೆ. ಉತ್ಪನ್ನಗಳು ಭಗವಂತ 'ಗೋವಿಂದ' ನಿಗೆ ಸಮರ್ಪಿತವಾಗಿದೆ ಎಂದು ಸಾರ್ವಜನಿಕರಿಗೆ ಸೂಚಿಸಲು ಉತ್ಪನ್ನಗಳನ್ನು 'ನಮಾಮಿ ಗೋವಿಂದಾ' ಎಂದು ಹೆಸರಿಸಲಾಗಿದೆ. (ಭಕ್ತರಿಗೆ ಕೈಗೆಟುಕುವ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡಲಾಗಿದೆ.) ಹಸು ಕಚ್ಚಾ ವಸ್ತುಗಳ ದತ್ತಿ ಎಂದು ಸೂಚಿಸಲು ಗೋವಿಂದಾ ಹೆಸರಿನಲ್ಲಿ ಗೋ ಎಂಬ ಪದವೂ ಇದೆ. ತಿ.ತಿ.ದೇ.,ಯ ಶ್ರೀವೆಂಕಟೇಶ್ವರ ಗೋಸಂರಕ್ಷಣಾ ಶಾಲೆಯಲ್ಲಿ ನೂರಾರು ದೇಶಿ ಹಸುಗಳನ್ನು ಪೋಷಿಸುತ್ತಿದ್ದು, ಉತ್ಪನ್ನಗಳಿಗೆ ಅಗತ್ಯವಿರುವ ಕಚ್ಚಾ ಸಾಮಾಗ್ರಿಗಳನ್ನು ಒದಗಿಸುತ್ತದೆ ಹಾಗೂ ತಿ.ತಿ.ದೇ.,ಯ ಮತ್ತೊಂದು ವಿಭಾಗವಾದ ಶ್ರೀನಿವಾಸ ಆಯುರ್ವೇದಿಕ್ ಫಾರ್ಮಸಿಯು ಉತ್ಪನ್ನಗಳಿಗೆ ಆಯುರ್ವೇದ ಸೂತ್ರೀಕರಣಗಳನ್ನು ಒದಗಿಸುತ್ತದೆ. ಬೃಹತ್ ಪ್ರಮಾಣದ ಆಯುರ್ವೇದ ಉತ್ಪನ್ನಗಳ ಉತ್ಪಾದನೆಯಲ್ಲಿ ಅನುಭವ ಹೊಂದಿರುವ ಕೊಯಮತ್ತೂರು ಮೂಲದ ಆಶೀರ್ವಾದ ಕಂಪನಿಯು ತಾಂತ್ರಿಕ ಬೆಂಬಲವನ್ನು ಒದಗಿಸುತ್ತದೆ.

ಎಲ್ಲವೂ ಭೂಮಿಗೆ ಸೇರಿದೆ ಮತ್ತು ನಾವು ಪ್ರಕೃತಿ ತಾಯಿಗೆ ಋಣಿಯಾಗಿದ್ದೇವೆ ಎಂಬ ತಾತ್ವಿಕ ಸಂದೇಶವನ್ನು ಸಾರಲು ಈ ಸಾಲಿನ ಪ್ರತಿಯೊಂದು ಉತ್ಪನ್ನಕ್ಕೂ ಭೂಮಿಯ ಹೆಸರನ್ನು ಇಡಲಾಗಿದೆ. ಧೂಪ ಚೂರ್ಣಗೆ 'ಅಗ್ನಿ', ಅಗರಬತ್ತಿಗೆ 'ಧರಣಿ', ಸಾಂಬ್ರಾಣಿ ಬಟ್ಟಲುಗಳಿಗೆ 'ಧಾತ್ರಿ',ಧೂಪ ಕಡ್ಡಿಗಳಿಗೆ 'ವೈಷ್ಣವಿ', ಧೂಪ ಕೋನ್‌ಗಳಿಗೆ 'ವಾರಾಹಿ',ವಿಭೂತಿ ಪುಡಿಗೆ 'ಪೃಥ್ವಿ', ಹರ್ಬಲ್ ಹಲ್ಲಿನ ಪುಡಿಗೆ 'ಧನಶಿಕಾ' ಹರ್ಬಲ್ ಫೇಸ್ ಪೌಡರ್ 'ಹಿರಣ್ಮಯಿ', ಹರ್ಬಲ್ ಸೋಪ್' 'ಮಹಿ', ಹರ್ಬಲ್ ಶಾಂಪೂ 'ಕಶ್ಯಪಿ', ಮೂಗಿನಲ್ಲಿ ಹಾಕಿಕೊಳ್ಳುವ ದ್ರವಕ್ಕೆ ಉರ್ವಿ ಗೋಅರ್ಕಕ್ಕೆ ನಂದಿನಿ ನೋವು ಮುಲಾಮಿಗೆ ರುಮಾಸ್ವಾಪ್ ಮೂಗಿನಲ್ಲಿ ಹಾಕಿಕೊಳ್ಳುವ ಔಷಧೀಯ ದ್ರವಕ್ಕೆ 'ನಿಂಬ ನಾಸ್ಯಂ', ಬಾಯಿ ಮುಕ್ಕಳಿಸುವ ಪುಡಿಗೆ 'ಸ್ವಸ್ಥ, ಗಂಡೂಪ', ಮಾತ್ರೆಗಳಿಗೆ 'ಅಮೃತ', ಮತ್ತು ಫ್ಯೂಮಿಗೇಶಲ್ ಪೌಡರ್‌ಗೆ 'ರಕ್ಷೋಘ್ನ ಧೂಪಂ' ಎಂದು ಹೆಸರಿಸಲಾಗಿದೆ. ಡಾಲಮೈಟ್ ಮತ್ತು ಮೇಣವನ್ನು ಹೊಂದಿರುವ ಸೋಪ್ ಮಿಶ್ರಣಕ್ಕೆ ವಿವಿಧ ಪರಿಮಳವನ್ನು ಹೊಂದಿರುವ ಸಾರಭೂತ ತೈಲವನ್ನು ಆಧರಿಸಿ ಸಾಬೂನು 'ಮಹಿ'ಯನ್ನು ಆರು ವಿಧಗಳಲ್ಲಿ ಲಭ್ಯಗೊಳಿಸಲಾಗುವುದು.

'ಧೂಪಂ'ದಿಂದ ಬರುವ ಹೊಗೆಯು ಹಿಂದೂ ಆಚರಣೆಗಳಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿರುವುದರಿಂದ, ಧೂಪವನ್ನು ಸೂಕ್ತ ಸಂದರ್ಭಗಳಲ್ಲಿ ಬಳಸಲು ಬಾರ್‌ಗಳು, ಕೋನ್‌ಗಳು, ಮತ್ತು ಪುಡಿಯ ರೂಪದಲ್ಲಿ ಲಭ್ಯಗೊಳಿಸಲಾಗುವುದು.ಧೂಪದಿಂದ ಬರುವ ಹೊಗೆಯು ಕೋವಿಡ್ ಸಾಂಕ್ರಾಮಿಕದ ವೈರಸ್‌ಗಳನ್ನು ತೊಡೆದು ಹಾಕಿ, ವಾತಾವರಣವನ್ನು ಸ್ವಚ್ಛವಾಗಿಡುವುದೆಂದು ಸಾಬೀತು ಪಡಿಸಿದೆ. 'ಹೋಮಗುಂಡಂ' ಮತ್ತು ಇತರ ಧಾರ್ಮಿಕ ಆಚರಣೆಗಳಲ್ಲಿ ಬಳಸಲು ಸಂಪೀಡಿತ ಹಸುವಿನ ಸಗಣಿಯನ್ನು ಕೇಕ್ ಅಥವಾ ಬೆರಣಿಗಳ ಕಟ್ಟಿನ ರೂಪದಲ್ಲಿ ತಯಾರಿಸಲಾಗು ವುದು.

'ವಿಭೂತಿ' ಅನ್ನು ಅದರ ಶುದ್ಧ ರೂಪದಲ್ಲಿ ಪಡೆಯುವುದು ದೀರ್ಘ ಪ್ರಕ್ರಿಯೆಯಾಗಿದ್ದು, ಬಳಕೆದಾರರಿಗೆ ವಿಶ್ವಾಸಾರ್ಹ ಉತ್ಪನ್ನವನ್ನು ನೀಡುವ ಸಲುವಾಗಿ ತಿ.ತಿ.ದೇ ಆಡಳಿತವು ಈ ಸ್ಥಾವರದಲ್ಲಿ ವಿಭೂತಿ ತಯಾರಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸುತ್ತಿದ್ದಾರೆ. ಹಸುವಿನ ಸಗಣಿ ಸುಡುವುದರಿಂದ ಬರುವ ಬೂದಿಯನ್ನು ಮುಕ್ತ ಮಾರುಕಟ್ಟೆಯಲ್ಲಿ ಅಗ್ಗದ 'ವಿಭೂತಿ'ಯಾಗಿ ಮಾರಾಟ ಮಾಡಲಾಗುತ್ತದೆ. ಆದರೆ ಅದೇ ಪ್ರಕ್ರಿಯೆಯನ್ನು ಇಲ್ಲಿ ವಿಸ್ತೃತವಾಗಿ ಮಾಡಲಾಗುತ್ತದೆ.

ಈ ಪ್ರಕ್ರಿಯೆಯಲ್ಲಿ 'ಹೋಮಗುಂಡಂ' ನಲ್ಲಿ ಆಕಾಶ, ಗಾಳಿ, ನೀರು, ಬೆಂಕಿ ಮತ್ತು ಭೂಮಿ ಎಂಬ ಪಂಚಭೂತಗಳನ್ನು ಪ್ರತಿನಿಧಿಸುವಂತೆ ಐದು ಬಾರಿ ಹಸುವಿನ ಸಗಣಿಯನ್ನು ಸುಡುವುದು ಸಾಂಪ್ರದಾಯಿಕ ಪದ್ಧತಿಯಾಗಿದೆ. 300 ಡಿಗ್ರಿ ಸೆಲ್ಸಿಯಸ್ ತಾಪಮಾನವನ್ನು ತಡೆದುಕೊಳ್ಳುವಂತೆ'ಹೋಮಗುಂಡಮ್' ಗಳನ್ನು ವಿಶೇಷವಾದ ಇಟ್ಟಿಗೆ, ಸಿಮೆಂಟ್ ಮತ್ತು ಜೇಡಿಮಣ್ಣಿ ನಿಂದ ನಿರ್ಮಿಸಲಾಗಿರುತ್ತದೆ.

ಮೊದಲನೆಯದಾಗಿ, ಸೌರ ಕೊಠಡಿಯಲ್ಲಿ ಸೂರ್ಯನ ಶಾಖದಿಂದ ಸಗಣಿಯನ್ನು ನಿರ್ಜಲೀಕರಣ ಗೊಳಿಸಲಾಗುತ್ತದೆ.



TIRUMALA TIRUPATI DEVASTHANAMS, TIRUPATI

## PANCHAGAVYA PRODUCTS SALES COUNTER
## "NAMAMI GOVINDA"
## PRICE LIST

| Sl. No. | Name of the Product | Weight / Volume | Sale Price |
|---|---|---|---|
| 1. | Avani - DhoopChoornam | 50 gms | 70/- |
| | | 100 gms | 115/- |
| 2. | Dharani - DhoopAgarbatti | 12 sticks | 60/- |
| | | 24 sticks | 110/- |
| 3. | Dhaatri - Dhoop Cups | 6 cups | 70/- |
| | | 12 cups | 110/- |
| 4. | Vaishnavi - Dhoop Sticks | 20 sticks | 30/- |
| 5. | Varahi - Dhoop Cones | 12 cones | 30/- |
| | | 24 cones | 50/- |
| 6. | Prithvi - Vibhooti | 10 gms | 30/- |
| | | 30 gms | 40/- |
| | | 50 gms | 60/- |
| | | 100 gms | 100/- |
| 7. | Dhanshika - Tooth Powder | 50 gms | 40/- |
| | | 100 gms | 60/- |
| 8. | Hiranmayi - Face Pack | 50 gms | 110/- |
| | | 100 gms | 200/- |
| 9. | Mahi - Soap | 25 gms | 40/- |
| | | 75 gms | 80/- |
| | | 100 gms | 110/- |
| 10. | Kashyapi - Shampoo | 5 ml | 10/- |
| | | 100 ml | 210/- |
| 11. | Urvi - Nasal Drops | 10 ml | 100/- |
| 12. | Nandini - Go Ark | 200 ml | 50/- |
| | | 500 ml | 110/- |
| | | 1 ltr. | 200/- |
| 13. | Bhumi - Floor Cleaner | 1 ltr. | 250/- |
| | | 5 ltr. | 1050/- |
| 14. | Ksama - Cow Dung Cakes | 10 nos. | 140/- |
| | | 12 nos. | 170/- |
| 15. | Bhuvati - Cow Dung Logs | 06 nos. | 90/- |
| | | 12 nos. | 180/- |

Executive Officer, T.T.D., Tirupati

ಪ್ರತಿ ಬಾರಿ 100 ಕೆ.ಜಿ. ನಿರ್ಜಲೀಕರಿಸಿದ ಸಗಣಿಯನ್ನು ಭತ್ತದ ಹೊಟ್ಟು, ಕರ್ಪೂರ, ಹಸುವಿನ ತುಪ್ಪ (ಘೃತಂ) ಮತ್ತು 'ಧ್ರುವ' (ಗರಿಕಾ ಹುಲ್ಲು) ಜೊತೆಗೆ ಸುಡಲಾಗುತ್ತದೆ. ಮೊದಲ ಗುಂಡದಲ್ಲಿ ಅದು 20 ಕೆ.ಜಿ. ಬೂದಿಗೆ ಇಳಿಯುತ್ತದೆ. ಹೀಗೆಯೇ ಪ್ರಕ್ರಿಯೆಯನ್ನು ಅದನ್ನು ಮುಂದಿನ ಗುಂಡಮ್‌ಗಳಲ್ಲಿ ಪುನರಾವರ್ತಿಸಲಾಗುವುದು. ಐದನೇ ಗುಂಡಮ್‌ನಲ್ಲಿ ಶುದ್ಧ ಬಿಳಿಯ 'ವಿಭೂತಿ' ದೊರೆಯುತ್ತದೆ. ಪ್ರತಿ ಹೋಮಗುಂಡಂಗಳಿಗೆ ಬದಲಾಯಿಸುವಾಗ ಭೂಮಿಯು (ಭಾರ) ಗಾಳಿಯಾಗಿ (ಹಗುರ) ಪರಿವರ್ತಿತವಾಗುವ ಪ್ರಕ್ರಿಯೆಯು ಭಾರವಾದ ವಸ್ತುವು ಪ್ರತಿ ಬಾರಿಯೂ ಹಗುರವಾಗುವುದನ್ನು ಸಾಂಕೇತಿಕವಾಗಿ ಪ್ರತಿನಿಧಿಸುತ್ತದೆ.

ತಿ.ತಿ.ದೇ.,ಯ ಈ ಪ್ರಯತ್ನವು ಗೋ ಆಧಾರಿತ ಉತ್ಪನ್ನಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡುವ ಅತ್ಯುತ್ತಮ ಉಪಕ್ರಮವೆಂದು ಶ್ಲಾಘಿಸಲ್ಪಟ್ಟಿರುವುದಲ್ಲದೇ,ಪ್ರಾಚೀನ ಆಯುರ್ವೇದ ಪದ್ಧತಿಗಳನ್ನು ಪುನರುಜ್ಜೀವನಗೊಳಿಸುವಲ್ಲಿ ಮತ್ತು ಅನಾದಿಯಿಂದ ಪ್ರಚಲಿತವಿರುವ ಔಷಧೀಯ ವ್ಯವಸ್ಥೆಯಲ್ಲಿ ಜನರ ವಿಶ್ವಾಸವನ್ನು ಮರುಸ್ಥಾಪಿಸುವಲ್ಲಿಯೂ ಪರಿಣಾಮಕಾರಿಯಾಗಿದೆ. ಒಟ್ಟಿನಲ್ಲಿ,ಸ್ವಾಸ್ಥ್ಯ ಮತ್ತು ಆರೋಗ್ಯಕರ ಸಮಾಜವನ್ನು ನಿರ್ಮಿಸುವಲ್ಲಿ ಈ ಪ್ರಯತ್ನವು ಉತ್ತಮವಾಗಿದೆ.



# ರಾಶಿ ಫಲಗಳು



ಮೂಲ- ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ

ಅನುವಾದ- ಕೆ.ಎನ್.ಎಸ್

**ಮೇಷ**

ಜನ್ಮ ರಾಶಿಯಲ್ಲಿರುವ ರಾಹುದೋಷ ನಿವಾರಣೆಗಾಗಿ ಸುಬ್ರಮಣ್ಯ ಆರಾಧನೆ ವಿಹಿತ. ಪ್ರಯತ್ನಿಸುವ ಕಾರ್ಯಗಳಲ್ಲಿ ಜಯ ಧನಲಾಭ, ಮನಃಶ್ಶಾಂತಿ, ಆಕಸ್ಮಿಕವಾಗಿ ಧನವು ಅಧಿಕವಾಗಿ ಖರ್ಚಾಗುತ್ತದೆ. ಸುತ್ತ ಮುತ್ತಲಿನವರೊಡನೆ ದ್ವೇಷ ಹೆಚ್ಚಾದ ತಿರುಗಾಟದಿಂದ ಶರೀರದಲ್ಲಿ ಆಯಾಸ ಮತ್ತು ವೃಥಾ ಕಾಲಹರಣ ವೃತ್ತಿ - ಉದ್ಯೋಗಗಳಲ್ಲಿ ವಿಷಯಗಳಲ್ಲಿ ಶ್ರದ್ದೆ ಅಗತ್ಯ.

**ವೃಷಭ**

ಉದ್ಯೋಗದಲ್ಲಿ ಉನ್ನತ ಸ್ಥಾನದೊಂದಿಗೆ ಸ್ಥಾನಪಲ್ಲಟ ಒದಗಿ ಬರುವುದು. ತಿರುಗಾಟದಿಂದ ಶರೀರದಲ್ಲಿ ಶ್ರಮ,ನಿರುತ್ಸಾಹ,ಭೂಗೃಹ ಸ್ಥಿರಾಸ್ಥಿಗಳ ವಿಚಾರಗಳಲ್ಲಿ ಬದಲಾವಣೆ ದೈವೋಪಾಸನೆ, ಬ್ರಾಹ್ಮಣ ಭಕ್ತಿ ಆದಾಯಗಳಿಂದ ಮುಂಬರುವ ಅಗತ್ಯಗಳಿಗೆ ಧನ ಸಂಗ್ರಹಣೆ ಮಾಡುವಿರಿ ಆಕಸ್ಮಿಕ ಧನಲಾಭ ನಿಮ್ಮನರಸಿ ಬರುವುದು.

**ಮಿಥುನ**

ಧನವ್ಯಯಗಳಿಂದ ಕೂಡಿರುವಿರಿ.ಸ್ಥಾನಭ್ರಷ್ಟ.ಶರೀರಬಾಧೆಗಳಿಂದ ದೇಹಾಲಸ್ಯ,ಹೆಚ್ಚಿನ ತಿರುಗಾಟಗಳಿಂದ ಹಾಗೂ ಉದ್ಯೋಗದ ಒತ್ತಡಗಳಿಂದ ಶರೀರಸೌಖ್ಯವಿಲ್ಲದೇ ಹೋಗಬಹುದು. ಮಕ್ಕಳ ಕಾರಣಕ್ಕೆ ಮನೆಯಲ್ಲಿ ಶುಭಕಾರ್ಯಗಳ ಆಚರಣೆ ಸನ್ಮಾರ್ಗವನ್ನು ಆರಿಸಿಕೊಂಡು ಆಧ್ಯಾತ್ಮಿಕತೆಯೆಡೆಗೆ ಪಯಣಿಸುತ್ತೀರಿ.

**ಕರ್ಕಾಟಕ**

ಸಕಲೈಶ್ವರ್ಯಗಳು ವೃದ್ಧಿಯಾಗುತ್ತವೆ. ಕೃಷಿಕರಿಗೆ ಬೆಳೆ ಪುಷ್ಕಳವಾಗಿ ಬೆಳೆದು ಆದಾಯ ಕೈಗೂಡುತ್ತದೆ. ಹಿಂದಿನ ಸಾಲಗಳು ತೀರುತ್ತವೆ. ವಿವಾಹಾದಿ ಶುಭಕಾರ್ಯಗಳಲ್ಲಿ ಪಾಲ್ಗೊಳ್ಳುವಿರಿ.ಹಿಂದಿನ ರಾಜ ವೈಭವವು ತಿರುಗಿ ಬರುವುದು. ಶುಭಕಾರ್ಯ ಕೈಗೊಳ್ಳುವಿರಿ.

**ಸಿಂಹ**

ಗ್ರಹಸ್ಥಿತಿಗಳು ಸಾಮಾನ್ಯವಾಗಿದ್ದು ತಿಂಗಳೆಲ್ಲಾ ವಿಕರೀತಿ ಸರಿಯುವುದು. ಶರೀರದ ಆರೋಗ್ಯ ಉತ್ತಮವಾಗಿದ್ದು, ಕಳೆದು ಹೋದ ದ್ರವ್ಯ ತಿರುಗಿ ಲಾಭ. ಒಳ್ಳೆಯ ಆಹಾರ ಸ್ವೀಕರಿಸುವುದು. ಸಂಘಗಳಲ್ಲಿ ಗೌರವ ವೃದ್ಧಿ. ಧನಲಾಭಗಳುಂಟಾಗುವುವು.

**ಕನ್ಯ**

ಕಾಂಟ್ರಾಕ್ಟರ್, ವ್ಯಾಪಾರಸ್ಥರಿಗೆ ಆರ್ಥಿಕ ಅಭಿವೃದ್ಧಿ, ಉದ್ಯೋಗಸ್ಥರಿಗೆ, ಕೋವಿದರಿಗೆ ಪ್ರಶಂಸೆ, ವೃತ್ತಿ-ವ್ಯವಹಾರಗಳಲ್ಲಿ ಪೈಪೋಟಿ ನಡೆಯಲಿದೆ. ಸಕಲಾಭಿವೃದ್ಧಿ, ಅಂಗಾಲು, ಮೊಣಕಾಲುಗಳಲ್ಲಿ ನೋವು, ದೇಹಾರೋಗ ಸಾರಿಗೆ ಸಂಬಂಧಿತ ವ್ಯಾಪಾರಗಳು ಕೂಡಿ ಬರುತ್ತವೆ.

**ತುಲಾ**

ಅಲ್ಪ ಭೋಜನ, ದೇಹಾಲಸ್ಯ,ಒತ್ತಡ, ಹೃದಯಬಡಿತ, ಉದ್ಯೋಗ ಸ್ಥಳದಲ್ಲಿ ಕಲಹ, ಅಧಿಕಾರಿಗಳು ಕೊಟ್ಟ ವಸ್ತುಗಳು ಕಳೆದು ಹೋಗುವುದು. ಕಳೆದ ವಸ್ತುಗಳು ತಿರುಗಿ ಲಭಿಸುವುದು ಸುಬ್ರಮಣ್ಯ ಆರಾಧನೆ ವಿಹಿತ.

**ವೃಶ್ಚಿಕ**

ಮಿಶ್ರ ಫಲಗಳು, ಮಾಸಾರಂಭದಲ್ಲಿ ಸ್ವಜನರೊಡೆ ಕಲಹ. ನಂತರ ಸಾಹಸ ಕಾರ್ಯಗಳನ್ನು ಸಾಧಿಸಿ,ಎಲ್ಲರ ಮನ್ನಣೆಗೆ ಪಾತ್ರರಾಗುವಿರಿ. ಭೂಲಾಭ ಉಂಟಾಗುತ್ತದೆ. ಪಶು ಸಂಪತ್ತು ವೃದ್ಧಿಗೊಳ್ಳಲಿದೆ. ಧನಲಾಭಗಳು ಕುಗ್ಗುತ್ತವೆ.ರಕ್ತದೊತ್ತಡ ಸಂಬಂಧಿ ಅನಾರೋಗ್ಯದಿಂದಾಗಿ ಆಗಾಗ ದೈಹಿಕ ಸಮಸ್ಯೆಗಳುಂಟಾಗುತ್ತದೆ.

**ಧನಸ್ಸು**

ವಸ್ತ್ರಲಾಭ, ಗ್ರಹಸ್ಥಿತಿಗಳು ಅನುಕೂಲಕರ, ಶತ್ರುಜಯವಾಗುತ್ತದೆ. ಹೊಸ ನಿರ್ಮಾಣಗಳು ಕೈಗೂಡಲಿವೆ. ಕ್ಷಣವೂ ಕೂಡ ಬಿಡದೇ ಯಾವುದೋ ಕೆಲಸದ ಮೇಲೆ ದೃಷ್ಟಿ ಬೀರುತ್ತಲೇ ಇರುವಿರಿ. ಮಂಗಳ ಕಾರ್ಯ ಜರುಗಲಿದೆ. ಧೈರ್ಯದಿಂದ ಸಾಧಿಸುವಿರಿ. ಶೋಧನಾ ಕಾರ್ಯಕ್ಕೆ ಶ್ರೀಕಾರ ಹಾಕುವಿರಿ. ವಿದ್ಯೆಯು ವಿಕಾಸಗೊಳ್ಳಲಿದೆ.

**ಮಕರ**

ಮನೆಯಲ್ಲಿ ಕಲ್ಯಾಣಾದಿ ಶುಭಕಾರ್ಯಗಳು , ತಳಿರು ತೋರಣಗಳು,ಬಂಧು-ಮಿತ್ರ ಸಮಾಗಮ, ಮೃಷ್ಟಾನ್ನ ಭೋಜನ, ಆರೋಗ್ಯ ವಿಷಯದಲ್ಲಿ ಶ್ರದ್ಧೆ ವಹಿಸುವುದು ಒಳಿತು.ವೃತ್ತಿ ವ್ಯಾಪಾರಗಳು ಸಾಮಾನ್ಯ. ಲಾಭಗಳಿಗೆ ತೊಂದರೆಯಿಲ್ಲ. ಇತರೆ ಆದಾಯ ಮಾರ್ಗಗಳಿಗೆ ಅನ್ವೇಷಣೆ ನಡೆಸುವಿರಿ.

**ಕುಂಭ**

ಜನ್ಮರಾಶಿ ಕುಜನಿಂದಾಗಿ ಉಷ್ಣ ಸಂಬಂಧಿತ ಜ್ವರಗಳು, ಡಾಂಭಿಕ ಮಾತುಕತೆ, ಕ್ರಿಯಾಶೀಲದ ಕೊರತೆಯುಂಟಾಗುವುದು. ಮನೆಯ ತೊಂದರೆಗಳೆಲ್ಲವನ್ನು ಮೀರಿ ಧೈರ್ಯದಿಂದ ಮುಂದಕ್ಕೆ ಸಾಗುವಿರಿ. ಆದಾಯ ಕೈಗೂಡುತ್ತದೆ. ವೃತ್ತಿ ವ್ಯಾಪಾರಗಳು ಒದಗಿ ಬರುತ್ತವೆ.

**ಮೀನ**

ಉತ್ತಮ ಮುಖವರ್ಚಸ್ಸಿನಿಂದಾಗಿ ಇತರರಿಗೆ ಆಕರ್ಷಕರಾಗಿದ್ದು ಕಾರ್ಯ ಭಾರವನ್ನು, ಆಲಸ್ಯವಿಲ್ಲದೆ ಪ್ರಾಖರವಾಗಿ ಮಾಡಿ, ಎಲ್ಲ ಕಾರ್ಯಗಳನ್ನು ಜಯಿಸಿಕೊಂಡು ಬರಬಲ್ಲಿರಿ. ನಿರುದ್ಯೋಗಿಗಳಿಗೆ ಉತ್ತಮ ಸಮಯ, ಮಿಲಿಟರಿ, ಪೋಲೀಸು ಸಂಬಂಧಿತ ಉದ್ಯೋಗಗಳು ನಿಮ್ಮನ್ನು ಅರಸಿ ಬರಲಿವೆ. ವಿದ್ಯಾರ್ಥಿಗಳಿಗೆ ವಿದೇಶ ಅವಕಾಶಗಳು ಒದಗಿ ಬರುತ್ತದೆ.

# ಶ್ರೀ ಪಾದರಾಜರು

- ಶ್ರೀಧರ ರಾಯಸಂ
98453 27129



ದಾಸಸಾಹಿತ್ಯಕ್ಕೆ ಭದ್ರ ಪ್ರಕಾರ ನಿರ್ಮಾಣ ಮಾಡಿದ ಮಹಾನುಭಾವರು, ದೈವಾಂಶ ಸಂಭೂತರು ಶ್ರೀಪಾದರಾಜರು. ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿ ಕೃಷ್ಣ ದೇವರಾಯನಿಗೆ ರಾಜಗುರುಗಳಾಗಿದ್ದ ಶ್ರೀವ್ಯಾಸರಾಜರಿಗೇ ವಿದ್ಯಾಗುರುಗಳಾಗಿ, ಅಪೂರ್ವ ಪಾಂಡಿತ್ಯ, ಅಲೌಕಿಕ ಪ್ರತಿಭೆ ಅಧ್ಭುತ ತಪಸ್ಸಿನ ಶಕ್ತಿ, ಪಡೆದಿದ್ದ ಮಹಾನುಭಾವರು ಶ್ರೀಪಾದರಾಜರು. ಶ್ರೀಪಾದರಾಜರು ಪದ್ಮನಾಭತೀರ್ಥರಿಂದ ಮಧ್ವಮತ ಪ್ರಸಾರಕ್ಕಾಗಿ ಅವತರಿಸಿದ ರಂಗವಿಠಲ ಆರಾಧಕರು. ಶ್ರೀರಂಗದಲ್ಲಿ ವೃಂದಾವನಸ್ಥರಾದ ಸ್ವರ್ಣವರ್ಣತೀರ್ಥರು ಇವರ ಗುರುಗಳು. ಶ್ರೀಮಠದ ಉಪಸ್ಯಾ ದೇವತೆ ಗೋಪಿನಾಥದೇವರನ್ನು ಸದಾ ಪೂಜಿಸುತ್ತಿದ್ದ ಯತಿಗಳು. ಶ್ರೀಪಾದರಾಜರು ಹಾಕಿದ ಭದ್ರಬುನಾದಿಯ ದಾಸಸಾಹಿತ್ಯ ಮುಂದುವರೆಸಿಕೊಂಡು ಬಂದ ಪುರಂದರದಾಸರು, ಕನಕದಾಸರು, ವೈಕುಂಠದಾಸರು, ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು,ಮಹಿಪತಿದಾಸರು. ಮುಂತಾದವರು ಮಧ್ವಸಿದ್ಧಾಂತದ ಮಹಿಮಾನ್ವಿತರು.

ಚನ್ನಪಟ್ಟಣ ಹತ್ತಿರ ಇರುವ ಅಬ್ಬೂರಿನಲ್ಲಿ ಶೇಷಗಿರಿ ಆಚಾರ್ಯ ಮತ್ತು ಗಿರಿಯಮ್ಮ ದಂಪತಿಗಳಿಗೆ, ಕ್ರಿ.ಶ. 1406 ರಲ್ಲಿ ಲಕ್ಷ್ಮೀ ನಾರಾಯಣ ಎಂಬ ಪುತ್ರ ಜನಿಸಿದ. ದಿನೇ ದಿನೇ ಪ್ರವರ್ಧಮಾನಕ್ಕೆ ಬೆಳೆಯುತ್ತಿದ್ದ ಲಕ್ಷ್ಮಿನಾರಾಯಣನನ್ನು ನೋಡಿ, ಯತಿಗಳಾಗಿದ್ದ ಸ್ವರ್ಣವರ್ಣ ತೀರ್ಥರು, ತಮ್ಮಲ್ಲಿಗೆ ಬರಮಾಡಿಕೊಂಡರು. ವಿದ್ಯಾದಾನ ಮಾಡಿ ಬ್ರಹ್ಮೋಪದೇಶವನ್ನೂ ಮಾಡಿದರು. ಲಕ್ಷ್ಮಿನಾರಾಯಣ ಯತಿಯೆಂದು ನಾಮಕರಣ ಮಾಡಿ, ಶ್ರೀವಿಬುದೇಂದ್ರ ತೀರ್ಥರಲ್ಲಿ ಪ್ರೌಢ ವಿದ್ಯಾಭ್ಯಾಸಕ್ಕಾಗಿ ಕಳಿಸಿದರು. ಸಕಲ ಶಾಸ್ತ್ರಗಳಲ್ಲಿ ಪಾರಂಗತರಾದ ಲಕ್ಷ್ಮೀನಾರಾಯಣ ಯತಿಗಳು, ಒಮ್ಮೆ ರಾಯಚೂರು ಜಿಲ್ಲೆಯ ಕೊಪ್ಪರ ನರಸಿಂಹ ದೇವರ ಕ್ಷೇತ್ರಕ್ಕೆ ವಿಬುಧೇಂದ್ರತೀರ್ಥರೊಡಗೂಡಿ ಪ್ರಯಾಣ ಬೆಳೆಸಿದರು. ಅಲ್ಲಿ ಕೆಲಕಾಲ ವಾಸಿಸುತ್ತಿರಲು,ಉತ್ತರಾಧಿ ಮಠದ ಪ್ರಖ್ಯಾತರಾಗಿದ್ದ ಯತಿಗಳಾದ ಶ್ರೀರಘುನಾಥ ತೀರ್ಥರು ದಿಗ್ವಿಜಯ ಮಾಡಿದರು. ಅಲ್ಲಿ ವಾಕ್ಯಾರ್ಥ ಜರುಗಿದಾಗ,ಲಕ್ಷ್ಮೀನಾರಾಯಣ ಯತಿಗಳು, ತಮಗಿದ್ದ, ಸರ್ವಜ್ಞ ಶಾಸ್ತ್ರದ ಪಾಂಡಿತ್ಯವನ್ನು ತಿಳಿಯಪಡಿಸಿದರು. ವೇದಾಧ್ಯಯನದ ಚಾತುರ್ಯ,ಅಮೋಘಪಾಂಡಿತ್ಯ ವಿದ್ಯಾ ಕೌಶಲ್ಯತೆ ಕಂಡು, ಆಗಮಿಸಿದ್ದ ರಘುನಾಥ ತೀರ್ಥರು, ಅನೇಕ ರೀತಿಯಿಂದ ಲಕ್ಷ್ಮೀ ನಾರಾಯಣ ಯತಿಗಳನ್ನು ಕೊಂಡಾಡಿದರು. ಶ್ರೀಪಾದರು ತಾವು, ತಮ್ಮಂತಹವರ ಮೆಚ್ಚುಗೆ ಮಾತುಗಳು ದೇವತೆಗಳೂ ಪ್ರಸನ್ನರಾಗುವರೆಂದು ಸೌಜನ್ಯದಿಂದ ವಿಜ್ಞಾಪಿಸಿದರು. ಶ್ರೀರಘುನಾಥ ತೀರ್ಥರೂ, ಶ್ರೀ ವಿಬುಧೇಂದ್ರ ತೀರ್ಥರ ಸಮ್ಮುಖದಲ್ಲಿ "ನಾವೆಲ್ಲಾ ಶ್ರೀಪಾದರು, ಆದರೆ ನೀವು ಶ್ರೀಪಾದರಾಜರು" ಎಂದು ಬಿರುದು ನೀಡಿ,ಗೌರವಿಸಿದ್ದು ಚರಿತ್ರಾರ್ಹ. ಅಂದಿನಿಂದ ಶ್ರೀಪಾದರಾಜರೆಂದು ನಾಮಾಂಕಿತರಾಗಿ, ಸರ್ವ ವಿದ್ಯೆಯಲ್ಲಿ ಪಾರಂಗತರಾಗಿ, ಶ್ರೀರಂಗ ಕ್ಷೇತ್ರಕ್ಕೆ ಬಂದರು. ಶ್ರೀರಂಗದಲ್ಲಿ ಇವರ ಗುರುಗಳಾಗಿದ್ದ ಸ್ವರ್ಣವರ್ಣ ತೀರ್ಥರು ಸಮಸ್ತ ಸಂಪತ್ತು ಪೀಠವನ್ನು ಇವರಿಗೆ ಒಪ್ಪಿಸಿ ಉತ್ತರಾಧಿಕಾರಿಯನ್ನಾಗಿ ಮಾಡಿ ಕ್ರಿ.ಶ. 1420 ರಲ್ಲಿ ಶ್ರೀರಂಗ ಕ್ಷೇತ್ರದಲ್ಲಿ ವೃಂದಾವನಸ್ಥರಾದರು.

ಆಶ್ರಮಸ್ವೀಕರಿಸಿ, ಶ್ರೀಪಾದರಾಜರು ಮುಳಬಾಗಿಲಿಗೆ ದಿಗ್ವಿಜಯ ಮಾಡಿದರು. ಯೋಗಾನರಸಿಂಹ ಕ್ಷೇತ್ರವಾದ ಮುಳಬಾಗಿಲು ಇವರ ವಾಸಕ್ಷೇತ್ರವಾಯಿತು. ಶ್ರೀ ಬ್ರಹ್ಮಣ್ಯತೀರ್ಥರ ಕರಕಮಲ ಸಂಜಾತರಾದ ಶ್ರೀವ್ಯಾಸರಾಯರು ವಿದ್ಯಾಭ್ಯಾಸಕ್ಕಾಗಿ, ಶ್ರೀ

ಪಾದರಾಜರಲ್ಲಿಗೆ ಬಂದರು. ದ್ವೈತ ವೇದಾಂತದಲ್ಲಿ ಅಗಾಧ ಪಾಂಡಿತ್ಯ ಪಡೆದಿದ್ದ ಶ್ರೀಪಾದರಾಜರು ವ್ಯಾಸರಾಯರಿಗೆ ಶ್ರೀಮನ್ನ್ಯಾಯ ಸುಧಾದಿ ಗ್ರಂಥಗಳ ಪಾಠ ಮಾಡಿ,ಮಧ್ವ ಸಿದ್ಧಾಂತದ ಪ್ರೌಢಿಮೆ ತಿಳಿಸಿದರು. ಶ್ರೀಪಾದರಾಜರಲ್ಲಿ ಶ್ರೀವ್ಯಾಸ ರಾಯರು 12 ವರ್ಷ (ಕ್ರಿ.ಶ. 1456 ರಿಂದ 1468 ) ವ್ಯಾಸಂಗ ಮಾಡಿದರು.

ಒಮ್ಮೆ ಮುಳಬಾಗಿಲು ಯೋಗಾನರಸಿಂಹ ದೇವಾಲ ಯದ ಹಿಂಭಾಗದ ಗುಹೆಯಲ್ಲಿ ಅಧ್ಯಯನ ಮಾಡುತ್ತಿರಲು ಸರ್ಪ ಅವರನ್ನು ಸುತ್ತಿಕೊಂಡಿತು! ತಾನು ಶೇಷದೇವರೆಂದು, ಇವರಲ್ಲಿ ತನ್ನ ಅವೇಶವಿರುವುದರಿಂದ, ಸನ್ನಿಹಿತನಾಗಿದ್ದೇನೆಂದು ತಿಳಿಸಿ, ಅವರನ್ನು ಕಚ್ಚದೆ ಬಿಟ್ಟು ಹೋಗಿದ್ದು ಸೋಜಿಗದ ಪ್ರಸಂಗ ವಾಯಿತು!!

ಶ್ರೀಪಾದರಾಜರು ಅನೇಕ ಮಹಿಮೆ ತೋರ್ಪಡಿಸಿದರು ಅದರಲ್ಲಿ, ಬ್ರಹ್ಮಹತ್ಯಾ ದೋಷದಿಂದ ಬ್ರಾಹ್ಮಣ್ಯನನ್ನು ಉದ್ಧರಿ ಸಿದ್ದು, ಸಾಳ್ವನರಸಿಂಹ ಮಹಾರಾಜ ಬ್ರಹ್ಮಹತ್ಯಾ ದೋಷ ಪರಿ ಹಾರ ಮಾಡಬೇಕೆಂದು ಪ್ರಾರ್ಥಿಸಿದಾಗ, ಅವನನ್ನು ದೋಷ ಮುಕ್ತ ಮಾಡಿದ್ದು ಇತಿಹಾಸವಾಯಿತು. ನಂತರ ಸಾಳ್ವನರ ಸಿಂಹ ಮಹಾರಾಜನು ವಿಜಯನಗರ ಸಾಮ್ರಾಜ್ಯಾಧಿತ್ಯ ವಹಿಸಿ ಕೊಂಡನು. ಶ್ರೀಪಾದರಾಜರು ಸಂಸ್ಥಾನದ ದೇವರಿಗೆ ಪ್ರತಿನಿತ್ಯ 60 ವಿಧವಾದ ಭಕ್ಷ್ಯಗಳನ್ನು ನೈವೇದ್ಯ ಮಾಡುತ್ತಿದ್ದುದು ವಿಶೇಷ ವಾಗಿತ್ತು.

ಶ್ರೀಪಾದರಾಜರು ದಟ್ಟ ಅರಣ್ಯ ಶಿಷ್ಯರಿಗಾಗಿ ಉದ್ಯಾನ ವನ ಮಾಡಿದ್ದು,ಮೇಂಛರು ಅರ್ಪಿಸಿದ ಮಾಂಸ, ಫಲ, ಪುಷ್ಪ ವಾಗಿದ್ದು ಓರ್ವರಾಜನ ಗರ್ವಭಂಗ ಮಾಡಿದ ಪ್ರಸಂಗ ಇತಿ ಹಾಸವಾಯಿತು.

ಒಮ್ಮೆ ಪಂಢರಪುರದಲ್ಲಿ ಭೀಮಾನದಿ (ಚಂದ್ರಭಾಗ) ತೀರದಲ್ಲಿ ಶ್ರೀಪಾದರಾಜರು, ಬ್ರಹ್ಮಣ್ಯತೀರ್ಥರು, ವ್ಯಾಸರಾಯರು ವಾಸ್ತವ್ಯ ಮಾಡಿದಾಗ ದೇವರ ಪೆಟ್ಟಿಗೆ ದೊರಕಿತು.ಅದರಲ್ಲಿ ರಂಗವಿಠಲಮೂರ್ತಿ,ರುಕ್ಮಿಣಿ ಸತ್ಯಭಾಮ ಸಮೇತ ವೇಣು ಗೋಪಾಲ ಕೃಷ್ಣನ ಪ್ರತಿಮೆ ಇರುವುದು ಕಂಡು ಭಕ್ತಿಯಿಂದ ಪೂಜಿಸಲು ಪ್ರಾರಂಭಿಸಿದರು. ಪುನಃ ಮುಳಬಾಗಿಲಿಗೆ ವಾಪಸ್ಸು ಬಂದು ವ್ಯಾಸರಾಯರಿಗೆ ಶ್ರೀಪಾದರಾಜರು ದೇವರ ಪೂಜೆ ಮಾಡಲು ಹೇಳಿದರು. ಯಾವ ಸಂಪುಟ ತೆಗೆಯಲು ಬಾರದೆ, ಪ್ರತಿ ನಿತ್ಯ ಗಂಧಾಕ್ಷತೆ, ಹೂಗಳಿಂದ ಪೂಜಿಸಲ್ಪಡುತ್ತಿತ್ತೋ, ಆ ಸಂಪುಟವನ್ನು ಸುಲಭವಾಗಿ ವ್ಯಾಸರಾಯರು ತೆರೆದರು!! ವೇಣು ಗೋಪಾಲ ಕೃಷ್ಣ ಪ್ರತಿಮೆ ವ್ಯಾಸರಾಯರಿಂದ ಸೇವೆ ಮಾಡಿಸಿ ಕೊಳ್ಳಲು ಸಿದ್ಧನಾಗಿದ್ದ.ಆನಂದಬಾಷ್ಪಗಳಿಂದ ವ್ಯಾಸರಾಯರು ಎರಡು ಶಾಲಿಗ್ರಾಮಗಳನ್ನು ತಾಳಮಾಡಿಕೊಂಡು ನರ್ತಿಸಲು, ವೇಣುಗೋಪಾಲನೂ ನರ್ತಿಸಿದ ದೃಶ್ಯ ಅಪೂರ್ವವಾಗಿತ್ತು!!

ಕಾಶಿಯಲ್ಲಿ ಶ್ರೀಪಾದರಾಜರು ತಮ್ಮ ಪಾಂಡಿತ್ಯ ಪ್ರದ ರ್ಶಿಸಿ ವಾದಿಗಳನ್ನು ಸೋಲಿಸಿ, ಹಯಗ್ರೀವ ಮೂರ್ತಿಯನ್ನು ಒಲಿಸಿಕೊಂಡರು.ವಿಜಯನಗರದಲ್ಲಿ ವೀರನರಸಿಂಹ ರಾಜ ನಿಂದ ಗೌರವಿಸಲ್ಪಟ್ಟು, ಅವನಿಂದ ನವರತ್ನ ಖಚಿತ ಕಂಕಣ, ಸ್ವೀಕರಿಸಿದರು. ರಂಗವಿಠಲನಿಗೆ ಅದನ್ನು ಸಮರ್ಪಿಸಿದರು. ಮುಳಬಾಗಿಲಿನಲ್ಲಿ ನರಸಿಂಹ ತೀರ್ಥದಲ್ಲಿ ಶ್ರೀಗಳವರಿಗಾಗಿ ಭಾಗೀರಥಿ ಹರಿದು ಬಂದಳು.

ಒಮ್ಮೆ ಶ್ರೀಪಾದರಾಜರು ಪಾಠ ಹೇಳುತ್ತಿರುವಾಗ ಒಮ್ಮೆಲೇ ಪಾಠ ನಿಲ್ಲಿಸಿ,ಎದ್ದು ನಿಂತು ಆಕಾಶದೆಡೆಗೆ ಕೈ ಜೋಡಿಸಿ, ಮಾತಾನಾಡಿ ಕುಳಿತುಕೊಂಡರು.ಶಿಷ್ಯರು ಆಶ್ಚರ್ಯದಿಂದ ವಿಷಯ ತಿಳಿಸಬೇಕೆಂದು ವಿಜ್ಞಾಪಿಸಿದರು. ಆಗ ಶ್ರೀಗಳು ಶ್ರೀರಘುನಾಥತೀರ್ಥರು ವಿಮಾನರೂಢರಾಗಿ,ವೈಕುಂಠಕ್ಕೆ ಪ್ರಯಾಣ ಮಾಡಿದ ದರ್ಶನವಾಯಿತು. ಅದಕ್ಕಾಗಿ ಪ್ರಣಾಮ ಮಾಡಿದೆವು ಎಂದು ವಿವರಿಸಿದರು! ಸರ್ವಮೂಲ ಪ್ರವಚನ ವಿಪ್ರರಿಂದ 40 ವಿಧವಾದ ಅರ್ಥದಲ್ಲಿ ಹೇಳಿಸಿ, ಶಿಷ್ಯರಿಗೆ ಅಚ್ಚರಿ ವುಂಟು ಮಾಡುವಂತೆ ಶ್ರೀಪಾದರಾಜರು ಮಾಡಿದ ಪಾಂಡಿತ್ಯ ಅಮೋಘ.

ಧ್ರುವಾಂಶಸಂಭೂತರಾದ, ದೈವಾಂಶರೆಂದು ಶ್ರೀಪಾದ ರಾಜರು ರಂಗವಿಠಲನನ್ನು ಸಾಕ್ಷಾತ್ಕರಿಸಿ,ಪ್ರತಿನಿತ್ಯ ಪರಿಮಳ ಭರಿತ ತೈಲಾಭ್ಯಂಜನ ಮಾಡಿಕೊಂಡು 60 ವಿಧದ ಭಕ್ಷ್ಯ ಶ್ರೀಹರಿಗೆ ನೈವೇದ್ಯ ಸ್ವೀಕರಿಸುವ ದೃಶ್ಯ ಅಪೂರ್ವವಾಗಿತ್ತು.

ಧ್ರುವಾಂಶ ಸಂಭೂತರಾದ, ದೈವಾಂಶಸಂಭೂತರಾದ ಶ್ರೀಪಾದರಾಜರು ಸುಖ ಪ್ರಾರಬ್ಧ ಅನುಭವಿಸಿ, ತುರ್ಯಾಶ್ರಮ ದಲ್ಲೂ, ವೈಭವೋಪೇತ ಸುಖಜೀವನ ನಡೆಸಿದ್ದು ವಿಶೇಷ ವಾಗಿತ್ತು. ಪೂರ್ಣ ವಿರಕ್ತರು ಭೋಗಲಾಲಸೆಗೆ ಅಕ್ಷೇಪಿಸದೇ ಸುಖಪ್ರಾರಬ್ಧವೆಂದು ತಿಳಿದು, ಅನುಭವಿಸಿದ ಮಹಾನುಭಾವರು.

ಶ್ರೀಪಾದರಾಜರು ಕನ್ನಡದಲ್ಲಿ ಅನೇಕ ದೇವರನಾಮ ಗಳನ್ನು ಸುಳಾದಿಗಳನ್ನು ಗ್ರಂಥಗಳನ್ನು ರಚಿಸಿದ್ದಾರೆ. ಮಧ್ವ ನಾಮ, ಶೃಂಗಾರಪಾರಿಜಾತ, ಭ್ರಮರಗೀತೆ ವೇಣುಗೀತೆ, ಗೋಪಿ ಗೀತೆ, ಮುಂತಾದ ಕೃತಿಗಳು, ಇವರ ಪ್ರೌಢಗ್ರಂಥ "ವಾಗ್ವಜ್ರ" ವ್ಯಾಸರಾಯರು ಅವಲೋಕಿಸಿ ಅಧ್ಯಯನ ಮಾಡಿದರು. ಇದರ ಆಧಾರದಿಂದ ವ್ಯಾಸರಾಜರು, ಚಂದ್ರಿಕಾ, ತರ್ಕತಾಂಡವ, ನ್ಯಾಯಾಮೃತ ಎಂಬ ಉತ್ಕೃಷ್ಟ ಗ್ರಂಥಗಳನ್ನು ರಚಿಸಿದರು. ಮುಳಬಾಗಿಲು ನರಸಿಂಹತೀರ್ಥ ದಂಡೆಯಲ್ಲಿ ಹಯಗ್ರೀವ ತೀರ್ಥರಿಗೆ ಆಶ್ರಮ ನೀಡಿ ಕ್ರಿ.ಶ.1504 ರಕ್ತಾಕ್ಷಿ ಸಂವತ್ಸರ ಜ್ಯೇಷ್ಠ ಶುದ್ಧ ಚತುರ್ದಶಿಯಂದು ವೃಂದಾವನಸ್ಥರಾದವರು. ಅಂದಿ ನಿಂದ ಶ್ರೀಪಾದರಾಜರ ಮಠವೆಂದು ಗುರುತಿಸಲಾಗಿದೆ.





# 108 ವೈಷ್ಣವ ದಿವ್ಯಕ್ಷೇತ್ರಗಳು

## ತಿರುಕ್ಕರಂಬನೂರ್ (ಉತ್ತಮರ್ ಕೋಯಿಲ್)

**ತೆಲುಗುಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್**

**ಕನ್ನಡ ಅನುವಾದ : ಸೂರ್ಯವಂಶಿ**

ಭಗವಂತನು ಪರ-ವ್ಯೂಹ-ವಿಭವ-ಅಂತರ್ಯಾಮಿ-ಆರ್ಚಾ ಈ ಐದು ರೂಪಗಳಿಂದ ದಿವ್ಯಕ್ಷೇತ್ರಗಳಲ್ಲಿ ವಿರಾಜಮಾನವಾಗಿ ವಿಶೇಷವಾಗಿ ಆರ್ಚಾಮೂರ್ತಿಯಾಗಿ ಸಕಲ ಜನರನ್ನೂ ಅನುಗ್ರಹಿಸುತ್ತಿದ್ದಾನೆ. ಆಳ್ವಾರರಿಂದ ಕೊಂಡಾಡಲ್ಪಟ್ಟ ದಿವ್ಯ ಕ್ಷೇತ್ರಗಳಲ್ಲಿ ಮೂರನೆಯ ದಿವ್ಯಕ್ಷೇತ್ರವೆಂದು ದೇದೀಪ್ಯಮಾನವಾಗಿ ಪ್ರಕಾಶಿಸುತ್ತಿರುವ ಕ್ಷೇತ್ರ ಶ್ರೀರಂಗ ಪರಿಸರದಲ್ಲಿರುವ ತಿರುಕ್ಕರಂಬನೂರ್ ಎಂಬ ದಿವ್ಯಕ್ಷೇತ್ರ.

### ತಿರುಕ್ಕರಂಬನೂರ್ ದಿವ್ಯಕ್ಷೇತ್ರದ ಪರಿಚಯ:

ಈ ಸ್ಥಳ ತಿರುಚ್ಚಿಗೆ ಉತ್ತರ ದಿಕ್ಕಿನಲ್ಲಿ ಸುಮಾರು ಐದು ಕಿ.ಮೀ.ದೂರದಲ್ಲಿರುವ ಅದ್ಭುತವಾದ ಪ್ರಕೃತಿ ಸೌಂದರ್ಯದಿಂದ ನೆಲೆಗೊಂಡಿದೆ. ಈ ದಿವ್ಯದೇಶಕ್ಕೆ ಉತ್ತಮರ್ ಕೋಯಿಲ್ ಎಂದು ಹೆಸರು.ಈ ಕ್ಷೇತ್ರ ಆದಿಮಾಪುರಂ,ಕದಂಬವನಂ,ಪಿಚ್ಚಾಂಡಾರ್ ಕೋಯಿಲ್,ನೀಭಕ್ಷೇತ್ರ, ಎಂಬ ಅನೇಕ ನಾಮಧೇಯಗಳಿವೆ.

### ಸಾರ್ಥಕ ನಾಮಧೇಯ :

ಈ ಕ್ಷೇತ್ರಕ್ಕೆ ತಿರುಕ್ಕರಂಬನೂರ್ ಎಂಬ ಹೆಸರು ಸಾರ್ಥಕನಾಮಧೇಯವಾಗಿದೆ. ಏಕೆಂದರೆ ಈ ಕ್ಷೇತ್ರದಲ್ಲಿ ಕದಂಬ ವೃಕ್ಷಗಳು ಹೇರಳವಾಗಿರುವುದರಿಂದ ಇದಕ್ಕೆ ಕದಂಬನೂರ್ ಎಂದೂ, ಅದೇ ಕಾಲಕ್ರಮೇಣ ಕರಂಬನೂರ್ ಎಂಬ ಹೆಸರಾಗಿದೆ.ಕದಂಬ ಮಹರ್ಷಿಯ ತಪಸ್ಸಿಗೆ ಮೆಚ್ಚಿದ್ದ ನಾರಾಯಣನು ಈ ಕ್ಷೇತ್ರದಲ್ಲೇ ಸಾಕ್ಷಾತ್ಕರಿಸಿದ್ದರಿಂದ ಈ ಕ್ಷೇತ್ರಕ್ಕೆ ಕದಂಬ ನೂರ್ ಎಂಬ ಹೆಸರು ಬಂದಿದೆ.

### ಸ್ಥಳಪುರಾಣ

ಈ ಕ್ಷೇತ್ರ ತ್ರಿಮೂರ್ತಿ ಕ್ಷೇತ್ರವೆಂದು ಹೆಸರುವಾಸಿಯಾಗಿದೆ. ಪತ್ನೀಸಮೇತರಾದ ಹರಿ-ಹರ-ಬ್ರಹ್ಮಾದಿಗಳ ಆಲಯಗಳು ಇಲ್ಲಿ ಇರುವುದು ವಿಶೇಷ! ಅದೂ ಅಲ್ಲದೇ ಪರಮೇಶ್ವರನು ಪಿಚ್ಚಾಂಡಾರ್ ಎಂಬ ಹೆಸರಿನಿಂದ ಪಾರ್ವತೀಸಮೇತನಾಗಿ ವಿರಾಜಮಾನನಾಗಿದ್ದಾನೆ. ಚತುರ್ಮುಖ ಬ್ರಹ್ಮ ಸರಸ್ವತೀ ಸಮೇತನಾಗಿ ಶೋಭಾಯಮಾನನಾಗಿದ್ದಾನೆ. ಇನ್ನು ನಾರಾಯಣನು ಪುರುಷೋತ್ತಮನ್ ಎಂಬ ಹೆಸರಿನಿಂದ ಪೂರ್ಣವಲ್ಲೀನಾಯಿಕಾ ಎಂಬ ಹೆಸರಿನ ಲಕ್ಷ್ಮೀಸಮೇತನಾಗಿ ಭಕ್ತರನ್ನು ಉದ್ಧರಿಸುತ್ತಿದ್ದಾನೆ.ಹರ-ಬ್ರಹ್ಮಾದಿಗಳು ಈ ಕ್ಷೇತ್ರದಲ್ಲೇ ಪುರುಷೋತ್ತಮನಾದ ಲಕ್ಷ್ಮೀಸಮೇತನಾದ ನಾರಾಯಣನ ಅನುಗ್ರಹವನ್ನು ಹೊಂದಿರುವರೆಂದು ಇಲ್ಲಿನ ಸ್ಥಳ ಪುರಾಣಗಳ ಮೂಲಕ ತಿಳಿದು ಬರುತ್ತಿದೆ. ಈ ಉತ್ತಮರ್ ಕೋಯಿಲ್ ಎಂಬ ದೇವಾಲಯವನ್ನು ಜನಕ ಮಹಾರಾಜನು ನಿರ್ಮಿಸಿದ್ದಾನೆ.

### ಪೂರ್ಣವಲ್ಲೀನಾಯಿಕಾ

ಹಿಂದೆ ಚತುರ್ಮುಖ ಬ್ರಹ್ಮನಿಗೆ ಐದು ಮುಖಗಳಿದ್ದುವು. ಒಂದು ದಿನ ಪರಮೇಶ್ವರನು ಅಹಂಕಾರ'ದಿಂದ ಗರ್ವವನ್ನು ಹೊಂದಿದ್ದ ಐದನೆಯ ಶಿರವನ್ನು ನೋಡಿ ಕೋಪೋದ್ರಿಕ್ತನಾಗಿ





ತನ್ನ ಕರಗಳಿಂದ ಆ ಶಿರಸ್ಸನ್ನು ಖಂಡಿಸಿದ. ಅದರಿಂದಾಗಿ ಬ್ರಹ್ಮನಿಗೆ ಗರ್ವಭಂಗ ವಾಯಿತು. ಆದರೆ ಬ್ರಹ್ಮನ ಶಿರಸ್ಸನ್ನು ಖಂಡಿಸಿದ್ದರಿಂದ ಆ ಮಹಾದೇವನಿಗೆ ಬ್ರಹ್ಮಹತ್ಯಾಪಾತಕವು ಉಂಟಾಯಿತು. ಹಾಗೆಯೇ ಬ್ರಹ್ಮಕಪಾಲವು ಶಿವನಕರದಲ್ಲೇ ಉಳಿದು ಹೋಯಿತು. ಈ ದೋಷಕ್ಕೆ ಪ್ರಾಯಶ್ಚಿತ್ತವಾಗಿ ಯಾವ ಕ್ಷೇತ್ರದಲ್ಲಿ ನಿನ್ನ ಹಸ್ತದಲ್ಲಿರುವ ಕಪಾಲವು ಅನ್ನದಿಂದ ತುಂಬುತ್ತದೋ ಅಲ್ಲಿ ಈ ಬ್ರಹ್ಮಹತ್ಯಾದೋಷವು ಪರಿಹಾರವಾಗುತ್ತದೆಂದು ಅಶರೀರವಾಣಿಯ ಮಾತನ್ನು ಕೇಳಿಸಿಕೊಂಡ ಪರಮಶಿವನು ಕಪಾಲವನ್ನು ಹೊಂದಿದ ತನ್ನ ಕರದೊಂದಿಗೆ ಎಲ್ಲಾ ಕ್ಷೇತ್ರ ಗಳನ್ನೂ ಸಂದರ್ಶಿಸುತ್ತಾ ಈ ದಿವ್ಯ ಕ್ಷೇತ್ರವಾದ ತಿರುಕ್ಕರಂಬ ನೂರ್ ಅನ್ನು ಸಮೀಪಿಸುತ್ತಿರುವಾಗ ನಾರಾಯಣನು ಪರಮ ಶಿವನ ಬ್ರಹ್ಮಹತ್ಯಾ ಪಾತಕವನ್ನು ನಿವಾರಿಸಬೇಕೆಂದು ಸಂಕಲ್ಪಿಸಿ,ಪೂರ್ಣವಲ್ಲೀನಾಯಿಕಾ ರೂಪದಲ್ಲಿದ್ದ ಲಕ್ಷ್ಮೀ ದೇವಿಗೆ, ಶಿವನನ್ನು ಅನುಗ್ರಹಿಸಬೇಕೆಂದು ಆದೇಶಿಸಿದ. ನಾರಾ ಯಣನ ಆದೇಶದ ಪ್ರಕಾರ ಜಗನ್ಮಾತೆಯಾದ ಪೂರ್ಣವಲ್ಲೀ ನಾಯಿಕಾ ಸ್ವರೂಪಿಣಿಯಾದ ಲಕ್ಷ್ಮೀದೇವಿ ಈ ದಿವ್ಯಕ್ಷೇತ್ರಕ್ಕೆ ಬಂದು ನೆಲೆಸಿ ಪಿಚ್ಚಾಂಡಾರ್ ಅಂದರೆ ಶಿವನ ಕರಗತವಾದ ಕಪಾಲದಲ್ಲಿ ಅನ್ನವನ್ನು ಪ್ರಸಾದಿಸಿದಾಗ ಅಲ್ಲೇ ಆ ಬ್ರಹ್ಮಹತ್ಯಾ ದೋಷವು ತೊಲಗಿ ಹೋಯಿತು. ಅಂದಿನಿಂದ ಇಂದಿನ ವರೆಗೂ ಲಕ್ಷ್ಮೀದೇವಿ ತನ್ನ ದರ್ಶನಾರ್ಥವಾಗಿ ಬರುವ ಭಕ್ತರ ಮನೋಭೀಷ್ಟೆಗಳನ್ನು ನೆರವೇರಿಸುತ್ತಾ ಅವರ ಕೋರಿಕೆಗಳನ್ನು ಪೂರ್ಣಗೊಳಿಸುತ್ತಾ ಪೂರ್ಣವಲ್ಲೀನಾಯಿಕ ಎಂಬ ಹೆಸರಿ ನಿಂದ ಈ ಕ್ಷೇತ್ರದಲ್ಲಿ ನೆಲಗೊಂಡು ಪ್ರಸಿದ್ಧಳಾಗಿದ್ದಾಳೆ. ಲಕ್ಷ್ಮೀ ನಾರಾಯಣರ ಆದೇಶದ ಪ್ರಕಾರ ಗರ್ವಭಂಗವಾದ ನಂತರ ಚತುರ್ಮುಖ ಬ್ರಹ್ಮ ಸರಸ್ವತೀ ಸಮೇತನಾಗಿ ಇಲ್ಲಿ ನಾರಾ ಯಣನನ್ನು ಸೇವಿಸಿ ಇಲ್ಲೇ ಶಿಲಾರೂಪದಲ್ಲಿ ನೆಲೆಸಿದ್ದಾನೆ. ಹಾಗೆಯೇ ಲಯಕಾರಕನಾದ ಶಿವನು ಈ ಕ್ಷೇತ್ರದಲ್ಲಿ ಭಿಕ್ಷಾಟ ನೆಗೆ ಬಂದಿದ್ದರಿಂದ ಪಿಚ್ಚಾಂಡಾರ್ ಎಂಬ ಹೆಸರಿನಿಂದ ಪಾರ್ವತಿ ಸಮೇತನಾಗಿ ಇಲ್ಲೇ ನೆಲೆಗೊಂಡಿದ್ದಾನೆ. ಇನ್ನು ಸರ್ವೋತ್ತಮನಾದ ನಾರಾಯಣನು ಪುರುಷೋತ್ತಮನ್ ಎಂಬ ಹೆಸರಿನಿಂದ ಪೂರ್ಣವಲ್ಲಿನಾಯಿಕಾ ಸಮೇತನಾಗಿ ಭಕ್ತರ ಕೋರಿಕೆಗಳನ್ನು ಪೂರ್ಣಗೊಳಿಸುತ್ತಿದ್ದಾನೆ ಇದೇ ಈ ಕ್ಷೇತ್ರದ ಮಹಿಮೆಯಾಗಿದೆ.

### ಕದಂಬ ತೀರ್ಥದ ಉದ್ಭವ

ಬ್ರಹ್ಮಹತ್ಯೆಯಂತಹಾ ಮಹಾಪಾತಕವನ್ನು ಕೂಡಾ ತೊಲಗಿಸುವ ಮಹಿಮೆಯನ್ನು ಹೊಂದಿರುವಂತಾಹ ಈ ಕ್ಷೇತ್ರ ವನ್ನು ಸಂದರ್ಶಿಸಬೇಕೆಂಬ ಕುತೂಹಲದಿಂದ ಚತುರ್ಮುಖ ಬ್ರಹ್ಮ ಈ ಕ್ಷೇತ್ರಕ್ಕೆ ಆಗಮಿಸಿ, ಅಲ್ಲಿ ನಾರಾಯಣನನ್ನು ಕಾಣದೇ, ಚಿಂತಾಕ್ರಾಂತನಾಗಿದ್ದಾಗ,ಒಂದು ಕದಂಬ ವೃಕ್ಷವನ್ನು ನೋಡಿ ನಾರಾಯಣನು ಸರ್ವಾಂತರ್ಯಾಮಿ ಎಂದು ಮನ ಗಂಡು ಆ ವೃಕ್ಷವನ್ನು ಹೂವುಗಳಿಂದ ಅದರ ಅಂತರ್ಯಾಮಿ ಸ್ವರೂಪ ನಾದ ನಾರಾಯಣನನ್ನು ಆರಾಧಿಸುತ್ತಾ.ತನ್ನ ಕಮಂಡಲ ದಲ್ಲಿನ ಜಲದಿಂದ ಆ ವೃಕ್ಷವನ್ನು ಅಭಿಷೇಕ ಮಾಡಿದಾಗ ಆ ಅಭಿಷೇಕ ಜಲದ ಮೂಲಕ ಉದ್ಭವಿಸಿದ ತೀರ್ಥವೇ ಈ ಕದಂಬ ತೀರ್ಥ! ನಂತರ ಬ್ರಹ್ಮನಿಗೆ ನಾರಾಯಣನ ಸಾಕ್ಷಾ ತ್ಕಾರವಾಗಿ ರುವಂತೆ ಸ್ಥಳ ಪುರಾಣವು ತಿಳಿಸುತ್ತಿದೆ. ಆದ್ದರಿಂದ ಸಾಕ್ಷಾತ್ ಬ್ರಹ್ಮನಿಂದ ಅಭಿಷೇಕಿಸಿದ ಪವಿತ್ರ ಜಲವು ಈ ತೀರ್ಥದಲ್ಲಿರುವುದರಿಂದ ಇದರಲ್ಲಿ ಸ್ನಾನ ಮಾಡಿದರೆ ಸಕಲ ಪಾಪಹರಣವಾಗುವುದರಲ್ಲಿ ಎಂತಹಾ ಸಂದೇಹವೂ ಇಲ್ಲ.

## ತಿರುಮಂಗೈ ಆಳ್ವಾರರ ಆಗಮನ

ಆಳ್ವಾರರಲ್ಲಿ ಕೊನೆಯವರಾದ ಆಳ್ವಾರರು ಈ ತಿರು ಮಂಗೈ ಆಳ್ವಾರರು,ಇವರು ಈ ಕ್ಷೇತ್ರವನ್ನು ಸಂದರ್ಶಿಸಿ ಇಲ್ಲಿರುವ ಪುರುಷೋತ್ತಮ ಪೆರುಮಾಳ್ ಅನ್ನು ಸಾಕ್ಷಾತ್ ಶ್ರೀರಂಗನಾಥನೆಂದು ಭಾವಿಸಿ ಮಂಗಳಾಶಾಸನವನ್ನು ರಚಿಸಿದರು.



ಪೆರಾನ್ನೈ ಕುರುನ್ಗು ಯೆಂಬೆರುಮಾನ್ನೈ ತಿರುತ್ತಣ್ಣಾಲ್
ಉರಾನ್ನೈ ಕ್ಕರಮಂಬಾನೂರುತ್ತಮನ್ನೈ ಮುತ್ತಿಲಂಗು
ಕಾರಾರ್ ತಿಣ್ ಕಡಲೇಳುಮ್ ಮಲೈಯೆಳುಯುವ್ವುಳಗೇ ಯುಣ್ಡುಮ್
ಆರಾದೆನ್ರಿರುಂದಾನ್ನೈ ಕ್ಕಣ್ಡುದು ತೆನ್ನರಂಗತ್ತೆ

(ತಿರುಮಂಗೈ ಆಳ್ವಾರ್ ಪೆ.ತಿ. ಮೊ 5-6-2)

ಈ ರೀತಿ ತಿರುಮಂಗೈ ಆಳ್ವಾರರು ಸ್ವಾಮಿಯನ್ನು ಸ್ತುತಿಸಿ ಅನಿರ್ವಚನೀಯವಾದ ಆನಂದವನ್ನು ಹೊಂದಿದರು.

### ಪುರುಷೋತ್ತಮನ್ ಪೆರುಮಾಳ್ ಮೂರ್ತಿ

ಈ ಕ್ಷೇತ್ರದಲ್ಲಿ ಪುರುಷೋತ್ತಮನ್ ಪೆರುಮಾಳ್ ಪೂರ್ವದಿಕ್ಕನ್ನು ನೋಡುತ್ತಾ ಪವಳಿಸಿರುವಂತಹಾ ಮೂರ್ತಿಯನ್ನು ನೋಡಬಹುದು.ಇದು ನೋಡುವುದಕ್ಕೆ ರಂಗನಾಥಸ್ವಾಮಿಯಂತೆ ಕಂಡು ಬರುತ್ತಾ ಆಲಯದಲ್ಲಿದೆ. ಸ್ವಾಮಿಯ ದಕ್ಷಿಣದಲ್ಲಿ ಪೂರ್ಣವಲ್ಲೀತಾಯರ್ ದರ್ಶನವನ್ನು ನೀಡುತ್ತಾರೆ. ಈ ಕ್ಷೇತ್ರವು ಮಹಾಗುರುಸ್ಥಾನವೆಂದು ಹೆಸರುವಾಸಿಯಾಗಿದೆ.

ಒಟ್ಟಾರೆ ಹೇಳಬೇಕಾದರೆ, ಪುರುಷೋತ್ತಮ ಪೆರುಮಾಳ್-ಪೂರ್ಣಾದೇವಿ ತಾಯಾರ್ - ಕದಂಬ ತೀರ್ಥ-ಉದ್ಯೋಗ ವಿಮಾನ-ಪೂರ್ವಮುಖ-ಭುಜಂಗಶಯನ, ಸ್ಥಳ ವೃಕ್ಷ-ಬಾಳೆಗಿಡ,ಸನಕ ಸನಂದಾದಿಗಳು ಕದಂಬ ಮಹರ್ಷಿಗೆ, ಉಪರಿಚರ ವಸುಮಹಾರಾಜನಿಗೆ, ಪ್ರತ್ಯಕ್ಷವಾಗಿ ತಿರುಮಂಗೈ ಆಳ್ವಾರರು ಕೀರ್ತಿಸಿರುವಂತಹಾ ಮಹಿಮಾನ್ವಿತ ಕ್ಷೇತ್ರವೆಂದು ಹಿರಿಯರು ಕೀರ್ತಿಸಿದ್ದಾರೆ.

ರಂಭಾ ವೃಕ್ಷಯುತೇ ಕದಂಬ ನಗರೇ ಕಾದಂಬ ತೀರ್ಥಾಂಚಿತೇ
ಪೂರ್ವಾಖ್ಯಾಪ್ರಿಯಯಾ ಭುಜಂಗಶಯನೋ ಹ್ಯುದ್ಯೋಗವೈಮಾನಗಃ
ಧ್ಯಾತಶ್ಶ್ರೀಸ್ಸನಕಾದಿಯೋಗಿ ಕಲಿಜಿತ್ ಕಾದಂಬ ವಸ್ವಾದಿಭಿಃ
ಪ್ರಾಗಸ್ಯಃ ಪುರುಷೋತ್ತಮೋ ವಿಜಯತೇ ಕೀರ್ತ್ಯಃ ಕಲಿದ್ವೇಷಭಿಃ

ಇಂತಹಾ ಪರಮಪವಿತ್ರವಾದ ಕ್ಷೇತ್ರವನ್ನು ಸಕಲ ಜನರು ದರ್ಶಿಸಿ, ಪೂರ್ಣವಲ್ಲೀನಾಯಿಕಾ ಸಮೇತನಾದ ಆ ಪುರುಷೋ ತ್ತಮನ್ ಪೆರುಮಾಳ್ ಅನುಗ್ರಹವನ್ನು ಹೊಂದಿ ಧನ್ಯರಾಗಿ.

**ಲೋಕಾಃ ಸಮಸ್ತಾಃ ಸುಖಿನೋ ಭವಂತು**


**ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ**

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

**- ಕಾರ್ಯನಿರ್ವಹಣಾಧಿಕಾರಿ**



ತಿರುಮಲೆ ತಿರುಪತಿ ದೇವಸ್ಥಾನಗಳು

# ತಿ.ತಿ.ದೇ., ಪಂಚಗವ್ಯ ಉತ್ಪತ್ತಿಗಳು ನಮಾಮಿ ಗೋವಿಂದ

ವೇದ ಸಂಸ್ಕೃತಿಯಲ್ಲಿ ಗೋಮಾತೆಗೆ ಬಹಳ ಪ್ರಾಮುಖ್ಯತೆ ಇದೆ.ಗೋಮಾತೆಯಿಂದ ನಮಗೆ ಗೋಮಯ,ಗೋಮೂತ್ರ, ತುಪ್ಪ,ಹಾಲು,ಮೊಸರು ಇವೆಲ್ಲವೂ ಪಂಚಗವ್ಯಗಳೆಂದು ಪ್ರಸಿದ್ಧಿ ಯಾಗಿದೆ. ಇವೆಲ್ಲವೂ ಗೋಮಾತೆಯಿಂದ ಸಕಲ ಜೀವರಾಶಿಗೆ ಲಭ್ಯವಾಗುತ್ತಿರುವ ಬೆಲೆ ಕಟ್ಟಲಾಗದ ಸಂಪತ್ತು ಈ ಪಂಚಗವ್ಯ ಗಳ ಮೂಲಕ ತಿ.ತಿ.ದೇ.15 ವಿಧಗಳ ಆಯುರ್ವೇದದ ಉತ್ಪತ್ತಿ ಗಳನ್ನು ತಯಾರಿಸುತ್ತಿದ್ದಾರೆ.

**1. ಧೂಪದ ಉತ್ಪತ್ತಿಗಳು :** ಅವನಿ ಧೂಪದ ಚೂರ್ಣ,ಧರಣಿ ಅಗರ ಬತ್ತಿ, ಧಾತ್ರಿ ಸಾಂಬ್ರಾಣಿಕಪ್ಸ್, ವೈಷ್ಣವಿ ಧೂಪ್‌ಸ್ಟಿಕ್ಸ್ ಮತ್ತು ವಾರಾಹಿ ಧೂಪ ಕೋನ್ಸ್ ಎಂಬ ಹೆಸರುಗಳಿಂದ ಐದು ವಿಧವಾದ ಧೂಪದ ಉತ್ಪತ್ತಿಗಳನ್ನು ತಯಾರಿಸುತ್ತಿದ್ದಾರೆ.ಗೋಮಯದೊಂದಿಗೆ ಅಗರು ಮೊದಲಾದ ಮೂಲಿಕೆಗಳನ್ನು ಉಪಯೋಗಿಸಿ ತಯಾರು ಮಾಡುವ ಈ ಧೂಪ ಸೂಕ್ಷ್ಮಕ್ರಿಮಿಗಳ (ಬ್ಯಾಕ್ಟೀರಿಯಾ, ವೈರಸ್,ಮೊದಲಾದ) ಮೂಲಕ ಉತ್ಪನ್ನವಾಗುವ ವಾಯು ಮಾಲಿನ್ಯವನ್ನು ತೊಲಗಿಸಿ ಪವಿತ್ರ ಭಾವನೆ, ಪವಿತ್ರವಾದ ವಾತಾವರಣನ್ನುಂಟು ಮಾಡುತ್ತದೆ.




**2.ಪೃಥ್ವಿ - ವಿಭೂತಿ :** ಪ್ರಾಚೀನ ಶಾಸ್ತ್ರಗಳಲ್ಲಿ ಹೆಸರಿಸಿರುವಂತೆ ಪಂಚಭೂತಾತ್ಮಕವಾದ ಹೋಮಕುಂಡದಲ್ಲಿ ಗೋಮಯ, ಗರಿಕೆ, ಕರ್ಪೂರ,ಹಸುವಿನ ತುಪ್ಪ ಇವುಗಳ ಮೂಲಕ ಇವನ್ನು ತಯಾರು ಮಾಡುತ್ತಾರೆ.ಈ ವಿಭೂತಿಯನ್ನು ಹಣೆಯಲ್ಲಿ ಧರಿಸು ವುದು ಶುಭಕರ ಮತ್ತುಶ್ರೇಯಸ್ಕರವಾದುದು. ಇದು ಆರೋಗ್ಯಕ್ಕೂ ಒಳ್ಳೆಯದೆಂದು ಶಾಸ್ತ್ರರೀತ್ಯಾ ಹೇಳಲ್ಪಟ್ಟಿದೆ.

**3. ಧನ್ಶಿಕ - ಟೂತ್‌ಪೌಡರ್ :** ಪ್ರಾಚೀನ ಆಯುರ್ವೇದದ ವೈದ್ಯ ಶಾಸ್ತ್ರದಲ್ಲಿ ಹೇಳಿರುವಂತೆ ಗೋಮಯದ ಭಸ್ಮ, ಸೈಂದವಲವಣ, ಲವಂಗ, ನಲ್ಲಿಕಾಯಿಯಂತಹಾ ಅಮೂಲ್ಯವಾದ ಮೂಲಿಕೆ ಗಳಿಂದ ತಯಾರಿಸಿದ ಹಲ್ಲಿನ ಪುಡಿ ಇವುಗಳನ್ನು ಬಳಸುವುದರ ಮೂಲಕ ಬಾಯಿ,ಹಲ್ಲು, ವಸಡುಗಳಿಗೆ ಸಂ ಬಂಧಿಸಿದ ವ್ಯಾಧಿಗಳು ನಿವಾರಣೆಯಾಗುತ್ತದೆ.

**4. ಹಿರಣ್ಮಯಿ -ಹರ್ಬಲ್ ಫೇಸ್‌ಪ್ಯಾಕ್ :** ಚರ್ಮದ ಬಣ್ಣವನ್ನು ಹೊಳೆಯವಂತೆ ಮಾಡುವ ಅರಿಶಿನ, ಮಂಜಿಷ್ಟ, ಮೊದಲಾದ ಮೂಲಿಕೆಗಳಿಂದ ತಯಾರಾದ ಈ ಫೇಸ್ ಪ್ಯಾಕ್ ಅನ್ನು ಬಳ ಸುವುದರಿಂದ ಮೊಡವೆಗಳು, ಕಪ್ಪು ಮಚ್ಚೆಗಳು, ಕಣ್ಣುಗಳ ಕೆಳಗೆ ಏರ್ಪಡುವ ಕಪ್ಪು ವಲಯಗಳನ್ನು ಕಡಿಮೆ ಮಾಡಬಹುದು.

**5. ಮಹಿ - ಹರ್ಬಲ್ ಸೋಪ್ ::** ಗೋಮೂತ್ರ, ಅರ್ಕ,ನಾಲ್ವ ಮೊದಲಾದ ತೈಲದಂತಹ ಅಮೂಲ್ಯವಾದ ಔಷಧಿಗಳೊಂದಿಗೆ ತಯಾ ರಿಸಲಾದ ಪ್ರಕೃತಿ ಸಹಜವಾದ ಸೋಪು. ಇದನ್ನು ಬಳಸುವುದರಿಂದ ಚರ್ಮ ಕಾಂತಿ ಯನ್ನು ಇಮ್ಮಡಿಗೊಳಿಸಿ ಚರ್ಮ ರಕ್ಷಣೆ ಯನ್ನು ಮಾಡಿ, ಮೊಡವೆಗಳು, ಚರ್ಮವ್ಯಾಧಿ ಗಳನ್ನು ನಿವಾರಿಸುತ್ತದೆ. ಇದು ಚರ್ಮದ ಮೇಲೆ ಹೇರಿಕೊಂಡಿ ರುವ ವ್ಯಾಧಿಕಾರಕ ಸೂಕ್ಷ್ಮ ಜೀವಿಗಳನ್ನು ನಾಶ ಮಾಡುತ್ತದೆ.




**6. ಕಶ್ಯಪಿ - ಹರ್ಬಲ್ ಶಾಂಪು:** ಗೋಮೂತ್ರ,ಸೀಗೆಕಾಯಿ, ಕುಂಕುಡುಕಾಯಿ ಕೊಬ್ಬರಿ ಎಣ್ಣೆಯ ಮಿಶ್ರಮದೊಂದಿಗೆ ತಯಾ ರಿಸುವ ಶಾಂಪೂ ಕೇಶ ರಕ್ಷಣೆಗೆ ಬಹಳ ಉಪಯೋಗವಾಗು ತ್ತದೆ.

**7. ಊರ್ವಿ - ನಾಜಲ್ ಡ್ರಾಪ್ಸ್:** ಗೋಮಯ,ಗೋಕ್ಷೀರ, ಎಳ್ಳೆಣ್ಣೆಗಳ ಮಿಶ್ರಮದೊಂದಿಗೆ ತಯಾರು ಮಾಡುವ ಈ ಡ್ರಾಪ್ಸ್ ಅನ್ನು ಪ್ರತೀ ದಿನವೂ ಬೆಳಗ್ಗೆ ಉಗುರು ಬೆಚ್ಚಗೆ ಮಾಡಿ ಮೂಗಿನ ಹೊಳ್ಳೆಗಳಲ್ಲಿ ಎರಡು ಬಿಂದುಗಳನ್ನು ಹಾಕಿಕೊಳ್ಳುವುದರಿಂದ ತಲೆನೋವು,ಆಗಾಗ ಬರುವ ನೆಗಡಿಯನ್ನು ಕಡಿಮೆ ಮಾಡಿ ಕೊಳ್ಳಬಹುದು, ಕಣ್ಣುಗಳು, ಕಿವಿಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ.























**8. ನಂದಿನಿ - ಗೋಅರ್ಕ :** ಗೋಮೂತ್ರವನ್ನು ಪ್ರತ್ಯೇಕ ವಿಧಾನದಿಂದ ಬಿಸಿ ಮಾಡಿ ಅದರ ಮೂಲಕ ಬರುವ ಆವಿಯನ್ನು ತಂಪಾಗಿಸಿ ದ್ರವ ರೂಪದಲ್ಲಿ ತರುವುದೇ ಈ ಉತ್ಪತ್ತಿ ಇದನ್ನು ಕ್ಯಾನ್ಸರ್, ಶ್ವಾಸ ಕೋಶ ವ್ಯಾಧಿಗಳು, ಕಾಮಾಲೆಯಂತಹಾ ವ್ಯಾಧಿಗಳ ಚಿಕಿತ್ಸೆಯಲ್ಲಿ ಪ್ರಪಂಚ ವ್ಯಾಪ್ತವಾಗಿ ವಿಶಿಷ್ಟವಾಗಿ ಔಷಧಿಯಂತೆ ಉಪಯೋಗಿಸುತ್ತಿದ್ದಾರೆ.

**9. ಭೂಮಿ - ಹರ್ಬಲ್ ಫ್ಲೋರ್ ಕ್ಲೀನರ್ :** ಗೋಮೂತ್ರ ಅರ್ಕ ಪ್ರಧಾನ ದ್ರವ್ಯವಾಗಿ ನಿಂಬೆಹುಲ್ಲು, ಪೈನ್ ಆಯಿಲ್‌ನೊಂದಿಗೆ ಈ ಫ್ಲೋರ್‌ಕ್ಲೀನರ್ ತಯಾರಿಸುತ್ತಾರೆ. ಇದು ನೆಲವನ್ನು ಶುಚಿಗೊಳಿಸುವುದೇ ಅಲ್ಲದೇ,ಸೂಕ್ಷ್ಮ ಜೀವಾಣುಗಳ ಸಂಹಾರಕವಾಗಿ ಕೆಲಸ ಮಾಡುತ್ತದೆ.ಇದು ಸುವಾಸನಾ ಭರಿತವಾಗಿಯೂ ಇರುತ್ತದೆ.

**10.ಕ್ಷಮ - ಬೆರಣಿಗಳು : ಭೂಪತಿ - ಕೌಡಂಗ್‌ಲಾಗ್ಸ್ (ಉದ್ದನೆಯ ಬೆರಣಿಗಳು):**

ದೇಶೀಯ ಗೋವುಗಳಿಂದ ಶೇಖರಿಸಿರುವ ಗೋಮಯ, ಹೊಟ್ಟು (ಬೆತ್ತದ ಹೊಟ್ಟು) ಮರದ ಹೊಟ್ಟುಗಳಿಂದ ತಯಾರು ಮಾಡಿದ ಇವನ್ನು ಯಜ್ಞ-ಯಾಗಾದಿಗಳಿಗಾಗಿ ಉಪಯೋಗಿಸುತ್ತಾರೆ. ದಹನಕ್ರಿಯೆಗಳಿಗೆ ಇವನ್ನು ಉಪಯೋಗಿಸುವುದು ಶ್ರೇಷ್ಠವೆಂದು ಭಾವಿಸುತ್ತಾರೆ.

## ಪಂಚಗವ್ಯ ಉತ್ಪತ್ತಿಗಳು-ಅಗರ ಬತ್ತಿಗಳು- ಸ್ವಾಮಿಯವರ ಫೋಟೋ ಫ್ರೇಮ್ಸ್ ವಿಕ್ರಯ ಕೇಂದ್ರಗಳು

**ತಿರುಮಲೆ**

1. ಸ್ವಾಮಿಯವರ ಲಡ್ಡುಕೌಂಟರ್ ಕಾಂಪ್ಲೆಕ್ಸ್
2. ಸ್ವಾಮಿಯವರ ಆಲಯದ ಮುಂದೆ
3. ಲೇಪಾಕ್ಷಿ ಎಂಪೋರಿಯಂ ಎದುರಿಗೆ
4. ಅನ್ನಪ್ರಸಾದ ಕಾಂಪ್ಲೆಕ್ಸ್

**ತಿರುಪತಿ**

5. ತಿ.ತಿ.ದೇ. ಆಡಳಿತ ಭವನದ ಎದುರಿಗೆ,ಕೆ.ಟಿ.ರೋಡ್
6. ಶ್ರೀಕಪಿಲೇಶ್ವರಸ್ವಾಮಿ ಆಲಯದ ಪ್ರಾಂಗಣದಲ್ಲಿ
7. ಧ್ಯಾನಮಂದಿರ ಸ್ಟಾಲ್ (ಶ್ರೀಗೋವಿಂದರಾಜ ಸ್ವಾಮಿಯವರ ರಥದ ಪಕ್ಕದಲ್ಲಿ)
8. ಶ್ರೀಗೋವಿಂದರಾಜ ಸ್ವಾಮಿಯವರ ಆಲಯದ ಪ್ರಾಂಗಣದಲ್ಲಿ
9. ವಿಷ್ಣುನಿವಾಸಂ ವಸತಿ ಸಮುದಾಯದ ಸ್ಟಾಲ್‌ನಲ್ಲಿ
10. ಶ್ರೀಕೋದಂಡರಾಮ ಸ್ವಾಮಿಯವರ ಆಲಯದ ಪ್ರಾಂಗಣದಲ್ಲಿ
11. ಶ್ರೀನಿವಾಸಂ ವಸತಿ ಸಮುದಾಯದ ಸ್ಟಾಲ್‌ನಲ್ಲಿ
12. ತಿರುಪತಿ ರೈಲ್ವೆಸ್ಟೇಷನ್

**ತಿರುಚಾನೂರು**

13. ಶ್ರೀ ಪದ್ಮಾವತಿ ಅಮ್ಮನವರ ಆಲಯದ ಪ್ರಾಂಗಣದಲ್ಲಿ

**ಶ್ರೀನಿವಾಸಮಂಗಾಪುರಂ**

14. ಶ್ರೀಕಲ್ಯಾಣವೆಂಕಟೇಶ್ವರ ಸ್ವಾಮಿಯವರ ಆಲಯದ ಪ್ರಾಂಗಣದಲ್ಲಿ

**ತಿರುಮಲೆ ಸ್ವಾಮಿಯವರ ಮತ್ತು ಇತರ ಪ್ರಮುಖ ತಿ.ತಿ.ದೇ. ಅನುಬಂಧ ಆಲಯಗಳಲ್ಲಿ ಕೈಂಕರ್ಯಕ್ಕೆ ಉಪಯೋಗಿಸುವ ಪುಷ್ಪಗಳೊಂದಿಗೆ ಫೋಟೋ ಫ್ರೇಮ್ಸ್ ಮತ್ತು ಅಗರಬತ್ತಿಗಳನ್ನು ತಯಾರಿಸಲಾಗುತ್ತಿದೆ, ಇದು ತುಂಬಾ ಪವಿತ್ರವಾದುದು.**

**- ಕಾರ್ಯನಿರ್ವಹಣಾಧಿಕಾರಿ**
**ತಿ.ತಿ.ದೇವಸ್ಥಾನಗಳು**





ಧಾರಾವಾಹಿ

ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ

# "ದಯ ಮಾಡು-ದಯ ಮಾಡು ಶ್ರೀನಿವಾಸ " ಆತ್ಮನಿವೇದನೆ ಕೀರ್ತನೆಯ ಒಳನೋಟ

- ಡಾ|| ಸುಭಾಸ ಕಾಖಂಡಕಿ

79754 42458

ದಯಮಾಡು - ದಯಮಾಡು -ಶ್ರೀನಿವಾಸ ಭವ
ಭಯ ನಿವಾರಣ ಭಜಕ ಭಕ್ತರ ಘನ ನಾಶನ ||ಪ||

ಇಲ್ಲಿ ದಾಸರು ಅನನ್ಯ ಭಕ್ತಿಯಿಂದ ಶ್ರೀನಿವಾಸನನ್ನು ಪ್ರಾರ್ಥಿಸುತ್ತಿದ್ದಾರೆ ಹೇ ! ಶ್ರೀನಿವಾಸ ದಯಮಾಡು - ನಿನ್ನ ದರುಶನದ ಭಾಗ್ಯ ಕೊಡು ಎಂದು

ಶ್ರೀನಿವಾಸನು ದಾಸರ ಆರಾಧ್ಯದೈವ, ಅನನ್ಯ ಭಕ್ತಿಯಿಂದಲೇ ಅವನ ಪಾದಕ್ಕೆ ಬಿದ್ದು ದಯ ಮಾಡದಿದ್ದರೆ ನನ್ನ 'ಪ್ರಾಣವ ಕಪ್ಪನೀವೆ' ಎಂದು ಸಮರ್ಪಣ ಭಾವದ ಭಕ್ತಿಯನ್ನು ಅರ್ಪಿಸಿ ಅವನನ್ನು ಸಾಕ್ಷಾತ್ಕರಿಸಿಕೊಂಡು ಭಗವಂತನಿಂದಲೇ ನೇರ ಅಂಕಿತ ಪಡೆದಂಥವರು. ಆದರೂ ತಮಗೆ ಅವನ ದರುಶನದ ಹಂಬಲವಾದಾಗಲೆಲ್ಲ, ಆತ್ಮನೀವೇದನೆಯನ್ನು ಮಾಡಿಕೊಳ್ಳುತ್ತಾ ಭಗವಂತನ ದಯೆಗಾಗಿ ಪ್ರಾರ್ಥಿಸುತ್ತಾರೆ.

ಎಂಥ ದಯಾಮಯಾ ನೀನು-ಭವ-ಭಯ (ಸಂಸಾರದಲ್ಲಿಯ ದುಃಖಗಳು ಭಯಗಳನ್ನು) ಎರಡನ್ನೂ ನಿವಾರಣೆ ಮಾಡಿ-ಮುಕ್ತಿ ಪಥಕ್ಕೆ ನಮನ್ನು ಕೊಂಡೊಯ್ಯುವ ದಾರಿ ತೋರಿಸುವವನು ನೀನು,ಜಗದ ದೊರೆಯೇ ದಯಮಾಡು ಎಂದು ಪ್ರಾರ್ಥಿಸಿದ್ದಾರೆ ಈ ಪಲ್ಲವಿಯಲ್ಲಿ,

**ಇನ್ನು ನುಡಿ - 1 ಮತ್ತು 2 ರಲ್ಲಿ**

ನೇಮ ವೆನ್ನಲಿಲ್ಲ ನಾಮದರಿಕೆಯಿಲ್ಲ
ನಾ ಮಹಾಪಾಪಿಯು ಸ್ವಾಮಿ ನೀನೊಲಿದು ಗಡ ||೧||

ಸದ್ಧರ್ಮ ಸರಕಿಲ್ಲ ಶುದ್ಧ ಬುದ್ಧಿಯಿಲ್ಲ
ಉದ್ಧರಿಸೆನ್ನನಿರುದ್ಧ ಹರಿ ಕರುಣಿ ||೨||

ಇಲ್ಲಿ ದಾಸರು ಶ್ರೀಹರಿಗೆ ಕರುಣೆ ತೋರುವಂತೆ ಆತ್ಮನಿವೇದನೆ ಮಾಡಿಕೊಳ್ಳುತ್ತಿದ್ದಾರೆ.

ನಾನಾದರು ಎಂಥವನು? ಎಷ್ಟು ತಪ್ಪುಗಳನ್ನು ಮಾಡಿದ ವನು ಅಜ್ಞಾನಿಯಾದ ನಾನು, ನೇಮ-ನಿಷ್ಠೆವ್ರತಾಚಾರಣೆ ಮಾಡಿ ನಿನ್ನನ್ನು ಆರಾಧಿಸಲಿಲ್ಲ, ನಿನ್ನ ನಾಮದ ಒಳಗಿನ-ಅರಿವನ್ನು ಅರಿಯದವನು ನಾನು ನಿನ್ನ ನಾಮದ ಸವಿಯೂ ಎನಗಿಲ್ಲ ಎಂಥಹ ಪಾಪಿ ನಾನು,ನಿನ್ನನ್ನೇ ನೆನೆಯದೆ, ಶುದ್ಧ-ಬುದ್ಧಿ ಇಲ್ಲದ ನನ್ನನ್ನು ಕರುಣಾಕರನಾದ ನೀನೇ ಉದ್ಧರಿಸಬೇಕು.

ಸದ್ಧರ್ಮ ಸರಕಿಲ್ಲ ಎನೆಗೆ - ಅಂದರೆ ಹುಟ್ಟಿ ಬಂದ ಮನುಷ್ಯನಿಗೆ ತನ್ನದೆ ಆದ ಅವನೇ ಗಳಿಸಿದ ಸಂಪತ್ತಿರಬೇಕು. ಅದು ಎಂಥ ಸಂಪತ್ತು? ಧರ್ಮ-ನೀತಿ-ನಿಯಮ, ನಿನ್ನ ನಾಮಸಂಕೀರ್ತನೆಯ ಪುಣ್ಯ ಎಂಬ ಇಂಥ ಗಳಿಸಿದ ಸದ್ಧರ್ಮ ಸರಕು ಆಧ್ಯಾತ್ಮಿಕ ಸಂಪತ್ತು ನನ್ನಲ್ಲಿ ಈ ಸಾಧನ-ಸಂಪತ್ತನ್ನು ಘಳಿಸಿ ಅಲೌಕಿಕದ ಮಾರ್ಗ ಹಿಡಿಯಬೇಕೆಂಬ ಬುದ್ಧಿಯಿಲ್ಲ-ಇಂಥವನನ್ನು ನಿನ್ನ ಕರುಣಾ ಕಟಾಕ್ಷದಿಂದ ನೋಡಿ, ನನ್ನ ತಪ್ಪುಗಳನ್ನು ತಿದ್ದಿ-ಕ್ಷಮಿಸಿ ಉದ್ಧರಿಸು ಹೇ! ಕರುಣಾಮಯನಾದ ಶ್ರೀಹರಿಯೇ ಎಂದು ಅನನ್ಯವಾಗಿ ಪ್ರಾರ್ಥಿಸಿದ್ದಾರೆ ದಾಸರು-ಇಲ್ಲಿ ತಮಗಾಗಿ ದಾಸರು ತಮ್ಮನ್ನು ತಾವೇ ಉದ್ದೇಶಿಸಿಕೊಂಡು ಪ್ರಾರ್ಥಿಸಿದ್ದರೂ ಇಲ್ಲಿ ಇದು ಸಾಮಾನ್ಯ ಜನರಿಗೆ ಉಪದೇಶ ಎಂಬಂತಿದೆ.

**ಇನ್ನು ಮುಂದಿನ ನುಡಿಯಲ್ಲಿ**

ಸತ್ಕುಲ ಹೊಂದೇನು ಸತ್ಕರ್ಮ ಮಾರ್ಗಿಲ್ಲ
ಭಕ್ತರಕ್ಷಕ ಪಾಪ ಮುಕ್ತ ದೇವರ ದೇವ ||3||
ಅವಗುಣದೆಣಿಕೆಯ ವಿವರ ನೋಡದೆ ಅಯ್ಯ||
ಜವನ ಬಲೆಯನು ತಪ್ಪಿಸುವ ಸರೀಸೃಪ ಶಯ್ಯ||4||

ಇಲ್ಲಿ ದಾಸರು ಮತ್ತೆ ತಮ್ಮ ಹೃದಯವನ್ನೇ ಬಿಚ್ಚಿಡುತ್ತಾ ಶ್ರೀನಿವಾಸ ನಲ್ಲಿ ನೀವೇದನೇ ಮಾಡುತ್ತಿದ್ದಾರೆ.

ಹೇ ದೇವ! ಸತ್ಕುಲದಲ್ಲಿ ಹೊಂದಿ ಸಕಲಸದ್ಗುಣಗಳನ್ನು ಹೊಂದುವ ಪುಣ್ಯ ನನಗಿಲ್ಲ.ಸತ್ಕರ್ಮಗಳನ್ನು ಮಾಡಬೇಕೆಂದರೇ ಯಾವ ಸದ್ಮಾಮಾರ್ಗಗಳು ನನಗೆ ಗೊತ್ತಿಲ್ಲ.ಇವೆಲ್ಲ ಆಗಬೇಕಾದರೆ ಸಜ್ಜನರ ಸಂಗಬೇಕು ಅದಕ್ಕೆ ದಾಸರು ಇನ್ನೊಂದು ಕೀರ್ತನೆಯಲ್ಲಿ ಸಂಗವಾಗಲಿ- ಸಾಧು ಸಂವಾಗಲಿ - ಸಂಗದಿಂದ ಲಿಂಗದೇಹ ಭಂಗವಾಗಲಿ" ಎಂದು ಹೇಳಿ ಸಜ್ಜನರ ಸಹವಾಸದ ಮಹತ್ವವನ್ನು ತಿಳಿಸಿದ್ದಾರೆ. ಅಂತಹ ಸಜ್ಜನರ ಸಂಗ ಒದಗಿಸಿ ಭಕ್ತ ರಕ್ಷಕನಾದ ಜಗದೊಡೆಯನೇ ಪಾಪಮುಕ್ತನಾದ, ಯಾವ ದೋಷವು ಇಲ್ಲದ ಸರ್ವ ಸ್ವತಂತ್ರನಾದ ಶ್ರೀ ಹರಿಯೇ! ನೀನು ನಮ್ಮ ಪಾಪಗಳನ್ನು ಎಣಿಸದೆ. ಆ ಪಾಪ ಕರ್ಮಗಳ ಅವುಗುಣಗಳನ್ನು ನೋಡದೆ - ನಾವು ಯೌವನದಲ್ಲಿದಾಗ ಮಾಡುವ ಕುಕರ್ಮಗಳನ್ನು ತಪ್ಪಿಸಿ, ಲೌಕಿಕ ಬಂಧನದ ಬಲೆಯಿಂದ ಬಿಡಿಸಿ ಸನ್ಮಾರ್ಗದ ಹಾದಿ ತೋರಿಸೋ ಹೇ ಸರ್ಪಕಯನನೆ (ಸಾರಂಗ ಪಾಣಿಯೇ!) ನೀನಿಲ್ಲದಿನ್ನಾರೂ, ನಮಗಿಲ್ಲ. ದಯಮಾಡು ನಿನ್ನ ಕೃಪಾದೃಷ್ಟಿತೋರು ಸದ್ಗುಣಗಳ ಖಣಿಯೇ! ಎಂದು ದಾಸರು ಲೌಕಿಕ ಜನರಿಗೆ ಭವ ಬಂಧನದಲ್ಲಿ ಸಿಲುಕಿ ನರಳುವವರಿಗೆ ಪರಮಾತ್ಮನನ್ನು ಕಾಣುವ ದಾರಿ ತೋರಿದ್ದಾರೆ.

**ಇನ್ನು ಕೊನೆಯ ನುಡಿಯಲ್ಲಿ**

ಅಜಾಮಿಳ - ವ್ಯಾಧ ಆ ಗಜ ಅಹಲ್ಯೋದ್ಧರ
ನಿಜ ಪ್ರಸನ್ವೇಂಕಟೇಶ ಸುಜನ ಪರಿಪೋಷ||೫||

ಎಂದು ಹೇಳಿ

ಹೇ : ಸ್ವಾಮಿ! ನೀನು ಅಂಧಿಂಥವನಲ್ಲ, ನಿನ್ನ ಕರುಣೆ ಅಪ್ಪಿಷ್ಟಲ್ಲ ಅಜಾಮಿಳನಂಥಾ ಅಜ್ಞಾನಿ- ಪಾಪಿಯಾಗಿದ್ದರೂ ಅವನ ಅಂತ್ಯಕಾಲದಲ್ಲಿ ಅವನ ಮಗನ ಹೆಸರಾದ "ನಾರಾಯಣ" ಎಂದು ಕೂಗಿದಾಗಲೂ ಕೂಡ ನಿನ್ನ ನಾಮದ ಮಹಿಮೆಯಿಂದ ಅವನನ್ನು ಸ್ವರ್ಗಕ್ಕೆ ಕರೆತರಲು ದೇವದೂತರನ್ನು ಕಳುಹಿಸಿದಿ. ವ್ಯಾಧನಾದ ಬೇಡನು ತನಗೆ ತಿಳಿಯದೆ ಪಾಪಕರ್ಮಗಳನ್ನು ಮಾಡುತ್ತಿದ್ದಾನೆ ನಾರದರಿಂದ ಉಪದೇಶಗೊಂಡು ನಾಮದ ಜ್ಞಾನವಿಲ್ಲದೆ ಬರಿ ರಾಮ - ರಾಮ ಎಂದು ನಾಮ ಉಚ್ಚರಿಸಿದ್ದಕ್ಕೆ ಅವನನ್ನು ಜ್ಞಾನಿಯಾಗಿ ಮಾಡಿ ಮಹಾಮುನಿ ವಾಲ್ಮಿಕಿಯಾಗಿ ಮಾಡಿದಿ..

ಅಗಜ - ಮೊಸಳೆಬಾಯಲ್ಲಿ ಸಿಕ್ಕಿಕೊಂಡು ಗಜೇಂದ್ರ ಅತಿದಾರುಣವಾಗಿ ನರಳುತ್ತ ಹರಿ - ನೀನೆ ಗತಿ ಕೃಷ್ಣಾ ಎಂದು ಕೂಗಲು ಅವನನ್ನು ಶಾಪದಿಂದ ಮುಕ್ತ ಮಾಡಿ ವೈಕುಂಠ ಮಾರ್ಗ ತೋರಿಸಿದಿ. ಬರೀ ನಿನ್ನ ಪಾದ ಸ್ಪರ್ಶದಿಂದ ಕಲ್ಲಾದ ಅಹಲ್ಯೆಯನ್ನು ಉದ್ಧರಿಸಿದಿ - ಅಂಥ ಭಕ್ತರಿಗೆ -ಭಕ್ತನಾಗಿ ಭಕ್ತರನ್ನು ಪೊರೆಯುವ ದಯಾಮಯಿಯಾದ ಶ್ರೀನಿವಾಸನೇ ದಯಮಾಡು - ದಯಮಾಡಿ ಈ ಭವ-ಭಯ ನಿವಾರಣೆ ಮಾಡು ಎಂದು ಹಂಬಲಿಸಿ ಆರ್ತತೆಯಿಂದ ಕೇಳಿದ್ದಾರೆ ದಾಸರು ಈ ಕೀರ್ತನೆಯಲ್ಲಿ.

# त्रयोदशः पाठः
## ಹದಿನೈದನೇ ಪಾಠ

# ಸಂಸ್ಕೃತ ಕಲಿಯೋಣ...!!

ರಚನೆ:- ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ
ನಿರ್ವಹಣೆ:- ಮಹಾ ಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ

| | | | | | |
|---|---|---|---|---|---|
| युष्मत् | = ನಿಮ್ಮ, ನಿಮ್ಮದೆಸೆಯಿಂದ | किन्तु = | ಆದರೂ | अस्मत् = | ನಮ್ಮ, ನಮ್ಮದಸೆಯಿಂದ |
| तर्हि; चेत् | = ಹಾಗಾದರೇ | गृहम् = | ಮನೆ,ಮನೆಯನ್ನು | तूष्णीम् = | ಸುಮ್ಮನೆ |
| कुर्वन्तु | = ಮಾಡುವಿರಿ | कुरुत = | ಮಾಡಿರಿ | करवाम = | ಮಾಡುವೆವು |

### ಪ್ರಶ್ನೆ

1. तत्र किमर्थम् आसीः?
2. अहं तूष्णीम् आसम्।
3. तर्हि त्वं पाकं कुरु।
4. नोचेत् वयं करवाम।
5. चेत्किम्?
6. अस्मद्गृहे शाकानि न सन्ति।
7. ते कुत्र सन्ति वा खलु?
8. ते युष्मद्गृहे भोजनं कुर्वन्ति।
9. कुर्वन्ति चेत् कुर्वन्तु।
10. यूयं तूष्णीं स्त।

### ಉತ್ತರ

1. ಅಲ್ಲಿ ಏಕೆ ಇದ್ದೆ?
2. ನಾನು ಸುಮ್ಮನೆ ಇದ್ದೆ.
3. ಹಾಗಾದರೇ ನೀನು ಅಡುಗೆ ಮಾಡು.
4. ಇಲ್ಲದಿದ್ದರೆ ನಾವು ಮಾಡುವೆವು.
5. ಹಾಗಾದರೇ ಏನು?
6. ನಮ್ಮ ಮನೆಯಲ್ಲಿ ತರಕಾರಿಗಳು ಇಲ್ಲ.
7. ಅವರು ಎಲ್ಲದ್ದಾರೋ ಏನೋ?
8. ಅವರು ನಿಮ್ಮ ಮನೆಯಲ್ಲಿ ಊಟ ಮಾಡುತ್ತಿದ್ದಾರೆ.
9. ಮಾಡಿದರೇ ಮಾಡಲಿ.
10. ನೀವು ಸುಮ್ಮನೆ ಇರಿ.

### ಪ್ರಶ್ನೆ

1. ನಿಮ್ಮ ಮನೆಯಲ್ಲಿ ಯಾರಿದ್ದಾರೆ?
2. ನಮ್ಮ ಮನೆಯಲ್ಲಿ ಎಲ್ಲ ಹುಡುಗರು ಸ್ನಾನವ ಮಾಡುತ್ತಿದ್ದಾರೆ?
3. ಅವರು ಅಡುಗೆ ಮಾಡಲಿ.
4. ನಾನು ಅಡುಗೆ ಮಾಡಿದೆನು.
5. ಅಯ್ಯೋ ನೀವಿಲ್ಲ ಸುಮ್ಮನೆ ಇದ್ದೀರಾ?
6. ಸ್ವಲ್ಪ ಅಡುಗೆ ಮಾಡಿ.
7. ನಾನು ಮೊದಲು ಹಲವಾರು ಬಗೆಯಾಗಿ ಮಾಡಿದೆನು.
8. ಆದರೋ ಅವರು ನಮ್ಮ ಮನೆಯಲ್ಲಿ ಇಲ್ಲ.
9. ನೀವು ಇವಾಗ ಸ್ನಾನ ಮಾಡಬೇಡಿರಿ.
10. ಮೊದಲು ನಾವು ಸ್ನಾನ ಮಾಡುವೆವು.

### ಉತ್ತರ

1. युष्मद्गृहे के सन्ति?
2. अस्मद्गृहे सर्वे बालकाः स्नानं कुर्वन्ति।
3. ते पाकं कुर्वन्तु।
4. अहं पाकम् अकरवम्।
5. अहो! यूयं तत्र तूष्णीम् आस्त किम्?
6. किञ्चित् पाकं कुरुत।
7. अहम् आदौ अनेकधा अकरवम्।
8. किन्तु ते अस्मद्गृहे न सन्ति।
9. यूयम् इदानीं स्नानं न कुरुत।
10. आदौ वयं स्नानं करवाम।

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ|| ಎನ್. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ

(ಕಳೆದ ಸಂಚಿಕೆಯಿಂದ)

ಬ್ರಹ್ಮಪುರಾಣದಲ್ಲಿನ ಶ್ರೀವೇಂಕಟಾಚಲ ಮಹಾತ್ಮೆಯ ಭಾಗದಲ್ಲಿ ತೊಂಡಮಾನ್ ಚಕ್ರವರ್ತಿ, ವೃತ್ತಾಂತವನ್ನು ವರ್ಣಿಸುವ ಸಂದರ್ಭದಲ್ಲಿ ಚಕ್ರವರ್ತಿಗೆ ಶ್ರೀವೇಂಕಟಾಚಲಪತಿ ಪ್ರತ್ಯಕ್ಷ ರೂಪೇನ ಹಿತೋಪದೇಶ ಮೂಲಕ ವಿಷಯವನ್ನು ತಿಳಿ ಹೇಳಿದ್ದಾನೆ. ಆತನಿಗೆ ಇಷ್ಟದೈವವಾಗಿದ್ದ ದಿನಗಳಿಂದಲೂ ಚಕ್ರವರ್ತಿ ಶತ್ರುಜಯಾರ್ಥವಾಗಿ ದೇಶಾಂತರ ಹೊರಟು ಸಂದರ್ಶಿಸಿದ ಸ್ಥಳಗಳಿಂದಲೇ ಜಯವು ದೊರೆತಿದೆ. ಆದರೆ ಒಂದು ಬಾರಿ ಅಪಜಯವುಂಟಾಗಿ ಶತ್ರುಗಳು ಓಡಿಸಿಕೊಂಡು ಬರಲು, ಚಕ್ರವರ್ತಿ ಓಡುತ್ತಾ ಒಂದು ತಿರುಮಲೆಯ ಮಹಾದ್ವಾರದ ಗುಹಾಮಾರ್ಗದಲ್ಲಿ ಹೋಗಿ ಸ್ವಾಮಿ ಎದುರಾಗಿ ನಿಂತು ತನಗೆ ಒಂದೊದಗಿದ ಪರಾಭವವನ್ನು ಛಿನವಹಿಸಿಕೊಂಡಿದ್ದಾನೆ. ಶ್ರೀವೇಂಕಟೇಶ್ವರನು ಆತನ ಮಾತುಗಳನ್ನು ಕೇಳಿ, ಹಿತನುಡಿಗಳಿಂದ ಆತನ ದುಃಖವನ್ನು ಹೋಗಲಾಡಿಸಿ 'ಓಯ್! ಚಕ್ರವರ್ತಿ! ಜನ್ಮಾಂತರದ ಪಾಪ ಶೇಷದ ಕಾರಣದಿಂದಾಗೇ ಈ ಅವಮಾನವು ಘಟ್ಟಿಸಿದೆ. ಇನ್ನು ಮುಂಬರುವ ಭವಿಷ್ಯ ಕಾಲದಲ್ಲಿ ನಿನಗೆ ಅಭ್ಯುದಯವುಂಟಾಗುವುದು. ಈ ಶತ್ರು ವಿಜಯದಿಂದ ಹೊರಬರುವೆ ಎಂದು ಹೇಳಲು ಆತನು ಅದು ದುಃಸಾಧ್ಯವೆಂದು ಅರುಹುಲು ಆಗ ಶ್ರೀನಿವಾಸನು ನನ್ನ ಅಸಾಧಾರಣವಾದ ಶ್ರೀಶಂಖ ಚಕ್ರಗಳನ್ನು ಯುದ್ಧದಲ್ಲಿ ನಿನಗೆ ಸಹಾಯಕ್ಕಾಗಿ ಕೊಡುತ್ತೇನೆ ಅವುಗಳನ್ನು ಹಿಂಬಾಲಿಸಿ ನಡೆ ಎಂದು ಹೇಳಿದನು. ಆಗ ಚಕ್ರವರ್ತಿಯು ವಿಶ್ವಾಸ ಪಡೆದವನಾಗಿ ತಿರುಮಲದ ತಟಕ್ಕೆ ಬಂದು, ತನ್ನ ಹತಗೊಂಡ ಸೈನ್ಯವನ್ನು ಕಂಡು ಚಿಂತಾಕ್ರಾಂತನಾಗಲು, ಶ್ರೀ ವೇಂಕಟೇಶ ಸ್ವಾಮಿಯು ಅನಂತ ಗರುಡ, ವಿಶ್ವಕ್ಸೇನ ಮೊದಲಾದವರಿಗೆ ತಮ್ಮ ಅಸಾಮಾನ್ಯ ಪರಿವಾರ ವೃಂದ ದೊಂದಿಗೆ

"ಗರುತ್ಮನ್ನಿಹ ಸರ್ವೇ ವೈ ವಸಾಮ ಗಿರಿಮೂರ್ತನಿ
ತ್ವಂ ಗಿರೀರ್ದಕ್ಷಿಣಾಂ ಸಾನುಮಾಸಾದ್ಯ ವಸ ನಿತ್ಯಶಃ
ಶೇಷಾಗಚ್ಛ ವಸ ತ್ವಂ ಚ ತಾರಾರ್ಕಾದ್ಯ ಶೈಲರೂಪಧೃತ್"

(ಗರುಡಾತ್ಮನೇ ! ನನ್ನ ನಿವಾಸವು ಈ ಬೆಟ್ಟದ ಮೇಲಿರು ತ್ತದೆ. ನೀನು ಈ ಬೆಟ್ಟದ ತುತ್ತು ತುದಿಯೇಲಿ ವಾಸಿಸು. ಆದಿಶೇಷಾ! ನೀನು ಬಂದು ಗರುಡನ ಕೆಳಗೆ ಪರ್ವತ ರೂಪಧಾರಿಯಾಗಿ ನೆಲೆಸು)

ಎಂದು ವಾಮನ ಪುರಾಣದಲ್ಲಿನ ಚತುರ್ಥಾಧ್ಯಾಯದಲ್ಲಿ ಹೇಳಿದಂತೆ ಗರುಡ ವಿಶ್ವಕ್ಸೇನಾಧಿಷ್ಠರು ಶೇಷಪರ್ವತ ಶಿಖರಕ್ಕೆ ಪೂರ್ವಕ್ಕೆ ಒಂದು ಶಿಖರದಂತೆ ಅರ್ಚನಾರೂಪದಿಂದ ಆವಿರ್ಭವಿಸಿ ಚಕ್ರವರ್ತಿಗೆ ದರ್ಶನವಿತ್ತು.



"ಮಾ ಖೈಷೀಃ ಭದ್ರಂ ತೇ ಚಕ್ರಶಂಖಾ ದದಾಮಿ ತೇ
ತಾಭ್ಯಾಂ ಗಚ್ಛ ಪುರೀಂ ದಿವ್ಯಾಂ ತಾ ತೇ ಶತ್ರೂನ್ ಹವಿಷ್ಯತಃ
ಇತ್ಯುಕ್ತಾ ತೌ ದದೌ ತಸ್ಮೈ ತಾಭ್ಯಾಂ ಸಹ ಜಗಾಮ ಸೀ
ತೌ ಚ ಶತ್ರುನ್ನಿಹತ್ಯಾಽಶು ಕೃತ್ವಾ ರಾಜ್ಯಮಕಂಟಕಮ್॥"

("ವತ್ಸಾ! ಭಯಪಡಬೇಡ. ನಿನಗೆ ಎಲ್ಲಾ ಕುಶಲವೇ ಆಗುವುದು. ನಿನಗೆ ಶಂಖಚಕ್ರಗಳನ್ನು ಕೊಟ್ಟಿರುವೆನು. ಅವುಗಳೊಂದಿಗೆ ನಿನ್ನ ದಿವ್ಯ ಪಟ್ಟಣಕ್ಕೆ ತೆರಳು. ಅವುಗಳೇ ನಿನ್ನ ಶತ್ರುಗಳನ್ನು ಸಂಹರಿಸಬಲ್ಲವು." ಎಂದು ಹೇಳಿ ಆ ಆಯುಧಗಳನ್ನು ಚಕ್ರವರ್ತಿಗೆ ನೀಡಿದನು. ಆತನು ಅವುಗಳೊಂದಿಗೆ ಹಿಂದಿರುಗಿ ಹೋದನು. ಆ ಶಂಖಚಕ್ರಗಳು ಕೂಡಲೇ ವೈರಿಗಳನ್ನು ಹಿಮ್ಮೆಟ್ಟಿಸಿ ರಾಜ್ಯವನ್ನು ನಿಷ್ಕಂಟಕವನ್ನಾಗಿ ಮಾಡಿ....)

ಎಂದು ಬ್ರಹ್ಮಪುರಾಣದಲ್ಲಿರುವಂತೆ 'ಶ್ರೀಸುದರ್ಶನ ಪಾಂಚಜನ್ಯಗಳನ್ನು, ಪ್ರಸಾದಿಸಿದ ನಂತರ ಆ ದಿವ್ಯಾಯುಧಗಳೆರಡನ್ನು ಚಕ್ರವರ್ತಿ ದೈವಸನ್ನಿಧಿಯಲ್ಲಿ ಸಕಲ ಪುರುಷಾರ್ಥಗಳೊಡನೆ ಸಾಕ್ಷಾತ್ಕರಿಸಿ ಇನ್ನು ರಣಭೂಮಿಗೆ ನಡೆಯೋಣ ಎಂದು ಹೇಳಿದನು. ಚಕ್ರವರ್ತಿಯು ಅನಂತರ ವೇಂಕಟಾಚಲಪತಿ ಮಾತುಗಳನ್ನು ವಿಶ್ವಾಸಿಸಿ ಅವುಗಳನ್ನು ಹಿಡಿದು ಹೊರಡಲು, ಶೀಘ್ರದಲ್ಲೇ ಶತ್ರುಗಳನ್ನು ಜಯಿಸಿ, ತಿರುಗಿ ಶ್ರೀನಿವಾಸನ ಸನ್ನಿಧಿಯನ್ನು ಸೇರಿ ದರ್ಶನ ಪಡೆಯಲು ಅಖಂಡ ಭೂಮಂಡಲಾಧಿಪತಿಯಾದ ಶ್ರೀವೇಂಕಟಾಚಲಧೀಶ್ವರನ ಪಾದಕಮಲಗಳ ಮೇಲೆ ಶಿರವಿರಿಸಿ ಭಕ್ತಿಯಿಂದ ಪರಿಪೂರ್ಣ ಮನೋಗತನಾಗಿ, ಬಹಳ ಕಾಲದವರೆಗೆ ಸಕಲವಿಧ ಭೋಗಗಳನನುಭವಿಸಿ ನಂತರ ಶ್ರೀವೇಂಕಟೇಶನ ಕೃಪೆಗೆ ಪಾತ್ರನಾಗಿದ್ದಾನೆ ಎಂದು ಬ್ರಹ್ಮಪುರಾಣದಲ್ಲಿ ಈ ಕಥೆಯಿರುವುದರಿಂದ ಇಂದಿಗೂ ಶೇಷಗಿರಿ ಶಿಖರದಲ್ಲಿ ಚಕ್ರವರ್ತಿಗೆ ಪರೀಕ್ಷೆಯೊಂದಿಗೆ ತನ್ನ ಸಾಕ್ಷಾತ್ಕಾರವನ್ನು ಕೊಟ್ಟ ಸ್ವಾಮಿಯೇ ಈವರೆಗೆ ಪರಿಷದ್ವೇಂಕಟೇಶ್ವರನೆಂಬ ಹೆಸರಿನಲ್ಲಿ ಎಲ್ಲರಿಗೂ ದರ್ಶನವೀಯುತ್ತಿದ್ದಾನೆ. ಹೀಗೆ ಶೇಷಾದ್ರಿ ಶಿಖರದಲ್ಲಿ ಆವಿರ್ಭವಿಸಿದ ಪರಿಷದ್ವೇಂಕಟ ಸ್ವಾಮಿಗೆ, ಶ್ರೀಭಗವದ್ರಾಮಾನುಜರು ಪ್ರತಿದಿನದಲ್ಲೂ ಪಕ್ವವಾದ ಕೊಸಂಬರಿ, ಪಾನಕ, ಹಣ್ಣು, ಕೊಬ್ಬರಿ ಮುಂತಾದವುಗಳನ್ನು ನಿವೇದಿಸುವ ಪರಿಪಾಠವನ್ನು ನೇಮಿಸಿದ್ದಾರೆ.

ಈ ರೀತಿಯಾಗಿ ಶ್ರೀಮದ್ರಾಮಾನುಜಾಚಾರ್ಯರು ತಿರುಮಲೆಯಲ್ಲಿ ಅಲ್ಲಿಯವರೆಗೂ ಅನುಷ್ಠಾನದಲ್ಲಿರದ ಆಚರಣಾ ಧರ್ಮಗಳನ್ನು ಅನುಷ್ಠಾನ ಮಾಡಿ ಗತಿಸಿ ಹೋದ ಧರ್ಮಗಳನ್ನು ಪುನರುದ್ದೀಪನಗೊಳಿಸಲು, ದೇವತಾಂತರವು ಬಾರದೇ, ಶ್ರೀನಿವಾಸನ ಸೌಜನ್ಯ ಆಶ್ರಿತಪಾರತಂತ್ರ್ಯವನ್ನು, ಆಪನ್ಮಿತ್ರತ್ವ ಮುಂತಾದ ಕಲ್ಯಾಣ ಗುಣಗಳನ್ನು ಸ್ಥಳೀಕರಿಗೆ ಅರ್ಥವಾಗುವಂತೆ ಸ್ವಾಮಿಯ ಸಕಲ ಸಂಪದಗಳ ಯಾವುದೇ ತೊಂದರೆಗಳಿಲ್ಲದೇ ಉತ್ತರೋತ್ತರಾಭಿವೃದ್ಧಿಗಾಗಿ ಮಂಗಳ ಶಾಸನಗಳನ್ನು ಮಾಡಿ, ಅವುಗಳೂ ಮತ್ತೆ ಹಲವು ಅಸಮಾನ್ಯ ಕಾರಕವಾದ ವಿಧಿ ವಿಧಾನಗಳನ್ನು ಕೇವಲ ತಿರುಮಲಕ್ಕೆ ಮಾತ್ರವೇ ಸೀಮಿತವಾಗಿರುವಂತೆ ಸಂಕಲ್ಪಿಸಿದರು.

"ವೈಕುಂಠಲೋಕಾದ್ಗರುಡೇನ ವಿಷ್ಣೋಃ ಕ್ರೀಡಾಚಲೋ ವೇಂಕಟನಾಮಧೇಯಃ
ಅನೀಯ ಸ ಸ್ವರ್ಣಮುಖಿ - ಸಮೀಪೇ ಸಂಸ್ಥಾಪಿತೋ ವಿಷ್ಣು ನಿವಾಸಹೇತೋ"

(ಗರುಡಾತ್ಮನು ವೇಂಕಟ ನಾಮಧೇಯವಿರುವ ವಿಷ್ಣುವಿನ ಕ್ರೀಡಾಚಲದಲ್ಲಿ ವೈಕುಂಠ ದ್ವಾರದಿಂದ ಹಾರಿ ಬಂದು ಶ್ರೀವಿಷ್ಣು ನಿವಾಸಾರ್ಥವಾಗಿ ಸ್ವರ್ಣಮುಖಿ ಸಮೀಪದಲ್ಲಿ ಸ್ಥಾಪಿಸಿದನು.)

"ವೈಕುಂಠಾ ದಾಗತತ್ವಾಚ್ಚ ವೈಕುಂಠಾದ್ರಿರಿತಿ ಸ್ಮೃತಿ"

(ವೈಕುಂಠದಿಂದ ಬಂದಿರುವುದರಿಂದಲೇ ವೈಕುಂಠಾದ್ರಿ ಎಂದು ಕರೆಯಲ್ಪಡುತ್ತಿದೆ) ಎಂದು

"ಗತ್ವಾ ತು ಪರಮಂ ಧಾಮ ಕ್ರೀಡಾಚಲ ಮಿಹೋಽಽ ನೆಯ
ಹಿರಣ್ಮಯ ಮಹೋಶೃಂಗಂ ಪಂಚೋಪನಿಷ ದಾತ್ಮಕಂ"

(ಪರಮಪದಕ್ಕೆ ಹೋಗುವ ಸುವರ್ಣಮಯ ಶಿಖರಗಳನ್ನು ಹೊಂದಿರುವ ಪಂಚೋಪನಿಷದಾತ್ಮಯುಕ್ತ ಕ್ರೀಡಾಚಲವು ನಮ್ಮ ಹತ್ತಿರವೇ ಉಂಟು)

ಎಂದು ಶುದ್ಧವರಾಹಪುರಾಣ ಪರಮ ಪದವು ಈ ಕ್ರೀಡಾಚಲವೆಂದೇ ಪ್ರಸಿದ್ಧವು.

"ಅಯಂ ಕದಾಚಿದ್ದೇವಾನಾಂ ಶ್ರೀನಿವಾಸ ಇವಾಽಽಭಿಭೌ"

(ಈ ಬೆಟ್ಟ ಒಂದು ಕಾಲದಲ್ಲಿ ಸಾಕ್ಷಾತ್ ಶ್ರೀನಿವಾಸನಿಗೆಂದೇ ದೇವತೆಗಳು ಭಾವಿಸಿದ್ದದ್ದು)

ಎಂದು ಬ್ರಹ್ಮಾಂಡ ಪುರಾಣ ಶ್ರೀಯಃ ಪತಿಯ ದಿವ್ಯ ಮಂಗಳ ವಿಗ್ರಹ ಪ್ರತಿಪಾದಿಸಿದೆ.

"ಅನಂತೋಽಽ ಹಂ ಮಹಾದೇವ ಸ್ಥಾಸ್ಯಾಮಿ ಗಿರಿರೂ ಪಧೃತ್"

(ಮಹಾದೇವಾ! ಅನಂತನಾಗನು ಗಿರಿರೂಪ ಧರಿಸಿರುವವನು) ಎಂದು,

"ತ್ವತ್ಫಣಾಮಂಡಲಭುವಿ ಸ್ಥಾಸ್ಯಾಮಿ ರಮಯಾ ಸಹಾ"

(ನೀ ಫಣಾಮಂಡಲ ವಿಶಾಲ ಪ್ರದೇಶದಲ್ಲಿ ರಮಾದೇವಿಯೊಡನೆ ವಾಸವಾಗಿರುವೆ)

ಎಂದು ವರಾಹಪುರಾಣದಲ್ಲಿ ಆದಿಶೇಷನ ದಿವ್ಯ ದೇಹವೆಂದು ಪ್ರಖ್ಯಾತವಾಗಿದ್ದು ಕಲ್ಪಭೇದಗಳಿಂದಾಗಿ ಭಿನ್ನ ರೂಪಗಳನ್ನು ಪಡೆದುಕೊಂಡು ಅಪ್ರಾಕೃತವಾದ ಪ್ರವಿತ್ರ ಸ್ಥಳ ತಿರುಮಲೆ ಬೆಟ್ಟವನ್ನು

"ಶುಕಾದ್ಯಾ ಮುನಯಃ ಕೇಚಿತ್ ಭೃಗ್ವಾದ್ಯಾಶ್ಚ ತಪೋಧನಾಃ
ಪ್ರಹ್ಲಾದ ಪ್ರಮುಖಾಃ ಪುಣ್ಯಾ ಅಂಬರೀಷಾದಯಾ ನೃಪಾಃ
ವಿಷ್ಣುರೇವಾಪರಂ ದೇಹಂ ಮನ್ವಾನಾಸ್ತಂ ನಗೋತ್ತಮಮ್
ಪದ್ಭ್ಯಾಮಾಕ್ರಮಿತಂ ಭೀತಾಃ ಪರ್ಯಾಂತ್ಯೇಷ್ವೇವ ವರ್ತಿನಃ

(-ಮುಂದುವರೆಯುತ್ತದೆ.)



ಧಾರಾವಾಹಿ

# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

## ಹಿಂದಿನ ಸಂಚಿಕೆಯಿಂದ

ವಾಮನ ಪುರಾಣದ ಪ್ರಕಾರ ಬೇರೊಂದು ವಿವರಣೆ ದೊರೆಯುತ್ತವೆ.

ವಕಾರೋಽಮೃತಂ ಬೀಜಂತು ಕಟಮೈಶ್ವರ್ಯಮುಚ್ಯತೇ
ಅಮೃತೈಶ್ವರ್ಯ ಸಂಘತ್ವಾತ್ ವೆಂಕಟಾದ್ರಿರಿತಿಸ್ಮೃತಃ

ವಕಾರವೆಂದರೆ ಅಮೃತವಂತೆ ಕಟವೆಂದರೆ ಐಶ್ವರ್ಯವೆಂದೂ ಈ ಅಮೃತ ಐಶ್ವರ್ಯಗಳ ಸಂಘಟನೆಯೇ ವೇಂಕಟವೆಂಬುದಾಗಿಯೂ ವ್ಯಾಖ್ಯಾನ ಮಾಡುತ್ತದೆ.

ಇದನ್ನು ಗಮನಿಸಿದಾಗ ಈ ಪುರಾಣಗಳ ಅರ್ಥ ಪರಸ್ಪರ ವಿರೋಧ ಗುಣಗಳನ್ನು ಹೊಂದಿರುವುದು ಕಂಡು ಬರುತ್ತದೆ. ಒಂದು ಇಹಲೋಕ ವ್ಯಾಪಾರಗಳಿಂದ ಮುಕ್ತನಾಗಿ ಬಾಳುವ ಸ್ಥಿತಿಯನ್ನು ಅಪೇಕ್ಷಿಸಿದರೆ ಮತ್ತೊಂದು ಇಹಲೋಕದ ಭೋಗ ಭಾಗ್ಯಗಳನ್ನು ಇಚ್ಛಿಸುವ ಕಾಮ್ಯಾರ್ಥವನ್ನು ವಿವರಿಸುತ್ತದೆ. ಈ ಎರಡು ರೀತಿಯ ವಿವರಣೆಗಳ ಜಾಣತನವಾದರೂ ಏನು? ಕವಿಯ ಜಾಣ್ಮೆಯೆ? ವ್ಯಾಖ್ಯಾನಕಾರನ ಚಾತುರ್ಯವೆ? ಇಲ್ಲ ಕವಿಯರಿಯದ, ರವಿಯೂ ಅರಿಯದ ಒಂದು ಹೊಸ ಸೃಷ್ಟನೆಯ? ಸಂಕಟ ಬಂದಾಗ ವೆಂಕಟರಮಣನೆನ್ನುವ ಗಾದೆ ಗನುಸಾರವಾಗಿ ಈ ಎರಡನೆಯ ರೀತಿಯ ಅರ್ಥ ಅನ್ವಯ ಗೊಳ್ಳುತ್ತದೆಯಲ್ಲವೆ? ವೈರಾಗ್ಯವಂತನಿಗೆ ಮೊದಲನೆಯ ಅರ್ಥ ಭವಪಾಶದಲ್ಲಿ ತೊಳಲುತ್ತಿರುವವನಿಗೆ ಎರಡನೆಯ ಅರ್ಥ ಅನ್ವಯ. ದೇವರನ್ನು ಯಾವ ಇಷ್ಟಾರ್ಥವನ್ನಾದರೂ ಬೇಡಿ ಪಡೆಯಬಹುದು ಎನ್ನುವ ಭಾವ ಈ ಎರಡು ಸ್ತೋತ್ರಗಳಿಂದ ವ್ಯಕ್ತವಾಗುತ್ತದೆ. ಈ ಎರಡು ವಿಚಾರಕ್ಕಿಂತ ನಮ್ಮಾಳ್ವಾರ್ ಅವರ ಭಾವ ಸರಳವೂ ಸುಂದರವೂ ಆಗಿದೆ ಎಂದರೆ ತಪ್ಪಾಗಲಾರದು.

ಈ ವೇಂಗಡಕ್ಕೆ ಪ್ರಾಚೀನ ಕಾಲದಿಂದಲೂ ಬಳಸಲ್ಪಡುವ ಮತ್ತೊಂದು ಹೆಸರು 'ತಿರುಮಲೆ' ಎಂಬುದಾಗಿ, ಶ್ರೀ ವೈಷ್ಣವ ಸಂಪ್ರದಾಯದಲ್ಲಿ 'ನೂರೆಂಟು ತಿರುಪತಿ'ಗಳಿದ್ದರೂ ಈ ತಿರುಪತಿಯೇ ತಿರುಪತಿಯಾದಂತೆ,'ನೂರಾರು ಕೋಯಿಲ್' ಗಳಿ

ದ್ದರೂ (ಎಂದರೆ ಗುಡಿ) ಶ್ರೀರಂಗದ ಗುಡಿಯೇ 'ಕೋಯಿಲ್' ಆದಂತೆ, ಹತ್ತಾರು 'ತಿರುಮಲೆ' (ದೊಡ್ಡ ಬೆಟ್ಟ) ಗಳಿದ್ದರೂ ಈ ಬೆಟ್ಟವೇ 'ತಿರುಮಲೆ'ಯಾಯಿತು ಎಂದು ಶ್ರೀರಾಮಚಂದ್ರರಾಯರು 'ತಿರುಪತಿ ತಿಮ್ಮಪ್ಪನ ಎಂಟನೇ ಪುಟದಲ್ಲಿ ಬರೆದಿರುವಂತೆ ಇದೇ 'ತಿರುಮಲೆ' ಎನಿಸಲ್ಪಡುತ್ತದೆ.ಆದರೆ ಅವರು ತಿಳಿದುಕೊಂಡಿರುವಂತೆ 'ತಿರುಮಲೆ'ಎಂದರೆ 'ದೊಡ್ಡ ಬೆಟ್ಟ ' ಎಂದು ಅರ್ಥವಲ್ಲ!

ಈ 'ತಿರುಮಲೆ' ಎನ್ನುವ ಹೆಸರು ಪ್ರಾಚೀನ ಕಾಲದಿಂದಲೇ ಬಳಕೆಯಾಗಿದ್ದಿತು ಎನ್ನುವುದು ಮೊದಲಾಳ್ವಾರ್‌ಗಳಲ್ಲಿ ಮೂರನೆಯವರಾದ ಪೇಯಾಳ್ವಾರ್ ಅವರ 'ಮೂನ್ರಾಂ ತಿರುವಂದಾದಿ'ಯಿಂದ ಸ್ಪಷ್ಟಪಡುತ್ತದೆ. ಆದರೆ ಶ್ರೀರಾಮ ಚಂದ್ರ ರಾಯರು ಈ 'ತಿರುಮಲೆ' ಎಂಬ ಹೆಸರನ್ನು ಗೊಂದಲಮಯವನ್ನಾಗಿಸಿದ್ದಾರೆ ತಮ್ಮ ತಿರುಪತಿ ತಿಮ್ಮಪ್ಪ ಪುಸ್ತಕದಲ್ಲಿ !

ಅವರ ವಿವರಣೆ ಪುಟ ೮ ರಲ್ಲಿ ಇಂತಿದೆ.

"ಈ ಬೆಟ್ಟಕ್ಕೆ ಈಗ ತಿರುಮಲೆಯೆಂದು ಹೆಸರು ಹೆಚ್ಚಾಗಿ ಹೊಂದಿಕೊಂಡು ಬಂದಿದೆ. ಈ ತಮಿಳು ಮಾತಿಗೆ 'ದೊಡ್ಡ ಬೆಟ್ಟ' (ಶ್ರೀಗಿರಿ) ಎಂದಷ್ಟೇ ಅರ್ಥವೆಂದು ಈಗಾಗಲೇ ತಿಳಿಸಿ ಆಗಿದೆ. ಇದು ಬೆಟ್ಟಕ್ಕೆ ಮೊದಲಿದ್ದ ಹೆಸರಲ್ಲ. ಕ್ರಿಸ್ತಾಬ್ದ ನಾಲ್ಕು, ಐದು ಶತಮಾನಗಳ ಸುಮಾರಿಗೆ ಇದ್ದಿರಬಹುದಾದ ಪೇಯಾಳ್ವಾರ್ ತಮ್ಮ ಪಾಶುರವೊಂದರಲ್ಲಿ 'ತಿರುಮಲೆ' ಎಂಬ ಮಾತನ್ನು ಬಳಸಿದ್ದಾರೆ. ಆದರೆ ಈ ಪಾಶುರದ ಪ್ರಾಮಾಣಿಕತೆಯ ಬಗ್ಗೆ ವಿವಾದವಿದೆ.ಅವರು ಬಳಸಿರಬಹುದಾದ 'ಪೆರುಮಲೈ' (ದೊಡ್ಡಬೆಟ್ಟ) ಎಂಬುದರ ಬದಲು 'ತಿರುಮಲೈ' ಎಂದು ಯಾರೋ ಲಿಪಿಕಾರರು ಕೂಡಿಸಿದ್ದಾರೆಂದು ಪಂಡಿತರು ಸೂಚಿಸುತ್ತಾರೆ. ಇದೊಂದು ಸಂದರ್ಭವನ್ನು ಬಿಟ್ಟರೆ ಇದೇ ಆಳ್ವಾರರು ಉಳಿದೆಲ್ಲ ಕಡೆಗಳಲ್ಲೆಲ್ಲಾ ವೇಂಗಡವೆಂದೇ ವ್ಯವಹರಿಸಿದ್ದಾರೆ.ಈ ಬೆಟ್ಟವನ್ನು ವೇಂಗಡವೆಂದೇ ವ್ಯವಹರಿಸಿದ್ದಾರೆ. ಉಳಿದಂತೆ ಈ ಬೆಟ್ಟವನ್ನು 'ವೇಂಗಡ' ವೆಂದಲ್ಲದೆ ಬೇರೆ ಯಾವ ಹೆಸರಿನಿಂದಲೂ ಕರೆದಿಲ್ಲ. ನಮ್ಮಾಳ್ವಾರ್ ಏನೋ ತಿರುಮಲೈ ಎಂಬ ಹೆಸರನ್ನು ಬಳಸಿದ್ದಾರೆ (ತಿರುವಾಯ್ಮೊಳಿ ೨೧೦-೪) ಆದರೆ ಅವರು ಈ ಮಾತಿನಿಂದ ನಿರ್ದೇಶಿಸಿರುವ ಬೆಟ್ಟ ಮಾಲಿರುಂಶೋಲೈನ ನೆರೆಯಲ್ಲಿರುವ ಬೆಟ್ಟ.ಎಂದರೆ ಎಂಟು ಒಂಭತ್ತನೆಯ ಶತಮಾನದವರೆಗೂ ಬೆಟ್ಟ ವೇಂಗಡವೆಂದೇ ಪ್ರಸಿದ್ಧವಾಗಿದ್ದಿತು.

ದೊರೆತಿರುವ ಶಾಸನಗಳಲ್ಲಿ 'ತಿರುಮಲೆ'ಯೆನ್ನುವ ಹೆಸರು ಮೊಟ್ಟ ಮೊದಲು ಕಾಣಿಸಿಕೊಳ್ಳುವುದು ಕ್ರಿಸ್ತಾಬ್ಧ ೧೦೧೩ ರ ಸುಮಾರಿಗೆ, ತಮಿಳು ಶಾಸನದಲ್ಲಿ ತಿರುಮಲೆಯೆಂದು ಪ್ರಸ್ತಾಪ ಬಂದರೂ ದೇವರನ್ನು ಮಾತ್ರ ತಿರುವೇಂಗಡ ದೇವರು ಎಂದೇ ಕರೆಯಲಾಗಿದೆ.ಕ್ರಿ.ಶ.೧೨೮೯-೧೦ ರ ಶಾಸನವೊಂದರಲ್ಲಿ ತಿರುಮಲೆ ದೇವಸ್ಥಾನದ ಪ್ರಸ್ತಾಪವಿದ್ದರೂ ತಿರುವೇಂಗಡ ಮುಡೈಯಾನ್ ಎಂದೇ ಉಲ್ಲೇಖಿಸಲಾಗಿದೆ.

ಮುಂದೆಯೂ ತಿರುಮಲೆಯೆಂಬ ಹೆಸರು ವಿಜಯನಗರದ ಅರಸರ ಕಾಲದಲ್ಲೇ ಹೆಚ್ಚಾಗಿ ಕಾಣಿಸಿಕೊಳ್ಳುವುದು... ಇತ್ಯಾದಿ!

ಶ್ರೀರಾಮಚಂದ್ರರಾಯರ ವಾದ ಅಷ್ಟು ಸಮಂಜಸವಾಗಿ ಕಾಣುವುದಿಲ್ಲವೆಂದು ಮೇಲಿನ ಸರಣಿಯಿಂದಲೇ ತಿಳಿಯುತ್ತದೆ. ಮೊದಲಾಳ್ವಾರ್ ಕಾಲಕ್ಕೆ 'ತಿರುಮಲೆ' ಎಂದು ಉಪಯೋಗಿಸಲ್ಪಟ್ಟಿರುವ ಪದ ತಪ್ಪೆಂಬುದಾಗಿಯೂ ಅದಕ್ಕೆ ಬದಲಾಗಿ 'ಪೆರುಮಲೆ' ಎಂಬ ಪ್ರಯೋಗವು ಸಾಧು ಎಂದ ರಾಯರು ಇದಕ್ಕೆ ಪಂಡಿತರ ಸಮ್ಮತಿಯನ್ನೂ ಹೇಳಿ ಮುಂದೆ, ಶಾಸನಗಳಲ್ಲಿ ತಿರುಮಲೆ ಎಂಬ ಪದ ಪ್ರಯೋಗವನ್ನು ಕಾಣಿಸಿ, ಆ ಹೆಸರು ಬಳಕೆಗೆ ಬಂದಿದೆ ಎಂದಿದ್ದಾರೆ ಎಂದಾಗ ತಿರುಮಲೆ ಎನ್ನುವ ಪದ ಸರಿಯಾದದ್ದೇ, ತಪ್ಪಾಗಿ ಉಪಯೋಗಿಸಿದ ಪದವಲ್ಲ ಎನ್ನುವುದು ಸ್ಥಿರವಾಗಲಿಲ್ಲವೇ. ಆದ್ದರಿಂದ ಆಳ್ವಾರ್ ಪ್ರಯೋಗ ಮಾಡಿರುವ ತಿರುಮಲೈ ಸರಿಯಾದ ಪ್ರಯೋಗವೆಂದೇ ಸಿದ್ಧವಾಗುವುದಲ್ಲವೇ?

'ತಿರು'ಎಂದರೆ 'ಶ್ರೀ' ಎಂಬ ಅರ್ಥವಿದೆ. ಆದರೆ 'ದೊಡ್ಡದು' ಎನ್ನುವ ಅರ್ಥ ಬರುವುದಿಲ್ಲ. ಪೆರುಮಲೆಗೆ ಯಾರೋ ತಪ್ಪಾಗಿ ತಿರುಮಲೆ ಪ್ರಯೋಗಿಸಿದ್ದಾರೆಂದು ಶ್ರೀರಾಮಚಂದ್ರರಾಯರ ಹೇಳಿಕೆ. ಈ ಪದ್ಯವೇ ಪ್ರಕ್ಷಿಪ್ತವೆಂದೂ ರಾಯರು ಹೇಳುತ್ತಾರೆ ಎಂದರೆ ಈ ಆಳ್ವಾರ್ 99 ಪಾಶುರಗಳನ್ನು ರಚಿಸಿರುವರೆಂದೆ ರಾಯರ ಅಭಿಪ್ರಾಯ? 99 ಪಾಶುರಗಳು ಯಾವ ಲೆಕ್ಕ ಅದೂ ಬೇರೆ ಆಳ್ವಾರುಗಳು ೧೦೦ ಪಾಶುರಗಳನ್ನು ರಚಿಸಿರುವಾಗ? ಅವರ ವಾದದ ಪ್ರಕಾರ (೧) ತಿರುಮಲೆ ತಪ್ಪು ಪೆರುಮಲೆ ಇರಬೇಕು. (೨) ಪೇಯಾಳ್ವಾರ್ ವಿರಚಿತ ಮೂನ್ರಾಂ ತಿರುವಂದಾದಿಯಲ್ಲಿ ಒಂದು ಕಡೆ ಮಾತ್ರ ಈ ತಿರುಮಲೆ ಎನ್ನುವ ಪ್ರಯೋಗ ಬಂದಿದೆ.(೩) ಮತ್ತಾವ ಆಳ್ವಾರ್‌ಗಳೂ ಈ ಹೆಸರನ್ನು ಪ್ರಸ್ತಾಪಿಸಿಲ್ಲ. (೪) ಕ್ರಿ.ಶ. ೧೦೧೩ ರಲ್ಲೇ ಈ ಹೆಸರು ಮೊದಲಿಗೆ ಶಾಸನಗಳಲ್ಲಿ ಕಾಣಿಸಿಕೊಳ್ಳುವುದು. (೫) ಎಂಟು ಒಂಭತ್ತನೆಯ ಶತಮಾನದವರೆಗೂ ಬೆಟ್ಟ ವೇಂಗಡವೆಂದೇ ಪ್ರಸಿದ್ಧವಾಗಿದ್ದಿತು. ಅದಕ್ಕೆ ಹಿಂದೆ ಈ ತಿರುಮಲೆ ಎಂಬ ಹೆಸರೇ ಇರಲಿಲ್ಲ, ಆ ಬೆಟ್ಟಕ್ಕೆ! (-ಮುಂದುವರೆಯುತ್ತದೆ.)



ಧಾರಾವಾಹಿ

# ಶ್ರೀಮದ್ಭಗವದ್ಗೀತೆ

ತೆಲುಗು ಮೂಲ : ಕೆ. ವಿಶ್ವನಾಥ ಶರ್ಮ

ಅನುವಾದ : ಶ್ರೀಮತಿ ಬಿ. ಪದ್ಮಜ



**ಶ್ರೀ ಗುರುಭ್ಯೋ ನಮಃ**

ಪರಮಾತ್ಮನು ನಮಗೆ ದೇಹವು ಬೇರೆ ಎಂಬ ವಿಷಯವನ್ನು ಅನೇಕ ರೀತಿಗಳಿಂದ ವಿವರಿಸಿ ಹೇಳುತ್ತಿದ್ದಾನೆ. ಸತ್ತು, ಅಸತ್ತು' ಎಂಬ ಎರಡು ರೀತಿಯಲ್ಲಿ ಪದಾರ್ಥಗಳನ್ನು ವಿಭಾಗ ಮಾಡಿದ್ದಾನೆ. 'ಸತ್ತು' ಎಂದರೆ ಮೂರು ಕಾಲಗಳಲ್ಲೂ ಇರುವ ಪದಾರ್ಥ! ಅದು ಆತ್ಮವೇ ಹೊರತು ಬೇರೇನೂ ಅಲ್ಲ. ಶರೀರ ಮತ್ತು ಇತರ ವಸ್ತುಗಳೆಲ್ಲವೂ ಒಂದು ಕಾಲದಲ್ಲಿ ಇದ್ದು ಮತ್ತೊಂದು ಕಾಲದಲ್ಲಿ ಇಲ್ಲವಾಗುತ್ತವೆ. ಆದ್ದರಿಂದ ಅವು ಅಸತ್ತು ಎಂಬ ಸದ್ವಿವೇಕವನ್ನು ಆತ ನಮಗೆ ಉಪದೇಶಿಸಿದ್ದಾನೆ. ನಿತ್ಯವಾದ ಸ್ವರೂಪವೇ ಆತ್ಮ! ಎಂದೂ ಹಾಗೆಯೇ ದೇಹಾದಿಗಳೆಲ್ಲಾವೂ ಅನಿತ್ಯವೂ ಎಂಬ ವಿಷಯವನ್ನೂ ಹೇಳಿದ್ದಾನೆ. ನಂತರ ಈ ಶ್ಲೋಕದಲ್ಲಿ ಈ ರೀತಿ ಮತ್ತೊಮ್ಮೆ ವಿವರಿಸುತ್ತಿದ್ದಾನೆ.

"ವೇದಾವಿನಾಶನಂ ನಿತ್ಯಂ ಯ ಏನಮನುಜಮವ್ಯಯಮ್
ಕಥಂ ಸ ಪುರುಷಃ ಪಾರ್ಥ ಕಂಘಾತಯತಿ ಹಂತಿ ಕಮ್ ॥೨-೨೧॥

ಪಾರ್ಥಾ! ವಿಶಾಲವಾದ ಮನಸ್ಸಿನಿಂದ ಯೋಚಿಸುವಂತಹಾ ಅರ್ಜುನಾ! ಯಾರು ಈ ಆತ್ಮಸ್ವರೂಪವನ್ನು ಅವಿನಾಶಿಯಾಗಿ ಅಂದರೆ ವಿನಾಶವಿಲ್ಲವೆಂದು ತಿಳಿಯುತ್ತಾರೋ, ನಿತ್ಯವೆಂದು ಯಾರು ತಿಳಿದುಕೊಳ್ಳುತ್ತಾರೋ 'ವೇದ ಅವಿನಾಶಿನಂ ನಿತ್ಯಂ ಯ ಏನಂ ಅಜಮವ್ಯಯಂ ಅಜಮ್ ಅಂದರೆ ಹುಟ್ಟು ಇಲ್ಲದ್ದು ಎಂದು ಯಾರು ತಿಳಿಯುತ್ತಾರೋ "ಅವ್ಯಯಂ"ಯಾವ ರೀತಿಯ ವ್ಯಯವೂ ವಿನಾಶವೂ ಇಲ್ಲವೆಂದು ಯಾರು ತಿಳಿಯುತ್ತಾರೋ ಅಂತಹಾ ಪುರುಷನು "ಕಥಂ ಸಪುರುಷಃ ಪಾರ್ಥಕಂ ಘಾತಯತಿ ಹಂತಿ ಕಂ"ಆತ್ಮಸ್ವರೂಪವು ನಿತ್ಯವಾದುದು ಯಾವ ರೀತಿಯ ನಾಶವೂ ಇಲ್ಲದ್ದು, ಯಾವ ರೀತಿಯ ಕ್ರಿಯೆಗಳೂ ಇಲ್ಲದ್ದು ಎಂದು ತಿಳಿದುಕೊಂಡ ನಂತರ ಆಜ್ಞಾನಿ ಯಾರನ್ನು ಸಂಹರಿಸುತ್ತಾನೆ? ಯಾವ ರೀತಿಯ ಕ್ರಿಯೆಗಳನ್ನು ಪ್ರೇರೇಪಿಸಬಲ್ಲ? ಕಥಂ ಸ ಪುರುಷ ಪಾರ್ಥಕಮ್ ಘಾತಯತಿ ಹಂತಿಕಂ ಯಾರನ್ನು ಕೊಲ್ಲುವುದು ಅಥವಾ ಸಂಹರಿಸುವುದಕ್ಕೆ ಪ್ರೇರೇಪಿಸಬಲ್ಲ? ಅಂದರೆ ಆತ್ಮ ಸ್ವರೂಪಕ್ಕೆ ಯಾವ ರೀತಿಯ ಕ್ರಿಯೆಗಳೂ ಇಲ್ಲ ಎಂದು ತಿಳಿದುಕೊಂಡ ನಂತರ ನನ್ನಲ್ಲಿ ಆತ್ಮ ಸ್ವರೂಪವೆಂದರೆ ನಾನೇ ಅಲ್ಲವೇ! ನನ್ನಲ್ಲಿ ಯಾವ ಕ್ರಿಯೆಯೂ ಇಲ್ಲವೆಂದು ತಿಳಿದ ನಂತರ ಈ ಕೆಲಸವನ್ನು ನಾನು ಮಾಡುತ್ತಿದ್ದೇನೆ ಎಂದು ಯಾರು ಹೇಳಲಾರರು ಮತ್ತು ಯಾರೂ ಹೇಳುವುದೂ ಇಲ್ಲ. ಕಥಂ ಯಾವ ರೀತಿ ಮಾತನಾಡಬಲ್ಲರು? ಸ್ವರೂಪವನ್ನು ತಿಳಿದುಕೊಂಡ ನಂತರ ಮಾತನಾಡುವುದಿಲ್ಲ. ಮಾತುಗಳೆಲ್ಲಾ ಸ್ವರೂಪವನ್ನು ತಿಳಿದುಕೊಳ್ಳುವವರೆಗೂ ಅಥವಾ ಸ್ವರೂಪವನ್ನು ಸರಿಯಾಗಿ ತಿಳಿಯದಿರುವವರೆಗೂ ಮಾತ್ರವೇ! ನಿಜವಾದ ಮಾತು ಸ್ವರೂಪವನ್ನು ತಿಳಿದುಕೊಂಡ ನಂತರ ಬರುತ್ತದೆ ಆಗ ಈ ಮಾತು ಬರುವುದಿಲ್ಲ ಎಂದು ಮತ್ತೊಮ್ಮೆ ಹೇಳುತ್ತಿದ್ದಾನೆ.

"ವೇದ ಅವಿನಾಶಿನಂ ನಿತ್ಯ ಯಏನಮಜಮವ್ಯಯಂ" ಎಂಬ ಈ ಶ್ಲೋಕವನ್ನು ಕೇಳಿಸಿಕೊಂಡ ನಂತರ ಬಹಳ ದಿನಗಳಿಂದ ಉಳಿದು ಹೋದ ಅನುಮಾನ ಪುನಃ ಉಂಟಾಗುತ್ತದೆ. ಇದೇ ವಿಷಯವನ್ನು ಅವಿನಾಶಿತು ತದ್ವಿದ್ಧಿ -ಎಂದು "ನಜಾಯತೇ ಮ್ರಿಯತೇ ವಾ" ಎಂದು ಈ ರೀತಿ ಆತ್ಮ ಸ್ವರೂಪಕ್ಕೆ ವಿನಾಶವಿಲ್ಲ. ಆತ್ಮಸ್ವರೂಪವು ನಿತ್ಯವಾದುದು ಎಂದು ಒಮ್ಮೆ ಹೇಳಿದರೆ ಸಾಕಲ್ಲವೇ! ಪುನಃಪುನಃ ವಿವರಿಸುವುದರಲ್ಲಿನ ಅರ್ಥವೇನು? ಪರಮಾತ್ಮನ ಅಭಿಪ್ರಾಯವೇನು? ಪುನರುಕ್ತಿ ಎಂಬುವುದು ಬುದ್ಧಿವಂತರಿಗೆ ದೋಷದಂತೆಯೇ ಅಲ್ಲವೇ? ಒಂದೇ ವಿಷಯವನ್ನು ಪುನಃಪುನಃ ಹೇಳುವುದು ಬುದ್ಧಿಯಿಲ್ಲದವರಿಗೆ ಎಂದು ಹೇಳಬಹುದು. ಒಂದು

ಮಾತನ್ನು ಒಮ್ಮೆ ಹೇಳಿದರೆ ಸಾಕು ಎನ್ನುವಂತಿರಬೇಕಲ್ಲವೇ? ಪರಮಾತ್ಮ ಏಕೆ ಈ ವಿಷಯವನ್ನು ಹೇಳುತ್ತಿದ್ದಾನೆ? ಎಂದು ಭಾವಿಸಿದರೆ, ಬುದ್ಧಿ ವಂತರು ಒಂದೇ ಮಾತನ್ನು ಒಂದೇ ಬಾರಿ ಹೇಳು ತ್ತಾರೆ ಎಂದು ತಿಳಿದು ಕೊಳ್ಳುವುದು ತಪ್ಪು, ಬುದ್ಧಿವಂತರೇ ಹೇಳಬೇಕಾದ ವಿಷಯವನ್ನು ಪದೇ ಪದೇ ಹತ್ತಾರು ಬಾರಿ ಹೇಳುತ್ತಿರುತ್ತಾರೆ. ಬುದ್ಧಿಹೀನರೇ ಒಮ್ಮೆ ಹೇಳಿ ಸುಮ್ಮನಾಗುತ್ತಾರೆ ಎಂದು ಅರ್ಥಮಾಡಿಕೊಳ್ಳೋಣ.ಯಾವ ವಿಷಯವಾದರೂ, ಯಾವ ರೀತಿಯ ವಿಷಯವಾದರೂ ಹೇಳಿದ ಕೂಡಲೇ ಅರ್ಥ ವಾಗುತ್ತದೆ ಎಂಬ ನಿಯಮ ಈ ಪ್ರಪಂಚದಲ್ಲಿ ಯಾರಿಗೂ ಇಲ್ಲ. ಯಾವುದಾದರೊಂದು ಶಬ್ದವನ್ನು ನಮಗೆ ಹೇಳಿದ ಕೂಡಲೇ ನಮಗೆ ಆ ವಿಷಯದಲ್ಲಿ ಪರಿಪೂರ್ಣವಾದ ಜ್ಞಾನವುಂಟಾಗಿದೆ ಎಂದು ಯಾರೂ ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆ ವಿಷಯ ದಲ್ಲಿ ಪರಿಪೂರ್ಣವಾದ ಜ್ಞಾನವನ್ನು ಹೊಂದಿರುವುದೂ ಇಲ್ಲ ದಿರುವುದೂ ಸ್ವಲ್ಪ ಬುದ್ಧಿವಂತ ಜ್ಞಾನಿಯಾದರೆ, ಕೇಳಿಸಿಕೊಳ್ಳು ತ್ತಿರುವವರಿಗಿಂತಲೂ ಹೇಳುತ್ತಿರುವವನಿಗೇ ಹೆಚ್ಚು ತಿಳಿಯುತ್ತದೆ.

ಸಂಗೀತವನ್ನು ಹಾಡುವ ವ್ಯಕ್ತಿಯು ಒಂದೇ ಹಾಡು ಹೇಳಿ ಹೊರಟು ಹೋಗುವುದಿಲ್ಲ.ಅಲಾಪನೆ ಮಾಡಿದ ನಂತರ ಕೀರ್ತನೆ, ನಂತರ ಕೆಲವು ಗಮಕಗಳು, ಇರುತ್ತವೆ. ಇಷ್ಟೊಂದು ಏಕೆ ಎಂದರೆ ಆ ರಾಗವನ್ನು ಒಮ್ಮೆ ಕೇಳಿಸಿಕೊಂಡರೆ ಮನಸ್ಸಿ ನಲ್ಲಿ ಸ್ಥಿರವಾಗಿ ನಿಲ್ಲುವುದಿಲ್ಲ ಅದು ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲ ಬೇಕೆಂದರೆ ಆ ರಾಗವನ್ನು ಅಲಾಪನೆಯ ರೂಪದಲ್ಲಿ, ಕೀರ್ತನೆಯ ರೂಪದಲ್ಲಿ,ಗಮಕಗಳ ರೂಪದಲ್ಲಿ ಮತ್ತೊಮ್ಮೆ ವಿವಿಧ ರೂಪಗಳಲ್ಲಿ ಕೇಳಿಸಿಕೊಂಡಾಗ ಆ ರಾಗ ಮನಸ್ಸಿಗೆ ನಾಟುತ್ತದೆ. ಮಹಾವಿದ್ವಾಂಸರ ಮನಸ್ಸಿನಲ್ಲಿ ರಾಗವು ಸ್ಥಿರ ವಾಗಿ ನಿಲ್ಲಬೇಕೆಂದರೆ ಕೊನೇ ಪಕ್ಷ ಒಂದೂವರೆ ಗಂಟೆ ಬೇಕಾಗುತ್ತದೆ. ಅದನ್ನು 'ರಾಗಸ್ಥೈರ್ಯ'ಎನ್ನುತ್ತಾರೆ. ಆ ರಾಗ ಸ್ಥೈರ್ಯ ಬರಬೇಕೆಂದರೆ ಅವರಿಗೆ ಒಂದೂವರೆ ಗಂಟೆ ಬೇಕಾ ದರೆ ನಮ್ಮಂತಹಾ ಸಾಮಾನ್ಯ ಶ್ರೋತೃಗಳ ವಿಷಯ ಹೇಳ ಬೇಕಾಗಿಲ್ಲ.ಆದ್ದರಿಂದ ಅವರು ವಿವಿಧ ರೀತಿಯಲ್ಲಿ ಆ ರಾಗ ವನ್ನು ನಮ್ಮ ಮನಸ್ಸಿಗೆ ನಾಟುವಂತೆ ವಿವಿಧ ರೂಪಗಳಲ್ಲಿ ಹಾಡುತ್ತಾರೆ. ಆ ವಿಷಯವನ್ನು ನಾವು ಅರ್ಥ ಮಾಡಿಕೊಂಡರೆ ಆ ರಾಗ ನಮ್ಮ ಮನಸ್ಸಿನ ಮೇಲೆ ಮುದ್ರೆಯನ್ನೊತ್ತುತ್ತದೆ. ಸಂಗೀ ತವೆನ್ನುವುದು ಒಂದು ಚಿಕ್ಕ ವಿಷಯವಲ್ಲ. ಅದು 'ಗಾಂಧರ್ವ ಶಾಸ್ತ್ರ' ಅದು ದೇವ ವಿದ್ಯೆ ಅಂತಹ ವಿದ್ಯೆಗೆ ಈ ನಿಯಮವಿದೆ.

ಹಾಗೆಯೇ ಸಾಹಿತ್ಯವೂ ಕೂಡಾ ಸುಮ್ಮನೇ ಹೇಳದೇ ಒಂದು ಕ್ರಮಪದ್ಧತಿಯಲ್ಲಿ ಒಂದು ವಿಷಯವನ್ನು ಹೀಗೆ ನಡೆದಿತ್ತು, ಹಾಗೆ ನಡೆದಿತ್ತು ಎಂದು ಹೇಳಿ ನಮ್ಮ ಮನಸ್ಸಿನಲ್ಲಿ ಆ ವಿಷಯ ಬಲ ವಾಗಿ ನೆಲೆಗೊಳ್ಳುವಂತೆ ಮಾಡುತ್ತಾರೆ. ಹಾಗೆಯೇ ತಂದೆ ಮಗ ನನ್ನು ಚೆನ್ನಾಗಿ ಓದು ಎಂದು ಆಗಾಗ ಹೇಳದೇ. ವಿವಿಧ ರೀತಿಯ ಕಥೆಗಳು, ಮಹಾವಿದ್ವಾಂಸರು. ಮಹಾತ್ಮರ ಕಥೆಗಳು, ಪಂಡಿತರು ಯಾವ ರೀತಿ ಪ್ರಸಿದ್ಧಿಯನ್ನು ಪಡೆದರು ಎಂಬ ವಿಷಯವನ್ನು ಪುನಃ ಪುನಃ ಹೇಳುತ್ತಾರೆ ಯಾಕೆ? ಹೇಳಬೇಕೆಂದುಕೊಂಡಿರುವ ವಿಷಯವು ಆ ಮಗನ ಮನಸ್ಸಿನ ಮೇಲೆ ಪರಿಣಾಮ ಬೀರಲಿ ಎಂಬ ಉದ್ದೇಶದಿಂದ ಮಾತ್ರಾ ಹಾಗೆಯೇ ಹೊಸದಾಗಿ ಮದುವೆ ಯಾದ ಮಗಳನ್ನು ತಾಯಿ ಅತ್ತೆಯ ಮನೆಗೆ ಕಳುಹಿಸುವಾಗ ತನ್ನ ಅನುಭವನ್ನೆಲ್ಲಾ ಆ ಮಗಳಿಗೆ ಅರ್ಥವಾಗುವಂತೆ ಹೇಳಿ, ಅತ್ತೆಯ ಮನೆಯಲ್ಲಿ ಹುಷಾರಾಗಿ ಸುಖವಾಗಿ ಇರಬೇಕೆಂಬ ಉದ್ದೇಶದಿಂದ ಅನೇಕ ಎಚ್ಚರಿಕೆಗಳನ್ನು ನೀಡಿ ಹೇಳಿದ ವಿಷಯ ವನ್ನೇ ಮತ್ತೆ ಮತ್ತೆ ಹೇಳುತ್ತಿರುತ್ತಾಳೆ.

ಆದ್ದರಿಂದ ಈ ರೀತಿ ಇತರರ ಮನಸ್ಸಿನಲ್ಲಿ ಕ್ಲಿಷ್ಟವಾದ ವಿಷಯಗಳು ನೆಲೆಗೊಳ್ಳಬೇಕೆಂದರೆ ಅಂತಹಾ ವಿಷಯಗಳನ್ನು ನಾವು ಪುನಃ ಪುನಃ ಹೇಳುತ್ತಾ ಬರುತ್ತೇವೆ. ಆತ್ಮಸ್ವರೂಪ ವ್ಯಾಪ ಕವೆಂದೋ ಆತ್ಮಸ್ವರೂಪ ಅವಿನಾಶಿ ಎಂದೋ ನಿತ್ಯ ವೆಂದೋ ಹೇಳಿದರೆ ಆ ವಿಷಯವನ್ನು ಕೇಳಿಸಿಕೊಂಡು ಮರೆತು ಬಿಡು ತ್ತೇವೆ.ಕೇಳಿಸಿಕೊಂಡ ವಿಷಯ ಮನಸ್ಸಿನಲ್ಲಿ ಸ್ಥಿರವಾಗಿರಬೇಕು. ಆದ್ದರಿಂದಲೇ ಪರಮಾತ್ಮನು ಅದನ್ನು ಪ್ರತ್ಯೇಕವಾಗಿ ಈ ಆತ್ಮ ಅವಿನಾಶಿ, ಆತ್ಮವ್ಯಾಪಕ ಆತ್ಮನಿತ್ಯ ಎಂದು ಮತ್ತೆ ಮೆತ್ತೆ ಹೇಳು ತ್ತಿದ್ದಾನೆ. ಪುನಃಪುನಃ ಹೇಳುವುದರ ಮೂಲಕ. ಇದು ಬಹಳ ಪ್ರಮುಖವಾದುದು ಈ ವಿಷಯವನ್ನು ನಾವು ಬಹಳ ಯೋಚಿಸಿ ಎಚ್ಚರಿಕೆಯಿಂದ ನಿರ್ಧಾರ ತೆಗೆದುಕೊಂಡು ಮನಸ್ಸಿನಲ್ಲಿ ನಿಲ್ಲಿ ಸಿಕೊಳ್ಳಬೇಕು.ಅವಸರದಿಂದ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳಬಾರದು, ಹಾಗೆಯೇ ಕೂಡಲೇ ಹೌದು ಎಂದು ಒಪ್ಪಿ ಕೊಂಡು ಮುಂದುವರೆಯಲೂ ಬಾರದು!

ಪರಮಾತ್ಮ ಪುನಃ ಪುನಃ ಒಂದೇ ವಿಷಯವನ್ನು ಮತ್ತೆ ಮತ್ತೆ ವಿವರಿಸುತ್ತಾ ಆ ವಿಷಯ ನಮ್ಮ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲು ವಂತೆ ಮಾಡುತ್ತಿದ್ದಾನೆ. ಇದನ್ನೇ ಶಾಸ್ತ್ರದಲ್ಲಿ ಬಹಳ ಚೆನ್ನಾಗಿ, "ನಮಂತ್ರಾಣಾಂ ಜಾಮಿತಾಸ್ತಿ ಎಂದು ಹೇಳಿದ್ದಾರೆ.



(-ಮುಂದುವರೆಯುತ್ತದೆ.)



# ಧರ್ಮ ಜಾಗೃತ ಮಾಡಿದ ವಿಜಯೇಂದ್ರ ತೀರ್ಥರು

-ಪ್ರಾಣೇಶ ಆರ್.ಎಚ್

"ಭಕ್ತಾನಾಂಮಾನಸಾಂಭೋಜ ಭಾನವೇ ಕಾಮಧೇನವೇ
ನಮತಾಂ ಕಲ್ಪತರವೇ ಜಯೀಂದ್ರ ಗುರುವೇ ನಮಃ"

ನಮ್ಮ ಮಾಧ್ವ ಸಂಪ್ರದಾಯದಲ್ಲಿ "ವಿಷ್ಣು ತೀರ್ಥ"ಎಂದು ಪ್ರಸಿದ್ಧರಾದವರು ಮೂರು ಜನ.

ಒಬ್ಬರು ಶ್ರೀಮದಾಚಾರ್ಯರ ಪೂರ್ವ ಆಶ್ರಮದ ಅನುಜರು.ಮತ್ತೊಬ್ಬರು ವಿಜಯೀಂದ್ರ ತೀರ್ಥರು. ಮಗದೊಬ್ಬರು ಮಾದನೂರಿನ ಅಡವಿ ಸ್ವಾಮಿಗಳು.ಭಾರದ್ವಜ ಗೋತ್ರದ ವೃದ್ಧ ದಂಪತಿಗಳಿಗೆ.ವೃದ್ಧಾಪ್ಯದಲ್ಲಿ ಶ್ರೀವ್ಯಾಸ ರಾಜರ ಅನುಗ್ರಹ ಫಲವಾಗಿ ಹುಟ್ಟಿದ ಮಗುವೇ "ವಿಠ್ಠಲ". ಈ ವ್ಯಾಸರಾಜರ ಆಶ್ರಮದಲ್ಲಿ ಅವರ ಆಶ್ರಯದಲ್ಲಿ ಮಗು ಜ್ಞಾನಸಂಪನ್ನಾಗಿ ಬೆಳೆಯಿತು.ಮುಂದೆ ವಿಷ್ಣು ತೀರ್ಥರೆನಿಸಿ ಎಲ್ಲ 64 ವಿದ್ಯೆಯಲ್ಲಿ ಪ್ರಾವಿಣ್ಯತೆ ಪಡೆದರು.ಇವರ ಅದ್ಭುತ ಪಾಂಡಿತ್ಯ ತಪಸ್ಸು ನೋಡಿದ ಶ್ರೀಸುರೇಂದ್ರತೀರ್ಥರು ವ್ಯಾಸರಾಜರಿಂದ ಕೇಳಿ ಪಡೆದು ಉತ್ತರಾಧಿಕಾರಿಯನ್ನಾಗಿ ಮಾಡಿಕೊಂಡರು. ದಂಡ ಪಲ್ಲಟ ಮಾಡಿದ ನಂತರ ನಾಮಕರಣ ಮಾಡಿದ ಹೆಸರೇ ವಿಜಯೀಂದ್ರ ತೀರ್ಥರು.

"ವಿಜಯೀಂದ್ರ ರಾಮ" ಎಂಬ ಅಂಕಿತದೊಂದಿಗೆ 2 ಕೀರ್ತನೆಗಳು, 2. ಸುಳಾದಿಗಳು, 1.ಊಗಭೋಗ ರಚಿಸಿದ್ದಾರೆ. 104 ಗ್ರಂಥ ರಚನೆ ಮಾಡಿದ್ದಾರೆ. ಸ್ವತಃ ದೇವರನಾಮಗಳನ್ನು ರಚಿಸಿದ್ದಾರೆ. 6 ಸರ್ವ ಮೂಲ ಮತ್ತು 9 ಬಾರಿ ಶ್ರೀಮನ್ನಾಯಸುಧಾ ಪಾಠ ನಡೆಸಿದ್ದಾರೆ. ಆರಾಧಿಸಿ ಸಿದ್ಧಿಸಿಕೊಂಡ ನರಸಿಂಹಮೂರ್ತಿ ಇಂದಿಗೂ ರಾಯರ ಮಠದಲ್ಲಿ ಪೂಜೆ ನಡೆಯುತ್ತಿದೆ.

ತಂಜಾವೂರು ನಾಯಕರ ಆಳ್ವಿಕೆಯಲ್ಲಿ ಕುಂಭಕೋಣಂನಲ್ಲಿ ಮಠಾಧೀಶರ ಸ್ಥಾನವನ್ನು ಹೊಂದಿದ್ದರು. ಅಂದಿನ ರಾಜರಾಗಿದ್ದ ಕೃಷ್ಣದೇವರಾಯ ಚೆನ್ನಪ್ಪನಾಯಕ, ವಿಶ್ವನಾಯಕ ಮುಂತಾದವರಿಂದ ಸನ್ಮಾನಿತರಾದವರು.

ಸುಧೀಂದ್ರ ತೀರ್ಥರಿಗೆ ಪೀಠ ನೀಡಿ ಗುರುಸಾರ್ವಭೌಮ ವಿಜಯೀಂದ್ರತೀರ್ಥರು ಇವರು ಕುಂಭಕೋಣದಲ್ಲಿ ಜ್ಯೇಷ್ಠ ತ್ರಯೋದಶಿಯಂದು ವೃಂದಾವನವನ್ನು ಪ್ರವೇಶಿಸಿದರು.

# ಕ್ವಿಜ್

# ರಸಪ್ರಶ್ನೆ

ಅ)ಶ್ರೀ ರಾಮಾನುಜಾಚಾರ್ಯರು ಹುಟ್ಟಿದ ಸ್ಥಳ ಯಾವುದು?
1. ಶ್ರೀಪೆರಂಬದೂರ್ 2. ಶ್ರೀರಂಗಂ
3. ಶ್ರೀವಲ್ಲಿಪುತ್ತೂರ್ 4.ಶ್ರೀಕಾಳಹಸ್ತಿ

ಆ) ಶ್ರೀಶಂಕರಾಚಾರ್ಯರು ಹುಟ್ಟಿದ ಸ್ಥಳ ಯಾವುದು?
1.ಕಾಲಡಿ 2.ಕರ್ನಾಟಕ
3.ಮಹಾರಾಷ್ಟ್ರ 4.ಆಂಧ್ರಪ್ರದೇಶ

ಇ) ಶ್ರೀಮಧ್ವಾಚಾರ್ಯರು ಹುಟ್ಟಿದ ಸ್ಥಳ ಯಾವುದು?
1. ಮಂಗಳೂರು 2. ಪಾಜಕ
3.ಚಿಕ್ಕಮಂಗಳೂರು 4.ಬದರಿ

ಈ) ಶ್ರೀರಾಘವೇಂದ್ರಸ್ವಾಮಿಗಳು ಹುಟ್ಟಿದ ಸ್ಥಳ ಯಾವುದು?
1.ಕುಂಭಕೋಣಂ 2. ಭುವನಗಿರಿ
3. ಮಂತ್ರಾಲಯ 4. ರಾಯಚೂರು

ಉ) ಶ್ರೀಪುರಂದರದಾಸರು ಹುಟ್ಟಿದ ಸ್ಥಳ ಯಾವುದು?
1.ಮಹಾರಾಷ್ಟ್ರ 2. ಅರಾಗಗ್ರಾಮ
3.ಮೈಸೂರು 4. ಉಡುಪಿ

ಊ) ಶ್ರೀಕನಕದಾಸರು ಹುಟ್ಟಿದ ಸ್ಥಳ ಯಾವುದು?
1. ಉಡುಪಿ 2. ತಲಕಾಡು
3. ಬಾಡಾಗ್ರಾಮ 4. ತೀರ್ಥಹಳ್ಳಿ

ಋ) ಅನ್ನಮಯ್ಯ ಹುಟ್ಟಿದ ಸ್ಥಳ ಯಾವುದು?
1. ನಗರಿ 2. ತಿರುಪತಿ
3.ಚಿತ್ತೂರು 4. ತಾಳ್ಳಪಾಕ


ಉತ್ತರ:
ಅ) 1 ಆ) 1 ಇ) 2 ಈ) 2 ಉ) 2 ಊ) 3 ಋ) 4

ಸೂರ್ಯನಾರಾಯಣ, ಸೂರ್ಯಭಗವಾನ್ ಸೂರ್ಯದೇವ, ಆದಿತ್ಯ ಹೀಗೆ ಅನೇಕ ಹೆಸರುಗಳಿಂದ ಕರೆಯಲ್ಪಡುವ ಸೂರ್ಯದೇವ ನವ ಗ್ರಹಗಳಿಗೆಲ್ಲಾ ಅಧಿಪತಿ. ಆತ ನಮಗೆ ಪ್ರತ್ಯಕ್ಷವಾಗಿ ಕಂಡುಬರುವ ದೇವರು. ಆ ಸೂರ್ಯನಿಂದಲೇ ಸಕಲ ಜೀವರಾಶಿಗಳು ತಮ್ಮ ಜೀವನವನ್ನು ಸಾಗಿಸುತ್ತಿವೆ. ಆತನ ಕಿರಣಗಳಿಂದ ಹೊರಹೊಮ್ಮುವ ಶಕ್ತಿಯಿಂದಲೇ ನಮಗೆ ಎಲ್ಲ ರೀತಿಯ ಆರೋಗ್ಯಗಳು ಲಭಿಸುತ್ತವೆ. ಅದಕ್ಕೇ ಆರೋಗ್ಯ ಪಡೆಯಬೇಕೆಂದರೆ ಸೂರ್ಯನಾರಾಯಣನ್ನೂ ಪೂಜಿಸಬೇಕೆಂದೂ ಹಾಗೇ ಸೂರ್ಯನಮಸ್ಕಾರ ಮಾಡಬೇಕೆಂದು ಹೇಳುತ್ತಾರೆ.

ಸೂರ್ಯ ಕಶ್ಯಪ ಮತ್ತು ಅದಿತಿ ದೇವಿಯರ ಪುತ್ರ, ಆದಿತಿಯಲ್ಲಿ ಜನ್ಮಿಸಿದ್ದರಿಂದ ಆತ ಆದಿತ್ಯನೆನಿಸಿಕೊಂಡ ಅದಿತಿಗೆ ಹನ್ನೆರಡು ಜನ ಕುಮಾರರು ಜನ್ಮಿಸಿದರು. ಅವರನ್ನು ದ್ವಾದಶ ಆದಿತ್ಯರೆಂದು ಕರೆಯುತ್ತಾರೆ. ಅವರಲ್ಲಿ ಮೊದಲನೆಯವನು ವಿವಸನ ಆ ವಿವಸನನೇ ನಮಗೆ ಪ್ರತೀದಿನವೂ ಗೋಚರಿಸುವ ಸೂರ್ಯನಾರಾಯಣ. ಸೂರ್ಯನ ಹೆಂಡತಿ ಸಂಜ್ಞಾದೇವಿ. ಈಕೆ ದೇವತೆಗಳ ವಾಸ್ತು ಶಿಲ್ಪಿಯಾದ ವಿಶ್ವಕರ್ಮನ ಮಗಳು. ಸೂರ್ಯ ಹಾಗೂ ಸಂಜ್ಞಾದೇವಿಗೆ ವೈವಸ್ವತ,ಯಮ ಮತ್ತು ಯಮಿ ಎಂಬ ಮೂವರು ಮಕ್ಕಳು ಜನ್ಮಿಸಿದರು. ಒಮ್ಮೆ ಸಂಜ್ಞಾದೇವಿಗೆ ಸೂರ್ಯದೇವನ ಬಿಸಿಲ ಬೇಗೆ ತಡೆಯಲಾರದೆ ತನ್ನ ನೆರಳನ್ನು ಸೃಷ್ಟಿಸಿದಳು ಆಕೆಯೇ ಛಾಯಾದೇವಿ, ಆಕೆಯನ್ನು ಸೂರ್ಯನ ಬಳಿ ಬಿಟ್ಟು ತನ್ನ ತಂದೆಯ ಮನೆಗೆ ಹೊರಟು ಹೋದಳು. ಸೂರ್ಯನಿಗೆ ಅವರಿಬ್ಬರಲ್ಲಿ ಯಾವುದೇ ವ್ಯತ್ಯಾಸ ಕಂಡು ಬರಲಿಲ್ಲ ಸೂರ್ಯನಿಗೆ ಹಾಗೂ ಛಾಯಾದೇವಿಗೆ ಶನಿ, ಸಾವರಣಿ ಮತ್ತು ತಪತಿ ಎಂಬ ಮೂವರು ಮಕ್ಕಳು ಜನಿಸಿದರು.

ನಮಗೆ ಮಹಾಭಾರತದಲ್ಲಿ ಕಂಡುಬರುವ ಕರ್ಣನೂ ಸೂರ್ಯದೇವನ ಅಂಶದಿಂದ ಜನಿಸಿದವನು. ಆತನಿಗೆ ಕವಚ ಕುಂಡಲಗಳನ್ನು ಸೂರ್ಯನು ವರವನ್ನಾಗಿ ನೀಡಿದ್ದ. ಆದ್ದರಿಂದಲೇ ಅವು ಆತನ ಚರ್ಮದೊಂದಿಗೇ ಬೆಳೆದಿದ್ದು. ಮಹಾಭಾರತ ಯುದ್ಧದ ಸಂದರ್ಭದಲ್ಲಿ ಅರ್ಜುನನನ್ನು ಕಾಪಾಡುವ ಉದ್ದೇಶದಿಂದ ಇಂದ್ರನು ಕರ್ಣನ ಬಳಿ ಕವಚ ಕುಂಡಲಗಳನ್ನು ದಾನವನ್ನಾಗಿ ಪಡೆದಿದ್ದ. ಆದ್ದರಿಂದಲೇ ಕರ್ಣನಿಗೆ ಶಕ್ತಿ ಕಡಿಮೆಯಾಗಿತ್ತು. ಸೂರ್ಯನು ಕರ್ಣನಂತೆಯೇ ದಾನಶೀಲನೂ ಹೌದು ಪಾಂಡವರ ವನವಾಸದ ಕಾಲದಲ್ಲಿ ಅವರ ಬಳಿ ಜಿಂಕೆಯ ಚರ್ಮವೊಂದನ್ನು ಬಿಟ್ಟು ಏನೂ ಇಲ್ಲದಿರುವಾಗ ತಮ್ಮ ಗುರುಗಳ ಆದೇಶದಂತೆ ಧರ್ಮರಾಜ ಸೂರ್ಯನನ್ನು ಶ್ರದ್ಧಾ ಭಕ್ತಿಯಿಂದ ಪ್ರಾರ್ಥಿಸಿದ. ಆಗ ಸೂರ್ಯನು ಪ್ರತ್ಯಕ್ಷನಾಗಿ ಆತನಿಗೆ ಅಕ್ಷಯ ಪಾತ್ರೆಯನ್ನು ನೀಡಿ ಆ ಪಾತ್ರೆಯನ್ನು ಏನು ಬೇಡಿಕೊಂಡರು ಒದಗುವುದೆಂದು ವರನನ್ನು ನೀಡಿದ್ದ.

ಹಾಗೆಯೇ ಹನುಮಂತನು ಸೂರ್ಯನನ್ನು ತನಗೆ ವೇದಗಳನ್ನು ಕಲಿಸಬೇಕೆಂದು ಕೇಳಿಕೊಂಡಾಗ ಸೂರ್ಯನು ತಾನು ಸದಾ ಚಲಿಸುತ್ತಿರುತ್ತೇನೆಂದು ಹೇಳಿದ, ಆಗ ಹನುಮಂತನು ತಾನೂ ಸೂರ್ಯನ ಹಿಂದೆಯೇ ಸುತ್ತುತ್ತಾ ವೇದಾಧ್ಯಯನವನ್ನು ಮಾಡಿದ.






ಮಕ್ಕಳೇ ನಿಮಗೆ ಇದು ಗೊತ್ತೇ ಸೂರ್ಯನ ರಥಕ್ಕೆ ಏಳು ಅಶ್ವಗಳನ್ನು ಕಟ್ಟಿರುತ್ತಾರೆ. ಅವೆಲ್ಲಾ ಏಳು ಕಿರಣಗಳಿಗೆ ಪ್ರತೀತಿ. ಆ ರಥದ ಸಾರಥಿ ಗರುಡನ ಅಣ್ಣನಾದ ಅನೂರ ಅಥವಾ ಅರುಣ ಆ ರಥದ ಚಕ್ರಗಳಲ್ಲಿ 12 ಮರದ ಕಡಿಗಳು ಇರುತ್ತವೆ. ಅವು 12 ತಿಂಗಳುಗಳಿಗೆ ಪ್ರತೀತಿಯಾಗಿವೆ. ಎಲ್ಲಾ ದೇವಗುಣಗಳೂ ಸೂರ್ಯನ ಹಿಂದೆಯೇ ಇರುತ್ತವೆ. ಒಂದೊಂದು ತಿಂಗಳಿಗೆ ಒಂದೊಂದು ದೇವಗಣಗಳು ಸೂರ್ಯನ ಹಿಂದೆ ಇರುತ್ತವಾದ್ದರಿಂದ ಪ್ರತಿ ತಿಂಗಳಿಗೂ ತಮ್ಮದೇ ಆದ ಪ್ರತ್ಯೇಕತೆ ಇರುತ್ತದೆ. ಆದ್ದರಿಂದ ನಮಗೆ ಋತುಗಳು ಬದಲಾವಣೆ ಸಂಭವಿಸುತ್ತದೆ. ಆದ್ದರಿಂದ ಮಕ್ಕಳೇ ಪ್ರತ್ಯಕ್ಷ ದೈವವಾದ ಸೂರ್ಯನಾರಾಯಣನನ್ನು ಮಾನಸಿಕ ಹಾಗೂ ದೈಹಿಕ ಆರೋಗ್ಯಕ್ಕಾಗಿ ಪ್ರಾರ್ಥಿಸಿ ಆರೋಗ್ಯವಂತರಾಗೋಣ ಮತ್ತು ಧನ್ಯರಾಗೋಣ.

**ಚಿತ್ರಕಥೆ**

# ನಮ್ಮಾಳ್ವಾರ್


ಕಥೆ : ತೆಲುಗು ಮೂಲ : ಶ್ರೀನಿವಾಸ ದೀಕ್ಷಿತರು
ಅನುವಾದ : ಆರ್.ಕೆ.
ಚಿತ್ರಗಳು : ತುಲಸೀ ಪ್ರಸಾದ್






16
ತನ್ನ ಮೇಲೆ ಬರೆದ ಎಲ್ಲಾ ಕೀರ್ತನೆಗಳನ್ನು ಕೇಳಿ ಶ್ರೀರಂಗನಾಥನು ಮೈ ಮರೆತು ಹೋದನು. ಸ್ವಾಮಿಯೇ ಸ್ವಯಂಭುವಾಗಿ ಬಂದು ಕೇಳಿ....
17
ಆಳ್ವಾರ್! ನೀನು ನನ್ನನ್ನು ಕೀರ್ತಿಸದಿದ್ದರೆ ನಾನು ನಿದ್ರಿಸಲಾಗದು, ನೀನು ನನ್ನ ಆಳ್ವಾರ್.... ನಮ್ಮಾಳ್ವಾರ್!
18
ಇದು ನನ್ನ ಅದೃಷ್ಟ ಶ್ರೀರಂಗನಾಥಾ!
19
ನಮ್ಮಾಳ್ವಾರ್‌ಗೆ ಅಂತಿಮ ಕಾಲ ಸಮೀ ಪಿಸುತ್ತಿರಲು, ಆಗ ಶ್ರೀರಂಗ ನಾಥನು ಪ್ರತ್ಯಕ್ಷವಾಗಿ....
20
ಆಳ್ವಾರ್! ನಿನಗೇನು ವರಬೇಕು ಕೇಳು!
21
ನನಗೇನು ಬೇಡ. ಎಲ್ಲರಮೇಲೂ ನಿನ್ನ ಅನುಗ್ರಹವಿರಲಿ
22
ಅದು ಹೇಗೋ ಹೇಳು
23
ಸ್ವಾಮಿ! ನಿನ್ನ ಪಾದಗಳನ್ನು ನನ್ನ ತಲೆಯ ಮೇಲಿರಿಸಿ ಆ ಶಠಗೋಪದಿಂದ ಭಕ್ತರಿಗೆ ನನ್ನ ಪುಣ್ಯವನ್ನು ನೀಡಬೇಕು... ಇದೇ ನನ್ನ ಕೋರಿಕೆ
24
ತಥಾಸ್ತು... ಶಠಗೋಪ ಮುನಿಯಾಗಿ ಕೀರ್ತಿಸುತ್ತಾರೆ ಆಳ್ವಾರ್!
25
ಸಾರ್ಥವಿಲ್ಲದ ನಿನ್ನ ಬೇಡಿಕೆ ಲೋಕಕಲ್ಯಾಣಕ್ಕೆ ಸ್ವಸ್ತಿ....
26
ಶಠಗೋಪಮುನಿ, ಪರಾಂಕುಶರು, ವಕುಳಾಭರಣ, ತಿರುಕ್ಕುರುಗೂರ್ ನಂಬಿ, ಎಂದು ಕರೆಯಲ್ಪಟ್ಟ ನಮ್ಮಾಳ್ವಾರ್ ಪನ್ನಿದ್ಧರ್ ಆಳ್ವಾರರಲ್ಲಿ ಸೇರಿಹೋದರು.
27
ಲೋಕಾಃ ಸಮಸ್ತಾಃ ಸುಖಿನೋ ಭವತ್ತು!

## ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......


## ಪಕ್ಕದಲ್ಲಿರುವ ಗೊಂಬೆಯನ್ನು ಬಾಕ್ಸ್‌ನಲ್ಲಿ ಬರಿಯೋಣ...





ಈ ಚಿತ್ರದಲ್ಲಿ ಒಟು 7 ವ್ಯತ್ಯಾಸಗಳಿವೆ.

ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.



## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

| | | | | | | | | |
|---|---|---|---|---|---|---|---|---|
| ಟ್ಟ | ಲೆ | ಒ | ರಿ | ತು | ಟ್ಟ | ಲೆ | ದ್ದಿ | ತು |
| ಮೇ | ಉ | ಅ | ಲೆ | ಕೆ | ಯಿ | ಬು | ಬಂ | ಮೇ |

ಉತ್ತರ: [illegible]

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.




05-05-2022 ರಂದು ತಿರುಪತಿಯಲ್ಲಿ ಶ್ರೀ ವೆಂಕಟೇಶ್ವರ ಇನ್‌ಸ್ಟಿಟ್ಯೂಟ್ ಆಫ್ ಕ್ಯಾನ್ಸರ್ ಆಸ್ಪತ್ರೆಯ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಗೌ॥ ಶ್ರೀ ವೈ.ಎಸ್. ಜಗನ್‌ಮೋಹನ್ ರೆಡ್ಡಿ ಯವರು ಮತ್ತು ಇತರ ಉನ್ನತಾದಿಕಾರಿಗಳು ಪಾಲ್ಗೊಂಡರು.



05-05-2022 ರಂದು ಶ್ರೀ ಪದ್ಮಾವತಿ ಚಿಕ್ಕ ಮಕ್ಕಳ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆಯ ಪ್ರಾರಂಭೋತ್ಸವದ ಸೂಚನಾಫಲಕದ ಆವಿಷ್ಕಾರ ಮತ್ತು ಭೂಮಿ ಪೂಜೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಗೌ॥ ವೈ.ಎಸ್.ಜಗನ್‌ಮೋಹನ್‌ರೆಡ್ಡಿ ಯವರು ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು





05-05-2022 ರಂದು ತಿರುಪತಿ ಶ್ರೀವೆಂಕಟೇಶ್ವರ ಭಕ್ತಿ ಚಾನಲ್‌ನಲ್ಲಿ ಎಫ್.ಎಂ.ಆನ್‌ಲೈನ್ ರೇಡಿಯೋ ಲೋಗೋ ಮತ್ತು ಶ್ರೀನಿವಾಸ ಸೇತು ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಗೌ॥ ಶ್ರೀ.ವೈ.ಎಸ್.ಜಗನ್‌ಮೋಹನ್ ರೆಡ್ಡಿಯವರು, ಮಂತ್ರಿಗಳು ಮತ್ತು ಇತರ ಉನ್ನತಾಧಿಕಾರಿಗಳು .



05-05-2022 ರಂದು ಶ್ರೀನಿವಾಸಮಂಗಾಪುರಂ. ಶ್ರೀವಾರಿಮೆಟ್ಟು ಮಾರ್ಗ ಪುನಃ ಪ್ರಾರಂಭೋತ್ಸವ ಸಂದರ್ಭದಲ್ಲಿ ಪಾಲ್ಗೊಂಡ ತಿರುಮಲೆ ತಿರುಪತಿ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ಯವರು ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.



ಆಂಧ್ರಪ್ರದೇಶದ ದತ್ತಿಇಲಾಖೆಯ ಪ್ರಧಾನ ಕಾರ್ಯದರ್ಶಿಯಾದ ಶ್ರೀ ಅನಿಲ್‌ಕುಮಾರ್ ಸಿಂಘಾಲ್. ಐ.ಎ.ಎಸ್. ರವರು ತಿರುಮಲೆ ತಿರುಪತಿ ದೇವಸ್ಥಾನದ ಆಡಳಿತ ಮಂಡಳಿಯ ಎಕ್ಸ್‌ಅಫಿಷಿಯಾ ಸದಸ್ಯರಾಗಿ ಪದವಿ ಬಾಧ್ಯತೆಗಳನ್ನು 29-04-2022 ರಂದು ಸ್ವೀಕರಿಸಿದರು.



08-05-2022 ರಂದು ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳಾಗಿ(ಎಫ್.ಎ.ಸಿ) ಪದವಿ ಬಾಧ್ಯತೆಗಳನ್ನು ಸ್ವೀಕರಿಸುತ್ತಿರುವ ಶ್ರೀ ಎ.ವಿ. ಧರ್ಮಾರೆಡ್ಡಿ ಯವರು ಐ.ಡಿ.ಇ.ಎಸ್.

SAPTHAGIRI (KANNADA) ILLUSTRATED MONTHLY Published by
Tirumala Tirupati Devasthanams Printing on 25-05-2022 and Posting at Tirupati
RMS.Regd. with the Registrar of Newspapers for India under RNI. No. APKAN/2021/80589.
Postal Regd.No.TRP/156/2021-2023 "Licenced to Post Without Prepayment
No. PMGK/RNP/WPP-04(6)/2021-2023" Posting on 20th of Every Month



ಶ್ರೀ ಗೋವಿಂದರಾಜ ಸ್ವಾಮಿಯವರ
ಬ್ರಹ್ಮೋತ್ಸವಗಳು
(05-06-2022 ರಿಂದ 13-06-2022 ರ ವರೆಗೆ)